ಕರ್ನಾಟಕ ವಿಧಾನಸಭೆ

ಸೋಮವಾರ 19ನೇ ಜುಲೈ 2004 ರಂದು

ಸದನವು ವಿಧಾನಸಭೆಯ

ಸಭಾಂಗಣದಲ್ಲಿ ಬೆಳಿಗ್ಗೆ 12 ಗಂಟೆ 30 ನಿಮಿಷಕ್ಕೆ ಸಮಾವೇಶಗೊಂಡಿತು

ಅಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಿದ್ದರು

ಅಧ್ಯಕ್ಷರು: ಈಗ ಆಯವ್ಯಯ ಮಂಡನೆ. ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರೂ ಆದ ಶ್ರೀ ಸಿದ್ದರಾಮಯ್ಯನವರು ಆಯವ್ಯಯವನ್ನು ಮಂಡಿಸುವುದು.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಮಾನ್ ಅಧ್ಯಕ್ಷರೇ, ಅವರು ಆಯವ್ಯಯ ಮಂಡಿಸುವುದನ್ನು ನಾನು ಸ್ವಾಗತಿಸುತ್ತೇನೆ. ಅದಕ್ಕೆ ನನ್ನದೇನೂ ತಕರಾರು ಇಲ್ಲ. ಆದರೆ ನಿನ್ನೆ ಅವರು ಸಾಮಾನ್ಯ ಕನಿಷ್ಟ ಕಾರ್ಯಕ್ರಮವನ್ನು ಪ್ರಕಟಣೆ ಮಾಡುವಾಗ....

ಗೊಂದಲ

ಅಧ್ಯಕ್ಷರು: ಹಿರಿಯ ಸದಸ್ಯರಾದ ಮಾನ್ಯ ವಾಟಾಳ್ ನಾಗರಾಜ್‌ರವರು ದಯಮಾಡಿ ತಮ್ಮ ಸ್ಥಾನದಲ್ಲಿ ಆಸೀನರಾಗಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಆಯವ್ಯಯ ಮಂಡನೆಯಾದ ಮೇಲೆ ತಮ್ಮ ಅಭಿಪ್ರಾಯಗಳನ್ನು ಹೇಳಲು ಅವಕಾಶ ಇದೆ. ದಯಮಾಡಿ ಸಹಕರಿಸಬೇಕು.

(ಗೊಂದಲ)

ಆಯವ್ಯಯ ಪತ್ರದ ಮಂಡನೆ, 2004-05

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿ ಹಾಗೂ ಹಣಕಾಸು ಸಚಿವರು): ಸನ್ಮಾನ್ಯ ಸಭಾಧ್ಯಕ್ಷರೇ,

1. ನಾನು ಕರ್ನಾಟಕ ಸರ್ಕಾರದ 2004-05ನೇ ಸಾಲಿನ ಆಯವ್ಯಯ ಪತ್ರವನ್ನು ಮಂಡಿಸುತ್ತಿದ್ದೇನೆ.

2. ಮಾನ್ಯರೆ, ಈ ಹಿಂದೆ 1995 ರಿಂದ 1999 ರವರೆಗಿನ ಅವಧಿಯಲ್ಲಿ ಸತತ ಐದು ಮುಂಗಡ ಪತ್ರಗಳನ್ನು ಮಂಡಿಸಿದ ಗೌರವ ನನ್ನದಾಗಿತ್ತು. ಈಗ ಎರಡನೇ ಅವಧಿಯಲ್ಲಿ ಉಪಮುಖ್ಯಮಂತ್ರಿ ಮತ್ತು ಹಣಕಾಸು ಸಚಿವನಾಗಿ ನನ್ನ ಪ್ರಥಮ ಮುಂಗಡ ಪತ್ರವನ್ನು ಮಂಡಿಸಲು ನಾನು ಮತ್ತೊಮ್ಮೆ ನಿಮ್ಮ ಮುಂದೆ ನಿಂತಿದ್ದೇನೆ. ಈ ಸುಯೋಗವನ್ನು ಒದಗಿಸಿಕೊಟ್ಟಿರುವ ರಾಜ್ಯದ ಜನತೆಗೆ ನನ್ನ ಹೃದಯಾಂತರಾಳದ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

3. ಇತ್ತೀಚಿನ ವಿಧಾನಸಭಾ ಚುನಾವಣೆಗಳಲ್ಲಿ ಕರ್ನಾಟಕದ ಜನತೆ ಬದಲಾವಣೆಯನ್ನು ಬಯಸಿ ಮತ ಚಲಾಯಿಸಿದ್ದಾರೆ. ಆದರೆ ಜನತೆಯು ಯಾವುದೇ ಪಕ್ಷಕ್ಕೂ ಸ್ಪಷ್ಟ ಬಹುಮತ ನೀಡಿಲ್ಲ. ಹೀಗಾಗಿ ಕರ್ನಾಟಕದ ಇತಿಹಾಸದಲ್ಲಿ ಪ್ರಪ್ರಥಮ ಬಾರಿಗೆ ಕಾಂಗ್ರೆಸ್ ಮತ್ತು ಜಾತ್ಯಾತೀತ ಜನತಾದಳ ಪಕ್ಷಗಳ ಸಮ್ಮಿಶ್ರ ಸರ್ಕಾರ ಅನಿವಾರ್ಯವಾಗಿದೆ.

4. **ಜಾತ್ಯಾತೀತ ಶಕ್ತಿಗಳ ವಿಜಯದ ಸಂಕೇತವಾಗಿ ಹೊರ ಹೊಮ್ಮಿರುವ ಈ ಸಮ್ಮಿಶ್ರ ಸರ್ಕಾರದ ಮುಖ್ಯ ಗುರಿ ಜನತೆಯ ಕಲ್ಯಾಣವೇ ಆಗಿದೆ.** ಈ ನಿಟ್ಟಿನಲ್ಲಿ ನಾವು ಜನತೆಯ ಆಶೋತ್ತರಗಳನ್ನು ಈಡೇರಿಸಲು ಹಾಗೂ ಸಮರ್ಥ, ಉತ್ತಮ ಮತ್ತು ಜನಪರ ಆಡಳಿತವನ್ನು ನೀಡಲು ಮುಂದಿನ ಐದು ವರ್ಷಗಳಲ್ಲಿ ಶಕ್ತಿಮೀರಿ ಶ್ರಮಿಸುತ್ತೇವೆ.

5. ಸಮ್ಮಿಶ್ರ ಸರ್ಕಾರದ ಉಭಯ ಪಕ್ಷಗಳು ರಾಜ್ಯದ ಜನತೆಗೆ ನೀಡಿರುವ ವಚನಗಳನ್ನು ಸಾಮಾನ್ಯ ಕನಿಷ್ಠ ಕಾರ್ಯಕ್ರಮದಲ್ಲಿ ಅಳವಡಿಸಿದ್ದು ಸರ್ಕಾರವು ಇವುಗಳನ್ನು ಮುಂದಿನ ಐದು ವರ್ಷಗಳಲ್ಲಿ ಹಂತ ಹಂತವಾಗಿ ಅನುಷ್ಠಾನಗೊಳಿಸುತ್ತದೆ. ಸಮ್ಮಿಶ್ರ ಸರ್ಕಾರದ ಉಭಯ ಪಕ್ಷಗಳಲ್ಲಿ ಪ್ರಥಮ ಆದ್ಯತೆ ಹೊಂದಿರುವ ಕಾರ್ಯಕ್ರಮಗಳಿಗೆ ಮೊದಲ ವರ್ಷದಲ್ಲಿ ಹೆಚ್ಚು ಒತ್ತು ನೀಡಲಾಗಿದೆ. ಒಟ್ಟಾರೆಯಾಗಿ ಈ ಆಯವ್ಯಯವು ಸಾಮಾನ್ಯ ಕನಿಷ್ಠ ಕಾರ್ಯಕ್ರಮದ ಆದ್ಯತೆಗಳನ್ನು ಪ್ರತಿಬಿಂಬಿಸಲಿದೆ.

ರಾಜ್ಯದ ಹಣಕಾಸು ಪರಿಸ್ಥಿತಿ

6. ಕರ್ನಾಟಕದ ವಾಸ್ತವಿಕ ಬೆಳವಣಿಗೆ ದರವು 90ರ ದಶಕದಲ್ಲಿ ಮೂರು ಪ್ರಮುಖ ವಲಯಗಳಿಗೆ ಸಂಬಂಧಿಸಿದಂತೆ ಸತತವಾಗಿ ರಾಷ್ಟ್ರೀಯ ಸರಾಸರಿ ದರಕ್ಕಿಂತ ಹೆಚ್ಚಾಗಿತ್ತು. ಆದರೆ ಈ ಸಹಸ್ರಮಾನದ ಆರಂಭದಲ್ಲಿ ಈ ಬೆಳವಣಿಗೆಗೆ ಹಿನ್ನಡೆ ಉಂಟಾಗಿದೆ. ಸತತವಾಗಿ ಬಂದೆರಗಿದ ಮೂರು ಬರಗಾಲಗಳು ರಾಜ್ಯದ ಕೃಷಿ ಕ್ಷೇತ್ರಕ್ಕೆ ಉಂಟು ಮಾಡಿದ ತೀವ್ರ ಹಾನಿಯೇ ಈ ಹಿನ್ನೆಡೆಗೆ ಪ್ರಮುಖ ಕಾರಣವಾಗಿದೆ.

7. ಕರ್ನಾಟಕದಲ್ಲಿ 90 ರ ದಶಕದ ಅಂತ್ಯದಲ್ಲಿ ಜಿಎಸ್‌ಡಿಪಿಯ ಸರಾಸರಿ ಬೆಳವಣಿಗೆಯು ಪ್ರಾಥಮಿಕ ವಲಯದಲ್ಲಿ ಶೇಕಡ 5.2 ಮತ್ತು ದ್ವಿತೀಯ ವಲಯದಲ್ಲಿ ಶೇಕಡ 8.6 ಮತ್ತು ತೃತೀಯ ವಲಯದಲ್ಲಿ ಶೇಕಡ 10 ರಷ್ಟಿತ್ತು. ಈ ದಶಕದ ಮೊದಲ ನಾಲ್ಕು ವರ್ಷಗಳಲ್ಲಿ ಸರಾಸರಿ ಬೆಳವಣಿಗೆಯು ಪ್ರಾಥಮಿಕ ವಲಯದಲ್ಲಿ ಶೇಕಡ (-)3.6, ದ್ವಿತೀಯ ವಲಯದಲ್ಲಿ ಶೇಕಡ 6 ಮತ್ತು ತೃತೀಯ ವಲಯದಲ್ಲಿ ಶೇಕಡ 8.8 ರಷ್ಟಿತ್ತು. 90ರ ದಶಕದ ಎರಡನೇ ಭಾಗದಲ್ಲಿ ಜಿಎಸ್‌ಡಿಪಿಯ ಒಟ್ಟಾರೆ ಸರಾಸರಿ ವಾಸ್ತವಿಕ ಬೆಳವಣಿಗೆಯು ಕ್ರಮವಾಗಿ ಶೇಕಡ 8 ರಷ್ಟು ಮತ್ತು ಇದೇ ದಶಕದ ಆರಂಭದ ವರ್ಷಗಳಲ್ಲಿ ಶೇಕಡ 4.7 ರಷ್ಟಿತ್ತು.

8. ಕರ್ನಾಟಕದಲ್ಲಿ ಹಣದುಬ್ಬರವು ರಾಷ್ಟ್ರೀಯ ಸರಾಸರಿಗಿಂತ ಕಡಿಮೆಯಿದೆ. ಹಣದುಬ್ಬರವು ವಿಶೇಷವಾಗಿ ಈ ದಶಕದ ಮೊದಲ ನಾಲ್ಕು ವರ್ಷಗಳ ಅವಧಿಯಲ್ಲಿ ಕುಸಿದಿದೆ. 1993-94 ರಿಂದ 1999-2000 ರ ವರೆಗಿನ ಅವಧಿಯಲ್ಲಿ ಹಣದುಬ್ಬರದ ಸರಾಸರಿ ದರವು ಸುಮಾರು ಶೇಕಡ 7 ರಷ್ಟಿತ್ತು. 2000-01 ರಿಂದ 2003-04 ರ ಅವಧಿಯಲ್ಲಿ ಇದು ಸುಮಾರು ಶೇಕಡ 3.5 ರಷ್ಟಾಗಿತ್ತು.

9. ಆದ್ದರಿಂದ ನಮ್ಮ ಆರ್ಥಿಕ ಮುನ್ನೋಟವು ಆಶಾದಾಯಕವಾಗಿರುವುದರ ಜೊತೆಗೆ ವಿತ್ತೀಯ ಜಾಗರೂಕತೆಯನ್ನು ಹೊಂದಿರಬೇಕು. ಕೃಷಿ ವಲಯವನ್ನು ಬರಗಾಲದ ಪ್ರತಿಕೂಲ ಪರಿಣಾಮಗಳಿಂದ ಸಂರಕ್ಷಿಸಿ, ನೀರಾವರಿ ಮೂಲಸೌಕರ್ಯಗಳನ್ನು ಬೆಳೆಸಿ, ರಾಜ್ಯದ

ಆರ್ಥಿಕತೆಯನ್ನು ಉತ್ತಮ ರೀತಿಯಲ್ಲಿ ನಿರ್ವಹಿಸಿದರೆ ಅಲ್ಪ ಹಣದುಬ್ಬರದೊಂದಿಗೆ ನಾವು ಶೇಕಡ 8 ರ ಸರಾಸರಿ ವಾಸ್ತವಿಕ ಬೆಳವಣಿಗೆಯನ್ನು ಸಾಧಿಸಬಹುದು.

ಕೇಂದ್ರ ಮುಂಗಡ ಪತ್ರ ಮತ್ತು ರಾಜ್ಯ

10. ಕೇಂದ್ರದ ನೂತನ ಸರ್ಕಾರ ಮಂಡಿಸಿರುವ ಮುಂಗಡ ಪತ್ರವು ನನ್ನನ್ನು ನಿರಾಶೆಗೊಳಿಸಿಲ್ಲ. ಆದರೆ ಕೇಂದ್ರ ಸರ್ಕಾರವು ಮತ್ತಷ್ಟು ನೆರವನ್ನು ನೀಡಬಹುದಾಗಿತ್ತು. ಏಕೆಂದರೆ ನಮಗೆ ನೆರವಿನ ಅಗತ್ಯ ಕೂಡ ಇದೆ.

11. ಶಿಕ್ಷಣ ಮತ್ತು ಗ್ರಾಮೀಣ ಮೂಲಸೌಕರ್ಯಗಳಿಗೆ ಕೇಂದ್ರ ಮುಂಗಡ ಪತ್ರದಲ್ಲಿ ನೀಡಿರುವ ಪ್ರಾಮುಖ್ಯತೆಯನ್ನು ನಾನು ಸ್ವಾಗತಿಸುತ್ತೇನೆ. ಆರ್‌ಐಡಿಎಫ್ ಯೋಜನೆಯನ್ನು ಮರಳಿ ತಂದಿರುವುದು ನನಗೆ ಸಂತಸ ತಂದಿದೆ. ಈ ಯೋಜನೆಯ ಮೂಲಕ ಕರ್ನಾಟಕಕ್ಕೆ ಹೆಚ್ಚಿನ ಹಂಚಿಕೆ ಮತ್ತು ಜಲಾನಯನ ಯೋಜನೆಗಳಿಗೆ ವಿಶೇಷ ಸಹಾಯ ದೊರಕುತ್ತದೆ ಎನ್ನುವುದು ನನ್ನ ನಿರೀಕ್ಷೆ. ರೈತರ ಜಮೀನಿನ ಹಂತದಲ್ಲಿ ಬರ ತಡೆಗಟ್ಟುವ ಕೇಂದ್ರ ಸರ್ಕಾರದ ಪ್ರಾಯೋಗಿಕ ಯೋಜನೆಯು ಕರ್ನಾಟಕದ ಬಹು ದಿನಗಳ ಬೇಡಿಕೆಯನ್ನು ಈಡೇರಿಸಿದೆ. ಶಿಕ್ಷಣ ವಲಯದ ಅಭಿವೃದ್ಧಿಗಾಗಿ ಕೇಂದ್ರವು ವಿಧಿಸಿರುವ ಕರವನ್ನು ನಾನು ಸ್ವಾಗತಿಸುತ್ತೇನೆ. ಆದರೆ ಈ ಹಿಂದೆ ಶಿಕ್ಷಣ ವಲಯಕ್ಕೆ ನೀಡಿದ್ದ ಹಂಚಿಕೆಯನ್ನು ಕಾಪಾಡದೇ ಇರುವುದು ನನಗೆ ಕೊಂಚ ನಿರಾಶೆ ತಂದಿದೆ. ಮಧ್ಯಾಹ್ನದ ಬಿಸಿಯೂಟ ಕಾರ್ಯಕ್ರಮಕ್ಕೆ ಇದು ಧಕ್ಕೆ ತರುವುದಿಲ್ಲ ಎಂದು ನಾನು ಭಾವಿಸುತ್ತೇನೆ.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಸದನದ ಬಾವಿಯಲ್ಲಿ ಧರಣಿ ನಿರತರಾದರು)

12. ಸೇವೆಗಳ ಮೇಲಿನ ತೆರಿಗೆ ಸಂಗ್ರಹಣೆಯು ಭವಿಷ್ಯದಲ್ಲಿ ಹೆಚ್ಚು ಸಂಗ್ರಹಣಾ ಸಾಮರ್ಥ್ಯ ಹೊಂದಿರುವ ತೆರಿಗೆಯಾಗಿದೆ. ಆದ್ದರಿಂದ ಅಂತರರಾಜ್ಯ ಗುಣಲಕ್ಷಣ ಹೊಂದಿರುವ ಮತ್ತು ವಿನಾಯಿತಿ ಸ್ವರೂಪದ ಕೆಲವು ಸೇವೆಗಳನ್ನು ಹೊರತುಪಡಿಸಿ ಸೇವಾ ತೆರಿಗೆಗಳನ್ನು ವಿಧಿಸುವ ಮತ್ತು ವಸೂಲಿ ಮಾಡುವ ಅಧಿಕಾರವನ್ನು ರಾಜ್ಯಗಳಿಗೆ ವರ್ಗಾಯಿಸಬೇಕು. ರಾಜ್ಯಗಳ ಈ ಪ್ರಮುಖ ಬೇಡಿಕೆಯನ್ನು ಕೇಂದ್ರವು ಈಡೇರಿಸುತ್ತದೆ ಎಂದು ನಾನು ಭಾವಿಸುತ್ತೇನೆ. ಹಾಗೆಯೇ, ಹಂಚಿಕೊಳ್ಳುವ ನಿಧಿಯಲ್ಲಿನ ರಾಜ್ಯಗಳ ಪಾಲನ್ನು ಹೆಚ್ಚಿಸಬೇಕೆಂದು ಸಹ ನಾನು ಕೇಂದ್ರವನ್ನು ಒತ್ತಾಯಿಸುತ್ತೇನೆ.

13. ಕೇಂದ್ರ ಸರ್ಕಾರದ ಬ್ಲಾಕ್ ಲೋನ್ ಮೇಲಿನ ಬಡ್ಡಿ ದರವನ್ನು ಶೇಕಡ 9ಕ್ಕೆ ಇಳಿಸುವ ಕೇಂದ್ರದ ಘೋಷಣೆ ಸ್ವಾಗತಾರ್ಹವಾಗಿದೆ. ಕೇಂದ್ರವು ನೀಡುತ್ತಿರುವ 70:30 ರ ಅನುಪಾತದ ಸಾಲ ಮತ್ತು ಅನುದಾನದ ಅನುಪಾತವು ಈ ಹಿಂದೆ ಶೇಕಡ 70 ರಷ್ಟು ಭಾಗವನ್ನು ಬಂಡವಾಳಕ್ಕೆ ಉಪಯೋಗಿಸಿದಾಗ ಸರಿಹೋಗುತ್ತಿತ್ತು. ಆದರೆ ಈಗ ಆ ಪರಿಸ್ಥಿತಿ ಇಲ್ಲ. ಆದ್ದರಿಂದ ಕೇಂದ್ರವು 50:50 ರ ಅನುಪಾತಕ್ಕೆ ತನ್ನ ನೀತಿಯನ್ನು ಪುನರ್ ಪರಿಷ್ಕರಿಸುವುದು ಅತ್ಯಗತ್ಯವಾಗಿದೆ. ಅಲ್ಲದೆ, ಪ್ರಸ್ತುತ ಬಾಕಿ ಉಳಿದಿರುವ ಬ್ಲಾಕ್ ಸಾಲದ ಮೇಲಿನ ಬಡ್ಡಿಯನ್ನು ಈಗಿನ ಮಾರುಕಟ್ಟೆ ದರದಲ್ಲಿ ಪಾವತಿಸುವಂತೆ, ಪೂರ್ಣವಾಗಿ ಪುನರ್‌ಪರಿಷ್ಕರಿಸುವುದು ನ್ಯಾಯಯುತವಾಗಿದೆ.

14. ಎಲ್‌ಐಸಿ, ಜಿಐಸಿ ಮತ್ತು ಎನ್‌ಸಿಡಿಸಿ ಸಂಸ್ಥೆಗಳ ಮೂಲಕ ಕೇಂದ್ರ ಸರ್ಕಾರವು ರಾಜ್ಯಗಳಿಗೆ ನೀಡಿರುವ ಸಾಲಗಳು ಮತ್ತೊಂದು ಚಿಂತಿಸುವ ವಿಷಯವಾಗಿದೆ. ಈ ಸಂಸ್ಥೆಗಳು ಮಾರುಕಟ್ಟೆಯಲ್ಲಿರುವ ಕಡಿಮೆ ಬಡ್ಡಿ ದರದ ಅನುಕೂಲವನ್ನು ರಾಜ್ಯಗಳಿಗೆ ನೀಡಲು ವಿಫಲವಾಗಿವೆ. ಕೆಲವು ಹಳೆಯ ಸಾಲಗಳಿಗೆ ಶೇಕಡ 14 ರಿಂದ 15 ರವರೆಗಿನ ಬಡ್ಡಿ ದರಗಳಿವೆ. ಆದ್ದರಿಂದ ಈ ಸಾಲಗಳ ಪೂರ್ವಪಾವತಿಗೆ ಅವಕಾಶ ಕಲ್ಪಿಸಬೇಕೆಂದು ನಾನು ಕೇಂದ್ರವನ್ನು ಒತ್ತಾಯಿಸುತ್ತೇನೆ.

ರಾಜ್ಯದ ಆರ್ಥಿಕತೆ - ಒಂದು ಸಂಕ್ಷಿಪ್ತ ಪಕ್ಷಿನೋಟ:

15. ಕಳೆದ ಐದು ವರ್ಷಗಳಲ್ಲಿ ರಾಜ್ಯದಲ್ಲಿ ಮತ್ತು ರಾಜ್ಯದ ಆರ್ಥಿಕ ಸ್ಥಿತಿಗತಿಗಳಲ್ಲಿ ಸಾಕಷ್ಟು ಬದಲಾವಣೆಗಳಾಗಿವೆ. ಐದು ವರ್ಷಗಳ ಹಿಂದೆ ನಾವು ಎದುರಿಸಿದ ಸವಾಲುಗಳು ಈಗ ಹೊಸ ಸ್ವರೂಪ ಮತ್ತು ಗಂಭೀರತೆ ಪಡೆದಿವೆ. ಭಾರತದ ಬಹುತೇಕ ರಾಜ್ಯಗಳ ಆರ್ಥಿಕ ಪರಿಸ್ಥಿತಿ ಹದಗೆಟ್ಟಿದೆ. ಇದಕ್ಕೆ ಕರ್ನಾಟಕವೂ ಹೊರತಾಗಿಲ್ಲ. ರಾಜ್ಯದ ಆರ್ಥಿಕ ಪರಿಸ್ಥಿತಿಯೂ ಸಹ ತೀವ್ರ ಒತ್ತಡಕ್ಕೆ ಸಿಲುಕಿದೆ. ಇದನ್ನು ನಾವು ಸಮರ್ಥವಾಗಿ ಎದುರಿಸಲೇಬೇಕು. ರಾಜ್ಯದ ಅಭಿವೃದ್ಧಿಗಾಗಿ ಆರ್ಥಿಕ ದೃಢತೆ ಸಾಧಿಸುವುದು ಅನಿವಾರ್ಯವಾಗಿದೆ.

16. ನಾನೀಗ ರಾಜ್ಯದ ಸಂಕ್ಷಿಪ್ತ ಆರ್ಥಿಕ ನೋಟವನ್ನು ಕರ್ನಾಟಕದ ಜನತೆಯ ಮುಂದಿಡಲು ಇಚ್ಛಿಸುತ್ತಿದ್ದೇನೆ. 1998-99 ಮತ್ತು 2003-04ನೇ ಸಾಲಿನ ಅಂತ್ಯಕ್ಕೆ ಸಂಬಂಧಿಸಿದ ಕೆಲವು ಮೂಲ ವಿತ್ತೀಯ ಸೂಚಕಗಳ ಹೋಲಿಕೆಯನ್ನು ನೋಡಿದರೆ ರಾಜ್ಯದ ಆರ್ಥಿಕ ದೃಢತೆಗೆ ಧಕ್ಕೆಯಾಗಿರುವುದು ಕಂಡುಬರುತ್ತಿದೆ.

17. ಸರ್ಕಾರ ಪಾವತಿಸಬೇಕಾಗಿರುವ ಸಾಲದ ಮೊತ್ತವು 12,465 ಕೋಟಿ ರೂಗಳಿಂದ 30,188 ಕೋಟಿ ರೂ.ಗಳಿಗೆ ಏರಿಕೆಯಾಗಿದೆ. ವಿಶೇಷ ಉದ್ದೇಶವಾಹಿನಿಗಳ ಒಟ್ಟಾರೆ ಹೊಣೆಗಾರಿಕೆಗಳು 2,146 ಕೋಟಿ ರೂ.ಗಳಿಂದ 7,082 ಕೋಟಿ ರೂ.ಗಳಿಗೆ ಏರಿದೆ. ಆದ್ದರಿಂದ ಭವಿಷ್ಯದ ನಮ್ಮ ಎತ್ತುವಳಿಗಳು ಸಾಲದ ಲಭ್ಯತೆಗಿಂತ ಹೆಚ್ಚಾಗಿ ನಮ್ಮ ಸಾಲ ಮರುಪಾವತಿ ಸಾಮರ್ಥ್ಯವನ್ನು ಆಧರಿಸಬೇಕಾಗಿದೆ.

18. ರಾಜ್ಯದ ಅಭಿವೃದ್ಧಿಯೇತರ ವೆಚ್ಚವು[1] 1998-99ನೇ ಸಾಲಿನಲ್ಲಿದ್ದ 8,280 ಕೋಟಿ ರೂ.ಗಳಿಂದ 2003-04 ರಲ್ಲಿ 14,700 ಕೋಟಿ ರೂಗಳಿಗೆ ಏರಿಕೆಯಾಗಿದೆ. 1998-99 ರಲ್ಲಿ ವೇತನ ಮತ್ತು ಪಿಂಚಣಿಗಳ ಮೇಲಿದ್ದ 4,900 ಕೋಟಿ ರೂಗಳ ವೆಚ್ಚವು 2003-04 ರಲ್ಲಿ 8,700 ಕೋಟಿ ರೂಗಳಿಗೆ ಹೆಚ್ಚಿದ್ದು, ಇದು ಶೇಕಡ 77.6 ರಷ್ಟು ಏರಿಕೆಯಾಗಿದೆ. ಪ್ರಸ್ತುತ ರಾಜ್ಯದ ಅಭಿವೃದ್ಧಿಯೇತರ ವೆಚ್ಚವು ಶೇಕಡಾ 75 ರಷ್ಟು ಇದ್ದು, ರಾಜ್ಯದ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಕೇವಲ ಶೇಕಡಾ 25 ರಷ್ಟು ಮಾತ್ರ ದೊರೆಯುತ್ತಿದೆ. ನಾವೀಗ ತುರ್ತು ಕಠಿಣ ನಿರ್ಧಾರಗಳನ್ನು ಕೈಗೊಳ್ಳದಿದ್ದರೆ ಸರ್ಕಾರವು ವೇತನ, ಪಿಂಚಣಿ, ಸಾಲದ ಮೇಲಿನ ಬಡ್ಡಿ ಇವುಗಳ ಪಾವತಿಯನ್ನು ಬಿಟ್ಟು ಹೆಚ್ಚಿನದೇನನ್ನೂ ಮಾಡದಂತಹ ಪರಿಸ್ಥಿತಿಯನ್ನು ಎದುರಿಸಬೇಕಾಗುತ್ತದೆ.

---

1. ವೇತನ, ಪಿಂಚಣಿ, ಬಡ್ಡಿ ಪಾವತಿ ಮತ್ತು ಸಹಾಯ ಧನಗಳು.

19. ಇವುಗಳ ಜೊತೆಗೆ, ರಾಜ್ಯದ ಒಟ್ಟಾರೆ ವೆಚ್ಚದಲ್ಲಿ ಅಭಿವೃದ್ಧಿ ವೆಚ್ಚದ ಪ್ರಮಾಣ 1998-99 ರಲ್ಲಿದ್ದ ಶೇಕಡಾ 67.6 ರಿಂದ 2003-04 ರಲ್ಲಿ ಶೇಕಡಾ 59.7 ಕ್ಕೆ ಇಳಿಕೆಯಾಗಿದೆ. ಬಡಜನತೆಯ ಜೀವನ ಮಟ್ಟ ಸುಧಾರಿಸಲು ಮತ್ತು ಸಾಮಾಜಿಕ ನ್ಯಾಯದ ಜೊತೆ ಜೊತೆಗೆ ಆರ್ಥಿಕ ಬೆಳವಣಿಗೆಗೆ ಉತ್ತೇಜನ ನೀಡಲು ಪ್ರಮುಖ ಸಾಮಾಜಿಕ ವಲಯಗಳಲ್ಲಿ ಸಾರ್ವಜನಿಕ ಹೂಡಿಕೆಯನ್ನು ಹೆಚ್ಚಿಸುವುದು ಈಗ ಅತ್ಯಗತ್ಯವಾಗಿದೆ.

20. ರಾಜ್ಯದ ಆರ್ಥಿಕ ಪರಿಸ್ಥಿತಿಯ ಈ ಬದಲಾವಣೆ ಗಂಭೀರ ಸಂಗತಿಯಾಗಿದ್ದು ವಿತ್ತೀಯ ಕೊರತೆಯಲ್ಲಿ ಇದು ಬಿಂಬಿತವಾಗಿದೆ. ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಜೊತೆಗಿನ ಶೇಕಡಾವಾರು ಲೆಕ್ಕಾಚಾರದಲ್ಲಿ ರಾಜ್ಯದ ವಿತ್ತೀಯ ಕೊರತೆಯು 1998-99 ರಲ್ಲಿದ್ದ ಶೇಕಡಾ 3.54 ರಿಂದ 2003-04 ರಲ್ಲಿ ಶೇಕಡಾ 4.26ಕ್ಕೆ ಏರಿಕೆಯಾಗಿದೆ. ರಾಜಸ್ವ ಕೊರತೆಯನ್ನು ನಿಯಂತ್ರಿಸುವ ನಮ್ಮ ಪ್ರಯತ್ನಗಳು ಮಿಶ್ರಫಲ ನೀಡಿವೆ. ಈ ಹಿಂದೆ ಕೆಲವು ವರ್ಷಗಳಲ್ಲಿ ಮಾತ್ರ ನಾವು ರಾಜಸ್ವ ಕೊರತೆಯನ್ನು ಕೆಳಮಟ್ಟಕ್ಕೆ ತರಲು ಸಮರ್ಥರಾಗಿದ್ದೆವು. ಇದೀಗ ವಿತ್ತೀಯ ದೃಢತೆಯನ್ನು ಸಾಧಿಸುವ ಹಾದಿಯಲ್ಲಿ ನಿರಂತರ ಪ್ರಯತ್ನ ನಮ್ಮ ಗುರಿಯಾಗಬೇಕು.

21. ರಾಜ್ಯದ ಒಟ್ಟಾರೆ ಅಭಿವೃದ್ಧಿಗೆ ಧಕ್ಕೆ ತಂದಿರುವ ಅಂಶಗಳೆಂದರೆ; ಮುಖ್ಯವಾಗಿ ಆಯವ್ಯಯೇತರ ಎತ್ತುವಳಿಗಳು; ನಿಯಂತ್ರಿಸದಿರುವ ಆಡಳಿತ ಮತ್ತು ಸಿಬ್ಬಂದಿ ವೆಚ್ಚಗಳು, ಸೂಕ್ತ ಗುರಿಯಿಲ್ಲದ ಸಹಾಯಧನಗಳು, ಕಾಲಮಿತಿ ಮತ್ತು ಮಿತಿ ಮೀರಿದ ನಿರ್ಮಾಣ ವೆಚ್ಚಗಳ ಕಾರಣಗಳಿಂದ ಉಬ್ಬರಗೊಂಡಿರುವ ಯೋಜನಾವೆಚ್ಚಗಳು ಮತ್ತು ತೆರಿಗೆ ಹಾಗೂ ತೆರಿಗೆಯೇತರ ರಾಜಸ್ವ ಸಂಗ್ರಹದಲ್ಲಿ ಕುಸಿತ ಮತ್ತು ಬಳಕೆದಾರರ ಶುಲ್ಕ ವಸೂಲಿಯಲ್ಲಿ ಗಣನೀಯ ಸೋರಿಕೆ. ಇವುಗಳ ಜೊತೆಗೆ ಮೂರು ವರ್ಷದ ಸತತ ಬರಗಾಲಗಳು ಸೇರಿವೆ. ಇವೆಲ್ಲವೂ ಈಗ ಗಂಭೀರ ಪರಿಣಾಮಗಳಿಗೆ ಎಡೆಮಾಡಿವೆ. ಇವೆಲ್ಲದರ ಪರಿಣಾಮದಿಂದಾಗಿ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕದಲ್ಲಿ ಜನರ ಜೀವನ ಗುಣಮಟ್ಟ ಇಳಿಮುಖವಾಗಿದೆ. ಗ್ರಾಮೀಣ ಕರ್ನಾಟಕಕ್ಕೆ ಸಂಬಂಧಿಸಿದಂತೆ ಇದು ಇನ್ನೂ ಕೆಳಮುಖವಾಗಿದ್ದು, ಕಡುಬಡವರು ಹಾಗೂ ಸಾಮಾಜಿಕವಾಗಿ ಹಿಂದುಳಿದವರು ಮತ್ತಷ್ಟು ಹೆಚ್ಚಿನ ತೊಂದರೆಗೆ ಒಳಗಾಗಿದ್ದಾರೆ.

ಕರ್ನಾಟಕ ಮತ್ತು ಮಾನವ ಅಭಿವೃದ್ಧಿ ಸೂಚ್ಯಂಕ:

22. ಮಾನವ ಅಭಿವೃದ್ಧಿ ಸೂಚ್ಯಂಕದ ನೆಲೆಗಟ್ಟಿನಲ್ಲಿ ಮೊದಲ ಹನ್ನೆರಡು ರಾಜ್ಯಗಳ ಪಟ್ಟಿಯಲ್ಲಿ ಆರನೇ ಸ್ಥಾನದಲ್ಲಿದ್ದ ಕರ್ನಾಟಕವು ಏಳನೇ ಸ್ಥಾನಕ್ಕೆ ಇಳಿದಿದೆ. ಈ ಪ್ರವೃತ್ತಿಯನ್ನು ನಾವು ಹಿಮ್ಮುಖಗೊಳಿಸಬೇಕಿದೆ. ಅಭಿವೃದ್ಧಿ ಸೂಚ್ಯಂಕದ ಮಾನದಂಡದಲ್ಲಿ ಇಂದು ಕರ್ನಾಟಕವು ಅಖಿಲ ಭಾರತ ಸರಾಸರಿಗಿಂತ ಕೊಂಚ ಮಾತ್ರ ಮೇಲಿದೆ. ಮಾನವ ಬಡತನ ನಿವಾರಣೆಯ ಒಡಂಬಡಿಕೆ ಮಾಡಿಕೊಂಡಿರುವ ರಾಷ್ಟ್ರಗಳು ಕರ್ನಾಟಕಕ್ಕೆ ನಿಗದಿಪಡಿಸಿರುವ ಸಹಸ್ರಮಾನದ ಅಭಿವೃದ್ಧಿ ಗುರಿಗಳನ್ನು ತಲುಪಲು ಮುಂದಿನ ಐದು ವರ್ಷಗಳಲ್ಲಿ ಸೂಕ್ತ ವಾತಾವರಣ ರೂಪಿಸುವುದು ನನ್ನ ಪ್ರಮುಖ ಉದ್ದೇಶವಾಗಿದೆ.

23. ಈ ಕಾರ್ಯವನ್ನು ಕೇವಲ ಒಂದು ಮುಂಗಡ ಪತ್ರದಲ್ಲಿ ಸಾಧಿಸಲು ಸಾಧ್ಯವಿಲ್ಲ. ಈಗಾಗಲೇ ಪ್ರಸಕ್ತ ವರ್ಷದ ನಾಲ್ಕು ತಿಂಗಳು ಕಳೆದುಹೋಗಿವೆ. ಆದ್ದರಿಂದ ನನ್ನ ಮುಂಗಡ ಪತ್ರದ ಪ್ರಸ್ತಾವನೆಗಳು ವರ್ಷದ ಇನ್ನುಳಿದ ಭಾಗಕ್ಕೆ ಮಾತ್ರ ಸೀಮಿತಗೊಂಡಿರುತ್ತವೆ. ಈ ನಿರ್ಬಂಧಗಳ ಅಡಿಯಲ್ಲಿ ನಾನು ಈ ಮುಂಗಡ ಪತ್ರವನ್ನು ಮಂಡಿಸುತ್ತಿದ್ದೇನೆ.

ವಿತ್ತೀಯ ರೂಪು ರೇಷೆಗಳು:

24. ನನ್ನ ದೃಷ್ಟಿಯಲ್ಲಿ ವಿತ್ತೀಯ ನೀತಿಯು ತ್ವರಿತವಾದ ಸಮಾನ ಆರ್ಥಿಕ ಬೆಳವಣಿಗೆಯೊಂದಿಗೆ ಏಳು ಪ್ರಧಾನ ಅಂಶಗಳನ್ನು ಒಳಗೊಂಡಿದೆ.

25. ಮೊದಲನೆಯದು; ತೆರಿಗೆ ಮತ್ತು ತೆರಿಗೆಯೇತರ ಸಂಪನ್ಮೂಲ ಸಂಗ್ರಹಣೆಯಲ್ಲಿ ಗಣನೀಯ ಹೆಚ್ಚಳದ ಸಾಧನೆ. ನಾಗರೀಕ ಸ್ನೇಹಿಯಾದ ಮತ್ತು ಬೆಳವಣಿಗೆ ಪೂರಕ ತೆರಿಗೆ ಪದ್ಧತಿಯ ಅನುಸರಣೆ, ರಾಜಸ್ವ ಸೋರಿಕೆ ನಿಯಂತ್ರಣಕ್ಕೆ ಕಠಿಣ ಕ್ರಮ ಹಾಗೂ ತೆರಿಗೆ ಆಡಳಿತದ ಸರಳೀಕರಣಗಳ ಮೂಲಕ ಸಂಪನ್ಮೂಲ ಹೆಚ್ಚಳವನ್ನು ಸಾಧಿಸಲಾಗುವುದು. ತೆರಿಗೆಯೇತರ ರಾಜಸ್ವವನ್ನು ಹೆಚ್ಚಿಸಲು ಕ್ರಿಯಾ ಯೋಜನೆಯನ್ನು ರೂಪಿಸಲಾಗುವುದು. ಇದರಲ್ಲಿ ದರಗಳ ಪರಿಷ್ಕರಣೆ, ಬಳಕೆದಾರರ ಶುಲ್ಕದ ವಿವೇಚಿತ ದರ ನಿಗದಿ, ಹೆಚ್ಚುವರಿ ಸಂಪನ್ಮೂಲ ಸಂಗ್ರಹಣೆಗೆ ಪ್ರೋತ್ಸಾಹಕ ಕೊಡುಗೆಗಳು, ಹಾಗೂ ರಾಜಸ್ವ ಸಂಗ್ರಹಣೆಯ ದಕ್ಷತೆಯ ಸುಧಾರಣೆ ಇವು ಸೇರಿವೆ.

26. ಎರಡನೆಯದು; ಅಭಿವೃದ್ಧಿಯೇತರ ವೆಚ್ಚದಲ್ಲಿ ಕಡಿತಕ್ಕೆ ಕ್ರಮ. ಸರ್ಕಾರಿ ಸಿಬ್ಬಂದಿ ಸಂಖ್ಯೆಯ ಸರಿಗಾತ್ರ, ಪಿಂಚಣಿಗಳ ಸುಧಾರಣೆ, ಆಡಳಿತ ವೆಚ್ಚದಲ್ಲಿ ಕಡಿತ, ಅನುದಾನ ಮತ್ತು ಸಹಾಯ ಧನಗಳ ನೀಡಿಕೆಯಲ್ಲಿ ವಿವೇಚನೆ ಮತ್ತು ಸಾಲ ಮರುಹೊಂದಾಣಿಕೆಯ ಮೂಲಕ ಬಡ್ಡಿ ವೆಚ್ಚದ ಇಳಿಕೆ, ಅನಗತ್ಯ ವೆಚ್ಚಗಳ ನಿಯಂತ್ರಣ ಇದರಲ್ಲಿ ಸೇರಿವೆ.

27. ಮೂರನೆಯದು; ಜೀವನ ಗುಣಮಟ್ಟ ಸುಧಾರಣೆಗೆ ಪೂರಕವಾಗಿ ಪ್ರಮುಖ ಸಾಮಾಜಿಕ ವಲಯಗಳಾದ ಪ್ರಾಥಮಿಕ ಶಿಕ್ಷಣ, ಪ್ರಾಥಮಿಕ ಆರೋಗ್ಯ, ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ, ಕುಡಿಯುವ ನೀರು, ಹಾಗೂ ದುರ್ಬಲ ವರ್ಗದವರ ಅಭಿವೃದ್ಧಿ ಮತ್ತು ರಕ್ಷಣೆಗೆ ಹೆಚ್ಚು ಅನುದಾನ ಒದಗಿಸುವುದಾಗಿದೆ. ಇನ್ನು ಮುಂದೆ ನಾವು ಸಂಪನ್ಮೂಲಗಳನ್ನು ಹಲವಾರು ಯೋಜನೆಗಳ ಮೇಲೆ ತೆಳುವಾಗಿ ಹರಡದೆ ಪುನರಾವರ್ತಿತ ಯೋಜನೆಗಳನ್ನು ನಿವಾರಿಸಿ ಫಲಿತಾಂಶ ಆಧಾರಿತ ಕಾರ್ಯಕ್ರಮಗಳಿಗೆ ಹೆಚ್ಚು ಸಂಪನ್ಮೂಲವನ್ನು ವಿನಿಯೋಗಿಸುತ್ತೇವೆ.

28. ನಾಲ್ಕನೆಯದು; ಎಲ್ಲಾ ವಲಯಗಳಲ್ಲೂ ಸಹಾಯಧನದ ಸೂಕ್ತ ನಿರ್ವಹಣೆಯನ್ನು ಖಚಿತಪಡಿಸುವುದು. ಸಹಾಯಧನದ ಅನುಕೂಲಗಳು ಉದ್ದೇಶಿತ ಫಲಾನುಭವಿಗಳಿಗೆ ತಲುಪುವಂತೆ ಸಹಾಯಧನಗಳನ್ನು ದಕ್ಷತೆಯಿಂದ ನಿರ್ವಹಿಸಬೇಕಾಗಿದೆ. ಈ ನಿಟ್ಟಿನಲ್ಲಿ ಸರ್ಕಾರವು ಸಹಾಯಧನ ಪಡೆಯುವ ಸಂಸ್ಥೆಗಳ ಜೊತೆ ಒಡಂಬಡಿಕೆ

ಮಾಡಿಕೊಂಡು ಅವರು ಒಪ್ಪಿಕೊಂಡಿರುವ ಮಾನದಂಡಗಳ ಸಾಧನೆಯನ್ನು ಆಧರಿಸಿ ಸಹಾಯಧನ ಬಿಡುಗಡೆ ಮಾಡಲಿದೆ. ಆಯವ್ಯಯದಿಂದ ಹೊರಗೆ ಎತ್ತುವಳಿ ಮಾಡುವ ವಿಶೇಷ ಉದ್ದೇಶವಾಹಿನಿಗಳು ಸಹ ಈ ವಿತ್ತೀಯ ಶಿಸ್ತಿಗೆ ಒಳಪಡಬೇಕು.

29. ಐದನೆಯದು; ಸಾರ್ವಜನಿಕ ವೆಚ್ಚಗಳ ಉತ್ಪಾದಕತೆಯಲ್ಲಿ ಸುಧಾರಣೆ. ಸರ್ಕಾರದ ಎಲ್ಲಾ ಕಾರ್ಯಕ್ರಮಗಳಲ್ಲಿ ಅಳತೆ ಮಾಡಬಹುದಾದ ಫಲಿತಾಂಶಗಳನ್ನು ಅಳವಡಿಸಿ ಸೂಕ್ತ ಉಸ್ತುವಾರಿ ನಡೆಸುವ ಮೂಲಕ ಇದನ್ನು ಸಾಧಿಸಲಾಗುವುದು. ಪ್ರಮುಖ ವಲಯಗಳಾದ ಪ್ರಾಥಮಿಕ ಶಿಕ್ಷಣ, ಪ್ರಾಥಮಿಕ ಆರೋಗ್ಯ, ಗ್ರಾಮೀಣ ರಸ್ತೆ, ಕುಡಿಯುವ ನೀರು, ವಿದ್ಯುತ್ ಉತ್ಪಾದನೆ ಮತ್ತು ಸಮಾಜ ಕಲ್ಯಾಣ ಇಲಾಖೆಗಳಲ್ಲಿ ಹಲವಾರು ವರ್ಷಗಳಿಂದ ಮಾಡಿರುವ ಸಾರ್ವಜನಿಕ ವೆಚ್ಚವು ಅತ್ಯಲ್ಪ ಪ್ರಮಾಣದ ಫಲಿತಾಂಶಗಳನ್ನು ನೀಡುತ್ತಿವೆ. ಆದ್ದರಿಂದ ಇನ್ನು ಮುಂದೆ ಸಾಮಾಜಿಕ ವಲಯಗಳಲ್ಲಿರುವ ಸಾರ್ವಜನಿಕರಿಗೆ ತಲುಪಿಸುವ ಸೇವೆಗಳು ಜವಾಬ್ದಾರಿಯುತವಾಗಿರುವಂತೆ ಮಾಡಲಾಗುವುದು. ಅಲ್ಲದೆ ಇದರ ಜೊತೆ ಜೊತೆಯಲ್ಲೇ ಇವುಗಳ ಸಾಮಾಜಿಕ ತಪಾಸಣೆಯನ್ನು ಸಹ ನಡೆಸಲಾಗುವುದು. ಖರ್ಚು ಮಾಡುವ ಹಣಕ್ಕೆ ಸೂಕ್ತವಾದ ಫಲಿತಾಂಶವನ್ನು ನೀಡದಿರುವ ಅಭಿವೃದ್ಧಿ ವೆಚ್ಚ ಮತ್ತು ಕಲ್ಯಾಣ ವೆಚ್ಚಗಳ ಉಸ್ತುವಾರಿ ವಹಿಸಿಕೊಂಡಿರುವ ಅಧಿಕಾರಿಗಳನ್ನು ಇದಕ್ಕೆ ಹೊಣೆಗಾರರನ್ನಾಗಿ ಮಾಡಲಾಗುವುದು.

30. ಆರನೆಯದು; ವಿತ್ತೀಯ ಹೊಣೆಗಾರಿಕೆಯನ್ನು ಖಚಿತಪಡಿಸುವುದು. ಮಧ್ಯಮಾವಧಿ ಆರ್ಥಿಕ ಯೋಜನೆಗೆ ಎಲ್ಲಾ ಇಲಾಖೆಗಳು ಕಟ್ಟುನಿಟ್ಟಾಗಿ ಬದ್ಧವಾಗಿರುವಂತೆ ಹಾಗೂ ಕರ್ನಾಟಕ ವಿತ್ತೀಯ ಹೊಣೆಗಾರಿಕೆ ಕಾಯಿದೆಯನ್ನು ಎಲ್ಲರೂ ಪಾಲಿಸುವಂತೆ ಕ್ರಮ ಕೈಗೊಳ್ಳಲಾಗುವುದು.

31. ಏಳನೆಯದು; ಸಂಪನ್ಮೂಲ ಸಂಗ್ರಹಣೆಯಲ್ಲಿ ಮತ್ತು ವೆಚ್ಚಗಳಲ್ಲಿ ಆದಾಯ ಸೋರಿಕೆ ತಡೆಗಟ್ಟಲು ಮತ್ತು ಭ್ರಷ್ಟಾಚಾರ ಹತ್ತಿಕ್ಕಲು ಅನುವಾಗುವಂತೆ ಆಡಳಿತ ಯಂತ್ರವನ್ನು ಜಾಗೃತಗೊಳಿಸಲಾಗುವುದು. ಸಿಬ್ಬಂದಿಗಳ ವರ್ಗಾವಣೆ ನೀತಿಯ ಪಾಲನೆ; ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮದ ಕಟ್ಟುನಿಟ್ಟಿನ ಜಾರಿ; ವಿದ್ಯುತ್ ವಲಯದಲ್ಲಿ ವಿದ್ಯುತ್ ಕಳವು ನಿರೋಧ ಕಾಯಿದೆಯ ಸಂಪೂರ್ಣ ಅನುಷ್ಠಾನ; ಮಾಹಿತಿ ಹಕ್ಕು ಅಧಿನಿಯಮದ ಅನುಷ್ಠಾನ ಮತ್ತು ಕರ್ನಾಟಕ ಸಾರ್ವಜನಿಕ ಹಣಕಾಸು ನಿರ್ವಹಣೆ ಮತ್ತು ದಾಯಿತ್ವ ಕ್ರಿಯಾ ಯೋಜನೆಗಳ ಅನುಷ್ಠಾನಗಳು ಇದರಲ್ಲಿ ಒಳಗೊಂಡಿವೆ.

ಬೆಳವಣಿಗೆ ಮತ್ತು ನ್ಯಾಯ ಸಮ್ಮತೆ

32. ತ್ವರಿತ ಆರ್ಥಿಕ ಬೆಳವಣಿಗೆಯಿಂದಲೇ ಬಡಜನತೆಯ ಜೀವನ ಗುಣಮಟ್ಟದ ಸುಧಾರಣೆ ಆಗಲಾರದೆಂಬುದು ಈಗಾಗಲೇ ಸಾಬೀತಾಗಿರುವ ಸಂಗತಿ. ಆರ್ಥಿಕ ಬೆಳವಣಿಗೆಯನ್ನು ಮಾರುಕಟ್ಟೆ ಶಕ್ತಿಗಳೇ ನಿರ್ಧರಿಸಲಿ ಎಂದು ಸರ್ಕಾರವು ಮಧ್ಯಪ್ರವೇಶಿಸಿದೇ ಸುಮ್ಮನಿದ್ದರೆ ಅವು ಬಹಳಷ್ಟು ಸಾರಿ ಬೃಹತ್ ಮರುಭೂಮಿಯಲ್ಲಿ ಸಮೃದ್ಧತೆಯ ಕೆಲವು ನಡುಗಡ್ಡೆಗಳನ್ನು ಮಾತ್ರ ಸೃಷ್ಟಿಸುತ್ತವೆ.

33. ಆದ್ದರಿಂದ ಈ ಆಯವ್ಯಯವು ಕರ್ನಾಟಕದ ಗ್ರಾಮೀಣ ಜನತೆಯ ಹಿತ ಸಂರಕ್ಷಿಸಲು ಹಾಗೂ ರಾಜ್ಯದ ಸಮಸ್ಯೆಗಳನ್ನು ಬಗೆಹರಿಸಲು ನಿರ್ಣಾಯಕ ಜನಪರ ನೀತಿಗಳ ಮೂಲಕ ವಿಶೇಷ ಗಮನ ಹರಿಸಲಿದೆ. ಈಗ ನಮ್ಮ ಅಭಿವೃದ್ಧಿ ಪರಿಕಲ್ಪನೆಯು ಬದಲಾವಣೆಗೊಂಡು ಕರ್ನಾಟಕದ ಕೃಷಿ ಅರ್ಥವ್ಯವಸ್ಥೆಯನ್ನು ಹೆಚ್ಚು ಉತ್ಪಾದಕಗೊಳಿಸುವ; ರೈತರಿಗೆ ಉತ್ತಮ ಆದಾಯ ತರುವ ಮತ್ತು ಗ್ರಾಮೀಣ ಕರ್ನಾಟಕದ ಜನತೆಯ ಜೀವನ ಗುಣಮಟ್ಟವನ್ನು ಉತ್ತಮಪಡಿಸುವ ಕಡೆಗೆ ಸಾಗಬೇಕಾಗಿದೆ. ಉತ್ತರ ಕರ್ನಾಟಕದ ಅಭಿವೃದ್ಧಿಗಾಗಿ ನಾವು ನಿಖರ ಹಾಗೂ ನಿರ್ದಿಷ್ಟ ಒತ್ತು ನೀಡುತ್ತೇವೆ.

ಕೃಷಿ ಮತ್ತು ಗ್ರಾಮೀಣ ಆರ್ಥಿಕತೆ

34. ಕೃಷಿಯು ಕರ್ನಾಟಕದ ಆರ್ಥಿಕತೆಯ ಬೆನ್ನೆಲುಬು. ಇದು ರಾಜ್ಯದ ಒಟ್ಟಾರೆ ಆಂತರಿಕ ಉತ್ಪನ್ನಕ್ಕೆ ಶೇಕಡ 25 ರಷ್ಟು ಕೊಡುಗೆಯನ್ನು ನೀಡುತ್ತಿದೆ. ನಮ್ಮ ಗ್ರಾಮೀಣ ಜನತೆಯ ಶೇಕಡ 70 ಮಂದಿಗೆ ಉದ್ಯೋಗ ಒದಗಿಸುತ್ತದೆ. ಕೃಷಿ ವೈವಿಧ್ಯತೆಯಲ್ಲಿ ಕರ್ನಾಟಕವು ಮುಂಚೂಣಿಯಲ್ಲಿದೆ. ಹಣ್ಣು ಹಂಪಲು ಬೆಳೆಯುವುದರಲ್ಲಿ ನಾವು ರಾಷ್ಟ್ರದಲ್ಲಿ ಮೂರನೆ ಅತಿ ದೊಡ್ಡ ಹಾಗೂ ತರಕಾರಿ ಬೆಳೆಯಲ್ಲಿ ಐದನೆ ಅತಿದೊಡ್ಡ ಉತ್ಪಾದಕರಾಗಿದ್ದೇವೆ. ಗುತ್ತಿಗೆ ಬೇಸಾಯದಲ್ಲಿ, ಕೃಷಿ ವಸ್ತುಗಳ ಮೌಲ್ಯವರ್ಧನೆಯಲ್ಲಿ ಮತ್ತು ಗರ್ಕಿನ್ ರಫ್ತು ಉದ್ಯಮದಲ್ಲಿ ನಾವು ಮಾದರಿ ರಾಜ್ಯವಾಗಿದ್ದೇವೆ.

35. ಇವೆಲ್ಲದರುಗಳ ನಡುವೆ ಈ ಕೆಲವು ಕೊರತೆಗಳನ್ನು ಗುರುತಿಸಬಹುದು. ಕೃಷಿಯಲ್ಲಿ ಸಾರ್ವಜನಿಕ ಹೂಡಿಕೆಯ ಪ್ರಮಾಣ ತೀರಾ ಕಡಿಮೆಯಾಗಿದೆ. ಎಲ್ಲಾ ರೈತರಿಗೂ ಸಾಲ ಸೌಲಭ್ಯ ಅತ್ಯಾಧುನಿಕ ತಂತ್ರಜ್ಞಾನ, ಮಾರುಕಟ್ಟೆ ಸೌಲಭ್ಯ ಹಾಗೂ ನೀರಾವರಿ ಸೌಕರ್ಯ ದೊರಕಿಸಿಕೊಳ್ಳಲು ಸಾಧ್ಯವಾಗಿಲ್ಲ. ಆರ್ಥಿಕ ಸುಧಾರಣೆಗಳ ಫಲಶೃತಿ ರೈತರಿಗೆ ಸಂಪೂರ್ಣ ತಲುಪಿಲ್ಲ.

36. ಕೃಷಿಯನ್ನು ಹೊಸ ನೆಲೆಗಟ್ಟಿನ ಮೇಲೆ ನಿಲ್ಲಿಸಬೇಕ್ಕೆನ್ನುವುದು ನನ್ನ ಗುರಿಯಾಗಿದೆ. ಇದಕ್ಕಾಗಿ ರೈತರಿಗೆ ಸಾಲದ ಲಭ್ಯತೆ, ನೀರಾವರಿ ಸೌಕರ್ಯ, ತಂತ್ರಜ್ಞಾನದ ಮಾಹಿತಿ ಮತ್ತು ಮಾರುಕಟ್ಟೆ ಅವಕಾಶಗಳನ್ನು ವ್ಯಾಪಕವಾಗಿ ಕಲ್ಪಿಸಲಾಗುವುದು. ಕೃಷಿಯಲ್ಲಿ ಸುಧಾರಣೆ ಮತ್ತು ಬಂಡವಾಳ ಹೂಡಿಕೆಯನ್ನು ಉತ್ತೇಜಿಸಿ ಕೃಷಿ ವಲಯಕ್ಕೆ ಚೈತನ್ಯವನ್ನು ತುಂಬುವ ಸಂಕಲ್ಪ ನನ್ನದಾಗಿದೆ. ಇದಕ್ಕಾಗಿ ಕೃಷಿಯನ್ನು, ಕೃಷಿ ಉದ್ಯಮವನ್ನಾಗಿ ಪರಿವರ್ತಿಸುವ ಅಗತ್ಯವಿದೆ.

37. ಕರ್ನಾಟಕದ ರೈತರು ಕೃಷಿಯ ಸಾಂಪ್ರದಾಯಿಕ ಸಮಸ್ಯೆಗಳನ್ನು ಮೆಟ್ಟಿ ನಿಲ್ಲುವ ಜಾಣ್ಮೆ ಮತ್ತು ಸಾಮರ್ಥ್ಯ ಹೊಂದಿದ್ದಾರೆ. ಕಠಿಣ ದುಡಿಮೆಯನ್ನು ಮಾಡಲು ಸಹ ಅವರು ಸಿದ್ಧರಿದ್ದಾರೆ. ಆದಾಗ್ಯೂ ಅವರಿಗೆ ಕಡಿಮೆ ದರದಲ್ಲಿ ಕೃಷಿ ಸಾಲದ ನೆರವು ದೊರೆಯುತ್ತಿಲ್ಲ. ವಾಣಿಜ್ಯ ಬ್ಯಾಂಕುಗಳಿಗೆ ಅಥವಾ ಸಹಕಾರಿ ಸಾಲ ಸಂಸ್ಥೆಗಳಿಗೆ ಕೃಷಿ ಸಮುದಾಯಕ್ಕೆ ಕಡಿಮೆ ಬಡ್ಡಿ ದರದಲ್ಲಿ ಸಾಲ ಒದಗಿಸಲು ಸಾಧ್ಯವಾಗಿಲ್ಲ.

38. ಪ್ರಸ್ತುತ, ಸಹಕಾರಿ ಸಾಲ ಸಂಸ್ಥೆಗಳು ರೈತರ ಬೆಳೆ ಸಾಲಕ್ಕೆ ಶೇಕಡಾ 12.5 ರಷ್ಟು ಮತ್ತು ದೀರ್ಘಾವಧಿ ಸಾಲಕ್ಕೆ ಶೇಕಡಾ 13.5 ರ ದರದಲ್ಲಿ ಬಡ್ಡಿ ವಿಧಿಸುತ್ತಿವೆ. ಇದನ್ನು

ಬದಲಿಸಲು ಸರ್ಕಾರವು ದೃಢ ನಿಶ್ಚಯ ಮಾಡಿದೆ. ಸಾಮಾನ್ಯ ಕನಿಷ್ಟ ಕಾರ್ಯಕ್ರಮದಲ್ಲಿ ನಾವು ಕರ್ನಾಟಕದ ರೈತರಿಗೆ ನೀಡಿರುವ ವಚನವನ್ನು ಈಡೇರಿಸಲು ಬದ್ಧರಾಗಿದ್ದೇವೆ. ಇನ್ನು ಮುಂದೆ ರೈತರ ಕೃಷಿ ಸಾಲಗಳಿಗೆ ಶೇಕಡಾ 6 ರ ಬಡ್ಡಿ ದರದಲ್ಲಿ ಸಹಕಾರಿ ಬ್ಯಾಂಕ್‌ಗಳ ಮೂಲಕ ಸಾಲ ಸೌಲಭ್ಯ ಒದಗಿಸಲು ನಾನು ಪ್ರಸ್ತಾವಿಸುತ್ತಿದ್ದೇನೆ. ಈ ಉದ್ದೇಶಕ್ಕಾಗಿ ನಾನು 60 ಕೋಟಿ ರೂಗಳನ್ನು ಮೀಸಲಿಡುತ್ತಿದ್ದೇನೆ. ನಮ್ಮ ಸರ್ಕಾರದ ಈ ತೀರ್ಮಾನವು ಬಹುಶಃ ಇದೇ ರಾಷ್ಟ್ರದಲ್ಲಿಯೇ ಪ್ರಥಮ ಹೆಜ್ಜೆಯಾಗಿದ್ದು ಕೃಷಿ ಕ್ಷೇತ್ರದಲ್ಲಿ ಮಹತ್ತರ ಬದಲಾವಣೆಯನ್ನು ತರಲಿದೆ. ಈ ಕಾರ್ಯಕ್ರಮದ ಅನುಕೂಲಗಳು ಪರಿಶಿಷ್ಟ ಜಾತಿ/ಪಂಗಡ, ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರು ಹಾಗೂ ಇತರೆ ದುರ್ಬಲ ವರ್ಗಗಳಿಗೂ ತಲುಪುವಂತೆ ಕ್ರಮ ಕೈಗೊಳ್ಳಲಾಗುವುದು.

39. ಸಹಕಾರಿ ಸಾಲ ಸಂಸ್ಥೆಗಳು ಇನ್ನು ಮುಂದೆ ಕೃಷಿ ಸಾಲದ ಮೇಲೆ ಸರಳಬಡ್ಡಿಯನ್ನಲ್ಲದೆ ಚಕ್ರಬಡ್ಡಿ ಮತ್ತು ಸುಸ್ಥಿಬಡ್ಡಿಯನ್ನು ವಿಧಿಸಬಾರದೆಂದು ನಮ್ಮ ಸರ್ಕಾರವು ನಿರ್ಧರಿಸಿ ಈ ನಿಟ್ಟಿನಲ್ಲಿ ಸಂಬಂಧಿಸಿದವರಿಗೆ ಸೂಕ್ತ ನಿರ್ದೇಶನ ನೀಡಿದೆ.

40. ಸುಮಾರು 20,000 ಹೆಚ್ಚು ಮಂದಿ ರೈತರು ತಾವು ಪಡೆದಿರುವ ದೀರ್ಘಾವಧಿ ಸಾಲದ ಅಸಲಿನ ಮೊತ್ತಕ್ಕಿಂತಲೂ ಹೆಚ್ಚಿನ ಹಣವನ್ನು ಬಡ್ಡಿಯ ರೂಪದಲ್ಲಿ ಮರುಪಾವತಿ ಮಾಡಿದ್ದಾರೆ. ತಾವು ಪಡೆದಿರುವ ಸಾಲದ ಅಸಲು ಮತ್ತು ಸಾಲದ ಮೇಲಿನ ಸರಳ ಬಡ್ಡಿಯ ಮೊತ್ತಕ್ಕೆ ಸಮಾನವಾದ ಮೊತ್ತವನ್ನು ಈಗಾಗಲೇ ಮರುಪಾವತಿ ಮಾಡಿರುವ ರೈತರುಗಳ ಬಾಕಿ ಸಾಲವನ್ನು ಮನ್ನಾಮಾಡಲಾಗುವುದು. ಈ ಪರಿಹಾರವನ್ನು ಒದಗಿಸಲು ನಾನು 49 ಕೋಟಿ ರೂ.ಗಳನ್ನು ಮೀಸಲಿಟ್ಟಿದ್ದೇನೆ.

41. ಹಿಂದಿನ ಸರ್ಕಾರವು ಕೃಷಿ ಸಾಲಗಳ ಮೇಲಿನ ಬಡ್ಡಿ ಮನ್ನಾ ಮಾಡುವ ಘೋಷಣೆ ಮಾಡಿತ್ತು. ಈ ಸಂಬಂಧ ಪಾವತಿಸಬೇಕಾಗಿರುವ 83 ಕೋಟಿ ರೂ.ಗಳನ್ನು ನಾನು ಪ್ರಸಕ್ತ ವರ್ಷ ಒದಗಿಸುತ್ತಿದ್ದೇನೆ.

42. ಕೇಂದ್ರ ಹಣಕಾಸು ಸಚಿವರು ತಮ್ಮ ಇತ್ತೀಚಿನ ಮುಂಗಡ ಪತ್ರದಲ್ಲಿ ಕೃಷಿ ಸಾಲಗಳನ್ನು ಎರಡು ಪಟ್ಟು ಹೆಚ್ಚಿಸಲು ಬ್ಯಾಂಕುಗಳ ಮೂಲಕ ಕ್ರಮ ಕೈಗೊಳ್ಳುವುದಾಗಿ ಘೋಷಣೆ ಮಾಡಿದ್ದಾರೆ. ಈ ಹಿನ್ನೆಲೆಯಲ್ಲಿ ಸಹಕಾರಿ ಬ್ಯಾಂಕ್ ವ್ಯವಸ್ಥೆಗೆ ಅಗತ್ಯವಿರುವ ಸುಧಾರಣೆಗಳ ಪರಿಶೀಲನೆಗಾಗಿ ಕಾರ್ಯಪಡೆಯೊಂದನ್ನು ರಚಿಸಲಾಗಿದೆ. ನಾವು ಈ ಕಾರ್ಯಪಡೆಯು ಶಿಫಾರಸ್ಸುಗಳನ್ನು ಮತ್ತು ಈ ಸಂಬಂಧ ಕೇಂದ್ರ ಸರ್ಕಾರವು ಕೈಗೊಳ್ಳಲಿರುವ ಕ್ರಮಗಳನ್ನು ನಿರೀಕ್ಷಿಸುತ್ತಿದ್ದೇವೆ. ಅನಂತರ, ಮೂರು ವರ್ಷಗಳ ಸತತ ಬರಗಾಲದಿಂದಾಗಿ ಸಾಲದ ಹೊರೆಯಿಂದ ಬಳಲುತ್ತಿರುವ ರೈತರ ಸಹಕಾರಿ ಬ್ಯಾಂಕುಗಳ ಕೃಷಿ ಸಾಲಗಳ ಮೇಲಿನ ಬಡ್ಡಿ ಮತ್ತು ಸುಸ್ಥಿಬಡ್ಡಿಯನ್ನು ಮನ್ನಾ ಮಾಡಲು ಪರಿಗಣಿಸಲಿದ್ದೇವೆ.

43. ಬೆಳೆ ವಿಮೆಗಾಗಿ ಪ್ರಸಕ್ತ ವರ್ಷದ ಹಂಚಿಕೆಯ ಮೊತ್ತವನ್ನು ನಾನು ಹೆಚ್ಚು ಮಾಡುತ್ತಿದ್ದು, ಈ ಉದ್ದೇಶಕ್ಕಾಗಿ 241 ಕೋಟಿ ರೂ.ಗಳನ್ನು ಮೀಸಲಿಟ್ಟಿದ್ದೇನೆ.

44. ರಾಜ್ಯದ ಬಹಳಷ್ಟು ಭಾಗದಲ್ಲಿ ವ್ಯಾಪಕವಾಗಿ ಉತ್ತಮ ಮುಂಗಾರು ಮಳೆ ಬಿದ್ದಿದೆ. ಬಿತ್ತನೆ ಕಾರ್ಯಗಳು ಚುರುಕಾಗಿ ನಡೆದಿವೆ. ಬಹುತೇಕ ಜಿಲ್ಲೆಗಳಲ್ಲಿ ನಿಗದಿತ ಗುರಿ ಪ್ರದೇಶದಲ್ಲಿ ಹಲವು ಬೆಳೆಗಳನ್ನು ಬಿತ್ತಲಾಗಿದೆ. ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಉತ್ತಮ ಗುಣಮಟ್ಟದ ಬಿತ್ತನೆ ಬೀಜಗಳನ್ನು ರಿಯಾಯಿತಿ ದರದಲ್ಲಿ ಒದಗಿಸಲು ಸರ್ಕಾರವು ಪ್ರಸಕ್ತ ವರ್ಷ 50 ಕೋಟಿ ರೂ.ಗಳನ್ನು ಒದಗಿಸಿದೆ.

45. ಕೃಷಿ ಉತ್ಪನ್ನಗಳ ಬೆಲೆ ಕುಸಿತದ ಸಂದರ್ಭದಲ್ಲಿ ಸರ್ಕಾರವು ಮಾರುಕಟ್ಟೆ ಪ್ರವೇಶಿಸಿ ಬೆಲೆ ಸ್ಥಿರತೆ ಕಾಪಾಡಲು ಬದ್ಧವಾಗಿದೆ. ಇದಕ್ಕಾಗಿ ಮೀಸಲಿಟ್ಟಿರುವ ಆವರ್ತ ನಿಧಿಯ ಮೊತ್ತವನ್ನು 100 ಕೋಟಿ ರೂ.ಗಳಿಗೆ ಹೆಚ್ಚಿಸಲಾಗುವುದು.

46. ಜಲಾನಯನವನ್ನು ಆಧರಿಸಿ ಒಣಭೂಮಿಯನ್ನು ಅಭಿವೃದ್ಧಿಪಡಿಸಲು ಸಮಗ್ರ ಯೋಜನೆಯೊಂದನ್ನು ಪ್ರಸಕ್ತ ವರ್ಷ ಆರಂಭಿಸಲಾಗುವುದು. ಜಲಸಂಪನ್ಮೂಲ ಮತ್ತು ಮಣ್ಣಿನ ಸಂರಕ್ಷಣೆ, ಅಭಿವೃದ್ಧಿ ಮತ್ತು ಸುಸ್ಥಿರತೆ, ಕೃಷಿ ಉತ್ಪಾದಕತೆಯ ಸಂವರ್ಧನೆ, ಬಂಜರು ಭೂಮಿಯ ಸಾಗುವಳಿ, ಮಳೆನೀರು ಸಂಗ್ರಹಣಾ ರಚನೆಗಳ ನಿರ್ಮಾಣ ಈ ಯೋಜನೆಯ ಪ್ರಮುಖ ಉದ್ದೇಶಗಳಾಗಿವೆ. ಈ ಕಾರ್ಯಕ್ರಮಕ್ಕಾಗಿ ಪ್ರಸಕ್ತ ವರ್ಷದಲ್ಲಿ 100 ಕೋಟಿ ರೂ.ಗಳನ್ನು ಮೀಸಲಿಡಲಾಗಿದೆ. ಈ ಕಾರ್ಯಕ್ರಮದ ಪರಿಣಾಮಗಳ ಮೌಲ್ಯಮಾಪನದ ನಂತರ ಈ ಯೋಜನೆಯನ್ನು ಮುಂದಿನ ವರ್ಷ ವಿಸ್ತರಿಸುವ ಬಗ್ಗೆ ಸರ್ಕಾರ ಪರಿಗಣಿಸಲಿದೆ.

47. ಇತ್ತೀಚಿನ ವರ್ಷಗಳಲ್ಲಿ ಕೃಷ್ಣಾಭಾಗ್ಯ ಜಲ ನಿಗಮ, ಕರ್ನಾಟಕ ನೀರಾವರಿ ನಿಗಮ ಮತ್ತು ಕಾವೇರಿ ನೀರಾವರಿ ನಿಗಮಗಳ ಮೂಲಕ ಹಲವಾರು ನೀರಾವರಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಈ ಕಾಮಗಾರಿಗಳನ್ನು ಶೀಘ್ರವಾಗಿ ಪೂರ್ಣಗೊಳಿಸಲು ಹೆಚ್ಚಿನ ಆದ್ಯತೆ ನೀಡಲಾಗುವುದು. ಕೃಷ್ಣಾ ಮೇಲ್ದಂಡೆ ಯೋಜನೆಯ ಮೊದಲನೆ ಹಂತದ ಕಾಮಗಾರಿಗಳನ್ನು ಮುಂದಿನ ಆರ್ಥಿಕ ವರ್ಷದ ಅಂತ್ಯದೊಳಗೆ ಸಂಪೂರ್ಣಗೊಳಿಸಲು ಕಾಲಬದ್ಧ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುವುದು. ಇದರಿಂದ ಅಗತ್ಯವಿರುವ ರೈತರಿಗೆ ಅನುಕೂಲಗಳು ಶೀಘ್ರದಲ್ಲಿ ತಲುಪುತ್ತವೆ. ತ್ವರಿತ ನೀರಾವರಿ ಸೌಕರ್ಯ ಯೋಜನೆಯಡಿ ಕೇಂದ್ರ ಸರ್ಕಾರವು ರಾಜ್ಯಕ್ಕೆ ಹೆಚ್ಚು ಸಂಪನ್ಮೂಲ ಒದಗಿಸುತ್ತದೆ ಎಂದು ನಾನು ಆಶಿಸುತ್ತೇನೆ.

48. ಗುಲ್ಬರ್ಗ ಜಿಲ್ಲೆಯ ಸುರಪುರ, ಜೇವರ್ಗಿ ಮತ್ತು ಶಹಾಪುರ ತಾಲ್ಲೂಕುಗಳ ರೈತರ ಜಮೀನುಗಳು ಕೆಬಿಸಿ/ಎಸ್‌ಬಿಸಿ ಮತ್ತು ಎಂಬಿಸಿ ಯೋಜನೆಗಳ ಅಚ್ಚುಕಟ್ಟು ಪ್ರದೇಶಕ್ಕಿಂತಲೂ ಎತ್ತರದಲ್ಲಿವೆ. ಈ ಭಾಗದ ರೈತರಿಗೆ ಅನುಕೂಲವಾಗುವ ಮಲ್ಲಾಬಾದ್ ಏತ ನೀರಾವರಿ ಯೋಜನೆಯು 40,000 ಹೆಕ್ಟೇರ್ ಜಮೀನಿಗೆ ನೀರಾವರಿ ಸೌಲಭ್ಯ ಕಲ್ಪಿಸುವ ಸಾಮರ್ಥ್ಯ ಹೊಂದಿದೆ. ಈ ಯೋಜನೆಯ ತಾಂತ್ರಿಕ ಸಾಧ್ಯತೆಯ ಬಗ್ಗೆ ಸಮೀಕ್ಷೆ ನಡೆಸಲು 5 ಕೋಟಿ ರೂ.ಗಳನ್ನು ಒದಗಿಸಲಾಗುತ್ತಿದೆ.

49. ಕರ್ನಾಟಕದ ಕೃಷಿ ಮತ್ತು ಗ್ರಾಮೀಣ ಪ್ರದೇಶದ ಜನರ ಜೀವನ ಗುಣಮಟ್ಟದ ಅಭಿವೃದ್ಧಿಗೆ ವಿಪುಲ ಅವಕಾಶವಿರುವ ವಿಶ್ವಬ್ಯಾಂಕ್ ನೆರವಿನ ಮೂರು ಯೋಜನೆಗಳು

ಜಾರಿಯಲ್ಲಿವೆ. 690 ಕೋಟಿ ರೂಗಳ ಜಲಾನಯನ ಯೋಜನೆ, 670 ಕೋಟಿ ರೂಗಳ ಕೆರೆ ನಿರ್ವಹಣೆ ಯೋಜನೆ, ಮತ್ತು 1035 ಕೋಟಿ ರೂಗಳ ಗ್ರಾಮೀಣ ಕುಡಿಯುವ ನೀರು ಸರಬರಾಜು ಯೋಜನೆಗಳು ಅನುಷ್ಠಾನಗೊಳ್ಳುತ್ತಿವೆ.

50. ಈ ಯೋಜನೆಗಳ ಪ್ರಗತಿ ತೀರಾ ನಿರಾಶದಾಯಕವಾಗಿದೆ. ಕಳೆದ ಎರಡು ವರ್ಷಗಳಲ್ಲಿ ಈ ಯೋಜನೆಯಡಿ ಶೇಕಡ 10 ಕ್ಕೂ ಕಡಿಮೆ ಹಣವನ್ನು ಮಾತ್ರ ಬಳಸಿಕೊಳ್ಳಲಾಗಿದೆ. ಈ ಯೋಜನೆಗಳು ಗ್ರಾಮೀಣ ಬಡಜನರಿಗೆ ಅದರಲ್ಲೂ ವಿಶೇಷವಾಗಿ ಮಳೆಯನ್ನೇ ನೆಚ್ಚಿಕೊಂಡಿರುವ ರೈತರಿಗೆ ಅನುಕೂಲ ಕಲ್ಪಿಸಲಿವೆ. ಈ ಯೋಜನೆಗಳ ತ್ವರಿತ ಅನುಷ್ಠಾನಕ್ಕೆ ಆದ್ಯತೆ ನೀಡಲಾಗುವುದು.

51. ಪ್ರತಿ ವ್ಯಕ್ತಿಗೂ ಸ್ವಚ್ಛ ಕುಡಿಯುವ ನೀರು ಮತ್ತು ಸರ್ವಋತು ವಸತಿ ಸೌಲಭ್ಯ ಒದಗಿಸಬೇಕು. ಇವು ಮೂಲ ಭೂತ ಅಗತ್ಯಗಳು. ಇದಕ್ಕಾಗಿ ನಾನು ಕುಡಿಯುವ ನೀರು ಸರಬರಾಜು, ವಸತಿ ಮತ್ತು ನಗರಾಭಿವೃದ್ಧಿಗೆ ಹಂಚಿಕೆಯನ್ನು ಪ್ರಸಕ್ತ ಸಾಲಿನಲ್ಲಿ 1732 ಕೋಟಿ ರೂ.ಗಳಿಂದ 1870 ಕೋಟಿ ರೂಗಳಿಗೆ ಹೆಚ್ಚಿಸುತ್ತಿದ್ದೇನೆ. ಇದು 138 ಕೋಟಿ ರೂಗಳ ಹೆಚ್ಚುವರಿಯಾಗಿದೆ.

52. ಜಾನುವಾರುಗಳು ಮತ್ತು ಕೃಷಿ ಕ್ಷೇತ್ರಗಳಲ್ಲಿ ಬಳಸುವ ಪ್ರಾಣಿಗಳಿಗೆ ಸಾಮಾನ್ಯವಾಗಿ ಉಪಯೋಗಿಸುವ ಕೆಲವು ಲಸಿಕೆಗಳನ್ನು ಜೂನ್ 2002 ರಿಂದ ಹಣ ಪಡೆದು ರೈತರಿಗೆ ಒದಗಿಸಲಾಗುತ್ತಿತ್ತು. ಆದರೆ ಜನರು ಹಣ ಪಾವತಿಸಿ ಈ ಲಸಿಕೆಗಳನ್ನು ಪಡೆಯಲು ಸಾಧ್ಯವಾಗದೆ ಹಲವಾರು ಪ್ರಾಣಿಗಳು ಖಾಯಿಲೆಗೆ ತುತ್ತಾಗಿವೆ.

53. ಈ ಹಿನ್ನೆಲೆಯಲ್ಲಿ ನಾಯಿಗಳಿಗೆ ಬಳಸುವ ರೇಬೀಸ್ ಪ್ರತಿರೋಧಿ ಲಸಿಕೆ ಮತ್ತು ಪಶುಗಳ ಕಾಲು ಬಾಯಿ ರೋಗಕ್ಕೆ ಬಳಸುವ ಲಸಿಕೆಗಳನ್ನು ಹೊರತುಪಡಿಸಿ ಇತರ ಎಲ್ಲಾ ಬ್ಯಾಕ್ಟೀರಿಯಾ ಮತ್ತು ವೈರಲ್ ಲಸಿಕೆಗಳನ್ನು ಇನ್ನು ಮುಂದೆ ಉಚಿತವಾಗಿ ವಿತರಿಸಲಾಗುವುದು.

54. ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮವು ಕುರಿ ಮತ್ತು ಮೇಕೆ ಅಭಿವೃದ್ಧಿ ಚಟುವಟಿಕೆಗಳಲ್ಲಿ ತೊಡಗಿದೆ. ಸಂಪನ್ಮೂಲದ ಕೊರತೆಯಿಂದ ಬಳಲುತ್ತಿರುವ ಈ ನಿಗಮದ ಪುನಶ್ಚೇತನಕ್ಕಾಗಿ ಒಂದು ಬಾರಿಯ ಅನುದಾನವಾಗಿ ಮೂರು ಕೋಟಿ ರೂಗಳನ್ನು ಪ್ರಸಕ್ತ ವರ್ಷ ಒದಗಿಸಲು ನಾನು ಪ್ರಸ್ತಾಪಿಸುತ್ತಿದ್ದೇನೆ.

55. ಯಾಂತ್ರೀಕೃತ ಮೀನುಗಾರಿಕೆ ದೋಣಿಗಳಿಗೆ ಬಳಸುವ ಡೀಸಲ್ ಮೇಲಿನ ಮಾರಾಟ ತೆರಿಗೆಯನ್ನು ವಾರ್ಷಿಕ 50,000 ಕಿಲೋ ಲೀಟರ್ ಡೀಸೆಲ್‌ಗೆ ಸೀಮಿತಗೊಳಿಸಿ ಮನ್ನಾ ಮಾಡುವ ಪ್ರಸ್ತಾವನೆಯನ್ನು ವಿಸ್ತರಿಸಲು ಉದ್ದೇಶಿಸಿದ್ದೇನೆ. ಈ ಅನುಕೂಲ ನೀಡಿಕೆಯಿಂದ ಸರ್ಕಾರಕ್ಕೆ 25 ಕೋಟಿ ರೂ.ಗಳ ವೆಚ್ಚ ತಗುಲುತ್ತದೆ.

56. ಕೃಷಿ ವಲಯಕ್ಕೆ ಉತ್ತೇಜನ ನೀಡಲು ನಾನು 2003-04ನೇ ಸಾಲಿನಲ್ಲಿ ನೀಡಿದ್ದ 412 ಕೋಟಿ ರೂಗಳ ಯೋಜನಾ ಅನುದಾನವನ್ನು 2004-05ನೇ ಸಾಲಿನಲ್ಲಿ 840 ಕೋಟಿ ರೂಗಳಿಗೆ ಹೆಚ್ಚಿಸುತ್ತಿದ್ದೇನೆ. ಇದು ಶೇಕಡ 104 ರಷ್ಟು ಬೆಳವಣಿಗೆಯಾಗಿದೆ.

ಆಹಾರ ಸುರಕ್ಷತೆ:

57. ಕಡು ಬಡವರು ಮತ್ತು ಹತಭಾಗ್ಯರನ್ನು ಹಸಿವಿನಿಂದ ರಕ್ಷಿಸುವುದು ಹಾಗೂ ಅವರು ಸವಲತ್ತುಗಳಿಂದ ವಂಚಿತರಾಗದಂತೆ ನೋಡಿಕೊಳ್ಳುವುದು ಸರ್ಕಾರದ ಕಲ್ಯಾಣ ಕಾರ್ಯಕ್ರಮಗಳಲ್ಲಿ ಪರಮ ಪ್ರಾಶಸ್ತ್ಯ ಪಡೆದಿದೆ. ಕಡುಬಡವರಿಗೆಂದೇ ಮೀಸಲಿಟ್ಟಿದ್ದ ಆಹಾರ ಧಾನ್ಯವನ್ನು ಇತ್ತೀಚಿಗೆ ವಿವಿಧ ಯೋಜನೆಗಳಡಿ ದುರುಪಯೋಗ ಮಾಡಿಕೊಂಡಿರುವುದು ದುರಾದೃಷ್ಟಕರ ಮತ್ತು ಅಕ್ಷಮ್ಯ ಅಪರಾಧ. ಇಂತಹ ವ್ಯಾಪಕ ದುರುಪಯೋಗವನ್ನು ತಡೆಗಟ್ಟಲು ಮತ್ತು ಸಹಾಯಧನದ ಆಹಾರ ಧಾನ್ಯಗಳನ್ನು ಉದ್ದೇಶಿತ ಜನರಿಗೆ ತಲುಪಿಸಲು ತಕ್ಷಣವೇ ಕ್ರಮ ಕೈಗೊಂಡು ಅನರ್ಹ ಪಡಿತರ ಕಾರ್ಡುದಾರರನ್ನು ಪಟ್ಟಿಯಿಂದ ತೆಗೆದು ಹಾಕಲಾಗುವುದು. ಈ ಪ್ರಕ್ರಿಯೆಯು 2004ರ ಆಗಸ್ಟ್ 31ರ ಅಂತ್ಯದೊಳಗೆ ಪೂರ್ಣಗೊಳ್ಳಲಿದೆ.

58. ಬಡತನ ರೇಖೆಯಿಂದ ಕೆಳಗಿರುವ ಕುಟುಂಬಗಳಿಗೆ ಅಗ್ಗದ ದರದಲ್ಲಿ ಆಹಾರಧಾನ್ಯ ಒದಗಿಸುವುದು ನಮ್ಮ ಸರ್ಕಾರದ ಬದ್ಧತೆಯಾಗಿದೆ. ಈ ನಿಟ್ಟಿನಲ್ಲಿ ಬಡತನ ರೇಖೆಯ ಕೆಳಗಿರುವ ಪ್ರತಿ ಕುಟುಂಬದ ಪಡಿತರ ಕಾರ್ಡುದಾರರಿಗೆ ಪ್ರತಿ ತಿಂಗಳು 20 ಕೆಜಿ ಅಕ್ಕಿ ಮತ್ತು 5 ಕೆಜಿ ಗೋಧಿಯನ್ನು ಕಿಲೋಗೆ 3 ರೂ.ಗಳಂತೆ ಒದಗಿಸಲಾಗುವುದು. ಇದು ಕರ್ನಾಟಕದ ಬಡ ಜನತೆಗೆ ಗಣನೀಯ ಪ್ರಮಾಣದಲ್ಲಿ ನೆರವಾಗಲಿದೆ. ಈ ಕಾರ್ಯಕ್ರಮಕ್ಕಾಗಿ ನಾನು 300 ಕೋಟಿ ರೂ.ಗಳನ್ನು ಮೀಸಲಿಡುತ್ತಿದ್ದೇನೆ.

ಪ್ರಾಥಮಿಕ ಶಿಕ್ಷಣ ಮತ್ತು ಪ್ರಾಥಮಿಕ ಆರೋಗ್ಯ:

59. ನಾನು ಸಹಸ್ರಮಾನದ ಅಭಿವೃದ್ಧಿ ಗುರಿಗಳನ್ನು ಸಾಧಿಸುವ ತುರ್ತು ಅಗತ್ಯವನ್ನು ಇಲ್ಲಿ ಹೇಳುತ್ತಿದ್ದೇನೆ. ಮಾನವ ಅಭಿವೃದ್ಧಿ ವರದಿಯನ್ನೇ ಉಲ್ಲೇಖಿಸಿ ಹೇಳುವುದಾದರೆ, ಮಾನವ ಅಭಿವೃದ್ಧಿಯೆಂದರೆ ಅದು ಜನರನ್ನು ಕುರಿತದ್ದಾಗಿದೆ. ಜನರಿಗೆ ಸಂಪೂರ್ಣ ಸ್ವಾತಂತ್ರ್ಯ, ಘನತೆ ಮತ್ತು ಸಂತೃಪ್ತ ತುಂಬು ಜೀವನವನ್ನು ಸೃಷ್ಟಿಸಿ ಕೊಡುವುದಾಗಿದೆ. ವಿದ್ಯಾವಂತರಾಗಿ ಗೌರವಾನ್ವಿತವಾಗಿ, ಸುದೀರ್ಘ ಆರೋಗ್ಯಪೂರ್ಣ ಜೀವನ ನಡೆಸುವ ಮೂಲ ಸಾಮರ್ಥ್ಯದ ನಿರ್ಮಾಣ ಸೃಷ್ಟಿಸುವುದಾಗಿದೆ. ಈ ಹಿನ್ನೆಲೆಯಲ್ಲಿ ಪ್ರಾಥಮಿಕ ಶಿಕ್ಷಣ ಮತ್ತು ಪ್ರಾಥಮಿಕ ಆರೋಗ್ಯವು ನಮ್ಮ ಅಭಿವೃದ್ಧಿ ಪ್ರಯತ್ನಗಳ ಕೇಂದ್ರ ನೋಟವಾಗಬೇಕು.

60. ಮಧ್ಯಾಹ್ನದ ಬಿಸಿಯೂಟ ಯೋಜನೆಯು ಈಗ ರಾಷ್ಟ್ರೀಯ ಸಮ್ಮತಿ ಪಡೆದುಕೊಂಡಿದೆ. ಕರ್ನಾಟಕವು ಈಗಾಗಲೇ ಸರ್ಕಾರಿ ಶಾಲೆಗಳ ಐದನೇ ತರಗತಿಯವರೆಗಿನ ಎಲ್ಲಾ ಮಕ್ಕಳಿಗೂ ಮಧ್ಯಾಹ್ನದ ಬಿಸಿಯೂಟ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಿದೆ. ಈ ಕಾರ್ಯಕ್ರಮವನ್ನು ಪ್ರಸಕ್ತ ವರ್ಷದಲ್ಲಿ ಎಲ್ಲಾ ಸರ್ಕಾರಿ ಶಾಲೆ ಮತ್ತು ಅನುದಾನಿತ ಶಾಲೆಗಳಲ್ಲಿರುವ ಏಳನೇ ತರಗತಿಯವರೆಗಿನ ಎಲ್ಲ ಮಕ್ಕಳಿಗೂ ವಿಸ್ತರಿಸಲು ನಾನು ಉದ್ದೇಶಿಸಿದ್ದೇನೆ. ಇದರ ಜೊತೆಗೆ ಬಿಸಿಯೂಟ ತಯಾರಿಸಲು ಪ್ರತಿ ಮಗುವಿಗೆ, ಪ್ರತಿ ದಿನಕ್ಕೆ ಈಗ ನೀಡುತ್ತಿರುವ ಮೇಲು ವೆಚ್ಚವನ್ನು 1 ರೂ. ಗಳಿಂದ 1.31 ರೂ.ಗಳಿಗೆ ಹೆಚ್ಚಿಸಲು ಉದ್ದೇಶಿಸಿದ್ದೇನೆ. ಈ ಕಾರ್ಯಕ್ರಮಕ್ಕಾಗಿ ಪ್ರಸಕ್ತ ವರ್ಷ 262 ಕೋಟಿ ರೂ.ಗಳನ್ನು ನೀಡಲು ಉದ್ದೇಶಿಸಿದ್ದೇನೆ. ಇದರಿಂದ ಹೆಚ್ಚುವರಿಯಾಗಿ 25 ಲಕ್ಷ ಶಾಲಾ ಮಕ್ಕಳಿಗೆ ಈ

ಸೌಲಭ್ಯ ದೊರೆಯಲಿದೆ. ಸಾಮಾನ್ಯ ಕನಿಷ್ಟ ಕಾರ್ಯಕ್ರಮದಡಿಯಲ್ಲಿ ಹೇಳಿರುವಂತೆ ರಾಜ್ಯ ಸರ್ಕಾರವು ಈ ಬಿಸಿಯೂಟ ಕಾರ್ಯಕ್ರಮವನ್ನು ಹತ್ತನೇ ತರಗತಿಯವರೆಗಿನ ವಿದ್ಯಾರ್ಥಿಗಳಿಗೂ ಸಹಿತ ಹಂತ ಹಂತವಾಗಿ ಮುಂದಿನ ಐದು ವರ್ಷಗಳಲ್ಲಿ ವಿಸ್ತರಿಸಲಿದೆ.

61. ಶಿಕ್ಷಣ ವಲಯಕ್ಕೆ ನಾನು ಒಟ್ಟಾರೆ ಯೋಜನೆಯಡಿಯಲ್ಲಿ 860 ಕೋಟಿ ರೂಗಳನ್ನು ಹಂಚಿಕೆ ಮಾಡಿದ್ದೇನೆ. ಪ್ರಸ್ತುತ 535 ಕೋಟಿ ರೂಗಳ ಹಂಚಿಕೆಗೆ ಹೋಲಿಸಿದರೆ ಇದು ಶೇಕಡ 61ರ ಗಣನೀಯ ಹೆಚ್ಚಳವಾಗಿದೆ.

62. ಉತ್ತಮ ಗುಣಮಟ್ಟದ ಶಿಕ್ಷಣಕ್ಕಾಗಿ ವಿಶೇಷ ಒತ್ತು ನೀಡಲು ಅನುವಾಗುವಂತೆ ಸಾರ್ವಜನಿಕ ಶಿಕ್ಷಣದಲ್ಲಿನ ದಕ್ಷತೆಯನ್ನು ಸುಧಾರಿಸುವ ಅಗತ್ಯವಿದೆ. ಪ್ರಾಥಮಿಕ ಶಿಕ್ಷಣದ ಗುಣಮಟ್ಟ ಸುಧಾರಿಸಲು ಸುಧಾರಣಾ ಕ್ರಮಗಳು ಇಂತಿವೆ.

- ರಾಜ್ಯಾದ್ಯಂತ ಕಲಿಕೆ ಖಾತರಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವ ಮೂಲಕ ಪ್ರತಿಯೊಂದು ಪ್ರಾಥಮಿಕ ಶಾಲೆಯ ಗುಣಮಟ್ಟವನ್ನು ಮೌಲ್ಯಮಾಪನ ಮಾಡಿ ಉತ್ತಮ ಶಾಲೆಗಳಿಗೆ ಪುರಸ್ಕಾರ ನೀಡುವುದು.
- ಶಾಲೆಗಳು, ಶಿಕ್ಷಕರು ಮತ್ತು ವಿದ್ಯಾರ್ಥಿಗಳ ಅನುಪಾತದ ಆಧಾರದ ಮೇಲೆ ಅಗತ್ಯವಿರುವ ಕಡೆಗೆ ಸೌಲಭ್ಯ ವಿಸ್ತರಿಸುವುದು.
- ವೇತನೇತರ ಚಟುವಟಿಕೆಗಳಿಗೆ ಹೆಚ್ಚುವರಿ ನಿಧಿಯನ್ನು ಒದಗಿಸುವುದು.
- ಶಿಕ್ಷಕರ ಹಾಜರಾತಿ ಮತ್ತು ಕಾರ್ಯದಕ್ಷತೆಯ ಉಸ್ತುವಾರಿ ನೋಡಿಕೊಳ್ಳಲು ಅನುವಾಗುವಂತೆ ಶಾಲಾ ನಿರ್ವಹಣಾ ಸಮಿತಿಗಳನ್ನು ಸಶಕ್ತಗೊಳಿಸುವುದು.
- ಬಡಮಕ್ಕಳಿಗೆ ಉತ್ತಮ ಗುಣಮಟ್ಟದ ಶಾಲಾ ಶಿಕ್ಷಣ ವ್ಯಾಪಕವಾಗಿ ದೊರೆಯುವಂತೆ ಶೈಕ್ಷಣಿಕ ಅನುದಾನ ವ್ಯವಸ್ಥೆಯ ಸುಧಾರಣೆ.
- ಶಿಕ್ಷಣ ವಲಯದ ಹಾಲಿ ಸಹಾಯಧನ ಯೋಜನೆಗಳನ್ನು ಪರಿಷ್ಕರಿಸಿ ಗರಿಷ್ಟ ಪರಿಣಾಮ ನೀಡುವ ಕಾರ್ಯಕ್ರಮಗಳಿಗೆ ಹೆಚ್ಚು ಹಣ ಒದಗಿಸುವುದು.

63. ಯಾವುದೇ ಪ್ರಗತಿಪರ ಸಮಾಜದಲ್ಲಿ ಸಾರ್ವಜನಿಕ ಆರೋಗ್ಯ ವೆಚ್ಚ ಜಿಎಸ್‌ಡಿಪಿಯ ಶೇಕಡಾವಾರು ಲೆಕ್ಕದಲ್ಲಿ ಕನಿಷ್ಟ ಶೇಕಡ 2 ರ ಪ್ರಮಾಣದಲ್ಲಿರಬೇಕು. ಆದರೆ ಕರ್ನಾಟಕದಲ್ಲಿ ಇದರ ಪ್ರಮಾಣವು 1999 ರಲ್ಲಿ ಜಿಎಸ್‌ಡಿಪಿಯ ಶೇಕಡ 1.02 ರಷ್ಟಿದ್ದು 2004 ರಲ್ಲಿ ಶೇಕಡ 0.7ಕ್ಕೆ ಇಳಿದಿದೆ. ಆದ್ದರಿಂದ ನಾನು ಉತ್ತರ ಕರ್ನಾಟಕದ ತಾಲ್ಲೂಕು ಆಸ್ಪತ್ರೆಗಳಿಗೆ ವಿಶೇಷ ಗಮನ ನೀಡಲು ಮತ್ತು ಜಿಲ್ಲಾ ಆಸ್ಪತ್ರೆಗಳ ಮೂಲ ವೈದ್ಯಕೀಯ ಸೌಕರ್ಯಗಳನ್ನು ಸುಧಾರಿಸಲು ಯೋಜನಾ ವೆಚ್ಚವನ್ನು 333 ಕೋಟಿ ರೂಗಳಿಂದ 377 ಕೋಟಿ ರೂ.ಗಳಿಗೆ ಏರಿಸುತ್ತಿದ್ದೇನೆ.

64. ಪ್ರಾಥಮಿಕ ಆರೋಗ್ಯ ರಕ್ಷಣೆ ವ್ಯವಸ್ಥೆಯ ಸುಧಾರಣೆಗೆ ಮತ್ತು ವಿಸ್ತರಣೆಗೆ ಚಾಲನೆ ನೀಡಲು ವಿಶ್ವಬ್ಯಾಂಕ್ ನೆರವಿನಿಂದ ಆರೋಗ್ಯ ಮತ್ತು ಪೌಷ್ಟಿಕಾಂಶ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗುತ್ತಿದೆ. ಅಂದಾಜು **765 ಕೋಟಿ ರೂ.ಗಳ** ಯೋಜನೆಯನ್ನು ಮುಂದಿನ ಐದು ವರ್ಷಗಳಲ್ಲಿ ಅನುಷ್ಠಾನಗೊಳಿಸಲಾಗುವುದು. ಆರೋಗ್ಯ ಮಟ್ಟ ಸುಧಾರಣೆ

ಮತ್ತು ಜನತೆಗೆ ಆರೋಗ್ಯ ರಕ್ಷಣೆಯ ಸೌಲಭ್ಯಗಳು ಹೆಚ್ಚಿನ ಪ್ರಮಾಣದಲ್ಲಿ ಲಭ್ಯವಾಗುವಂತೆ ನೋಡಿಕೊಳ್ಳುವುದು ಈ ಯೋಜನೆಯ ಕೇಂದ್ರ ಗುರಿಯಾಗಿದೆ. ಸಮುದಾಯದ ಸಹಭಾಗಿತ್ವದೊಂದಿಗೆ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯನ್ನು ಸದೃಢಗೊಳಿಸುವುದು ಈ ಯೋಜನೆಯ ಮತ್ತೊಂದು ಆಶಯ.

65. ಯಶಸ್ವಿನಿ ಯೋಜನೆಯು ಸಹಕಾರಿ ಸಂಘದ ಸದಸ್ಯರುಗಳಿಗೆ ಮಾತ್ರ ಆರೋಗ್ಯ ರಕ್ಷಣೆ ಸೌಲಭ್ಯವನ್ನು ಒದಗಿಸುತ್ತಿದೆ. ಸಹಕಾರಿ ಸಂಘಗಳ ಸದಸ್ಯರಲ್ಲದ ಹಲವಾರು ಮಂದಿ ಸಣ್ಣ, ಅತಿ ಸಣ್ಣ ರೈತರು, ಕೃಷಿ ಕಾರ್ಮಿಕರಿಗೂ ಸಹ ಆರೋಗ್ಯ ರಕ್ಷಣೆ ಸೌಲಭ್ಯವನ್ನು ವಿಸ್ತರಿಸಲು ಈಗಾಗಲೇ ಅಸ್ತಿತ್ವದಲ್ಲಿರುವ ವೈದ್ಯಕೀಯ ಪರಿಹಾರ ನಿಧಿಯನ್ನು 50 ಕೋಟಿ ರೂ.ಗಳಿಗೆ ಹೆಚ್ಚಿಸುವ ಮೂಲಕ ಚಾಲನೆ ನೀಡಲಾಗುವುದು.

ಸಮಾಜ ಕಲ್ಯಾಣ ಮತ್ತು ಅಲ್ಪ ಸಂಖ್ಯಾತರು ಹಾಗೂ ಹಿಂದುಳಿದ ವರ್ಗಗಳ ಅಭಿವೃದ್ಧಿ

66. ಗಂಗಾಕಲ್ಯಾಣ ಕಾರ್ಯಕ್ರಮವು ಪರಿಶಿಷ್ಟಜಾತಿ / ಪಂಗಡದ ಸಣ್ಣ ರೈತರಿಗೆ ಆರ್ಥಿಕ ಚೈತನ್ಯವನ್ನು ತುಂಬುತ್ತಿದೆ. ಈ ಯೋಜನೆಗೆ ಮತ್ತಷ್ಟು ಪ್ರೋತ್ಸಾಹ ನೀಡಲು ಪ್ರಸಕ್ತ ವರ್ಷ 13 ಕೋಟಿ ರೂಗಳನ್ನು ಒದಗಿಸುತ್ತಿದ್ದೇನೆ. ಈ ಮೊತ್ತವು ನಿಯಮಿತ ಯೋಜನೆಗಳ ಒಗ್ಗೂಡಿಸಿದ ನಿಧಿಯ ಜೊತೆಗೆ ಹೆಚ್ಚುವರಿ ಹಂಚಿಕೆಯಾಗಿರುತ್ತದೆ.

67. ವಿಶೇಷ ಘಟಕ ಯೋಜನೆಯಡಿ ಮತ್ತು ಬುಡಕಟ್ಟು ಉಪಯೋಜನೆಯಡಿಯ ಕಾರ್ಯಕ್ರಮಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ಹಣವನ್ನು ಒಗ್ಗೂಡಿಸಿ ಪರಿಶಿಷ್ಟ ಜಾತಿ / ಪಂಗಡದ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಹೆಚ್ಚುವರಿ ಅನುದಾನವನ್ನು ಒದಗಿಸಲಾಗುವುದು. ಸಮಾಜ ಕಲ್ಯಾಣ ಇಲಾಖೆಯ ಒಟ್ಟಾರೆ ಯೋಜನಾ ಅಂದಾಜು ವೆಚ್ಚವು 396 ಕೋಟಿ ರೂಗಳಿಂದ 435 ಕೋಟಿ ರೂಗಳಿಗೆ ಏರಲಿದೆ.

68. ಇದರ ಜೊತೆಗೆ, ರಾಜ್ಯದ ಪ.ಜಾತಿ / ಪ. ಪಂ / ಹಿಂದುಳಿದ ವರ್ಗ ಮತ್ತು ಅಲ್ಪ ಸಂಖ್ಯಾತ ವರ್ಗದ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡಲು ಈ ವರ್ಷ ನೂತನವಾಗಿ 30 ವಸತಿ ಶಾಲೆಗಳನ್ನು ಆರಂಭಿಸಲು ಉದ್ದೇಶಿಸಿದ್ದೇನೆ. ಇದರಲ್ಲಿ 10 ಶಾಲೆಗಳನ್ನು ಪರಿಶಿಷ್ಟ ಜಾತಿಯವರಿಗೆ, 10 ಶಾಲೆಗಳನ್ನು ಹಿಂದುಳಿದ ವರ್ಗದವರಿಗೆ ಹಾಗೂ ತಲಾ 5 ಶಾಲೆಗಳನ್ನು ಬುಡಕಟ್ಟು ಜನಾಂಗದವರಿಗೆ ಮತ್ತು ಅಲ್ಪಸಂಖ್ಯಾತರಿಗೆ ನೀಡಲಾಗುವುದು.

69. ಹಿಂದುಳಿದ ವರ್ಗಗಳಿಗೆ ಸೇರಿದವರು ಸ್ವಉದ್ಯೋಗ ಕೈಗೊಂಡು ಅವರ ವೃತ್ತಿ ಕೌಶಲ್ಯವನ್ನು ಪ್ರಸಕ್ತ ಮಾರುಕಟ್ಟೆಯ ಅಗತ್ಯ ಮತ್ತು ಅನುಕೂಲತೆಗೆ ತಕ್ಕಂತೆ ವೃದ್ಧಿಸಿಕೊಳ್ಳಲು ಅನುಕೂಲವಾಗುವಂತೆ ಆರ್ಥಿಕ ನೆರವನ್ನು ಒದಗಿಸಲು ಶ್ರಮಶಕ್ತಿ ಯೋಜನೆಯಡಿ 20 ಕೋಟಿ ರೂ.ಗಳನ್ನು ಮೀಸಲಿಡಲು ನಾನು ಉದ್ದೇಶಿಸಿದ್ದೇನೆ.

70. ಹಿಂದುಳಿದ ಜಾತಿಗಳ ಜಾತಿವಾರು ಸಮೀಕ್ಷೆ ಕಾರ್ಯವನ್ನು ಕೈಗೆತ್ತಿಕೊಳ್ಳಲು 2 ಕೋಟಿ ರೂ.ಗಳನ್ನು ಪ್ರಸಕ್ತ ವರ್ಷದಲ್ಲಿ ಒದಗಿಸುತ್ತಿದ್ದೇನೆ.

71. ಅಲ್ಪಸಂಖ್ಯಾತರ ಅಭಿವೃದ್ಧಿಗೆ ಸಂಬಂಧಿಸಿದ ಕಾರ್ಯಕ್ರಮಗಳು ವಿವಿಧ ಇಲಾಖೆಗಳ ನಡುವೆ ಹಂಚಿ ಹೋಗಿವೆ. ಪ್ರಸ್ತುತ ಅಲ್ಪಸಂಖ್ಯಾತರ ಅಭಿವೃದ್ಧಿ, ವಕ್ಫ್, ಹಜ್, ಉರ್ದು ಭಾಷೆ ಇತ್ಯಾದಿಗಳು ಬೇರೆ ಬೇರೆ ಇಲಾಖೆಗಳ ಅಡಿಯಲ್ಲಿವೆ. ಆದ್ದರಿಂದ ಅಲ್ಪಸಂಖ್ಯಾತರ ಅಭಿವೃದ್ಧಿಗೆ ವಿಶೇಷ ಒತ್ತು ನೀಡಲು ಈ ಎಲ್ಲಾ ಕಾರ್ಯಕ್ರಮಗಳನ್ನು ಒಂದೇ ಛಾವಣಿಯಡಿ ತಂದು ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಒಂದು ಸರ್ಕಾರದ ಕಾರ್ಯದರ್ಶಿ ಹುದ್ದೆಯನ್ನು ಸೃಜಿಸಲಾಗುವುದು.

72. ಅಲ್ಪಸಂಖ್ಯಾತ ಆಯೋಗಕ್ಕೆ ಮತ್ತು ವಕ್ಫ್ ಮಂಡಳಿಗೆ ಕಲ್ಯಾಣ ಕಾರ್ಯಕ್ರಮವನ್ನು ಕೈಗೊಂಡು ವಕ್ಫ್ ಆಸ್ತಿಗಳ ರಕ್ಷಣೆಗೆ ಅನುಕೂಲವಾಗುವಂತೆ ಹಂಚಿಕೆಯನ್ನು ಹೆಚ್ಚಿಸಲಾಗಿದೆ.

73. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗಗಳವರಿಗೆ ಸಾಕಷ್ಟು ಅವಕಾಶಗಳನ್ನು ಒದಗಿಸಲು ಸರ್ಕಾರಿ ಖರೀದಿ ಪ್ರಕ್ರಿಯೆಯಲ್ಲಿ ಅವಕಾಶ ಕಲ್ಪಿಸಲು ಯೋಜಿಸಲಾಗಿದೆ. ಈ ನಿಟ್ಟಿನಲ್ಲಿ ಸರಕು ಸಂಗ್ರಹಣೆಯಲ್ಲಿ ಕರ್ನಾಟಕ ಪಾರದರ್ಶಕತೆ ಅಧಿನಿಯಮದಿಂದ ವಿನಾಯಿತಿ ಪಡೆದಿರುವ ಮೊತ್ತದವರೆಗಿನ ಎಲ್ಲಾ ಸರ್ಕಾರಿ ಖರೀದಿ ಪ್ರಕ್ರಿಯೆಯಲ್ಲಿ ಪರಿಶಿಷ್ಟ ಜಾತಿ / ಪಂಗಡ ಹಾಗೂ ಅಲ್ಪಸಂಖ್ಯಾತರು ಮತ್ತು ಇತರೆ ಹಿಂದುಳಿದ ವರ್ಗಗಳಿಗೆ ಸೇರಿದವರಿಗೆ ಶೇಕಡ 50 ರವರೆಗೆ ಆದ್ಯತೆ ನೀಡಿ ಖರೀದಿಸಲಾಗುವುದು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ

74. ಸ್ತ್ರೀ ಶಕ್ತಿ ಯೋಜನೆಯು ಯಶಸ್ವಿ ಕಾರ್ಯಕ್ರಮವಾಗಿದೆ. ಇದನ್ನು ಮತ್ತಷ್ಟು ಸದೃಢಪಡಿಸಲು ನೂತನವಾಗಿ ರಚನೆಯಾಗುವ ಸ್ವಸಹಾಯ ತಂಡಗಳಿಗೆ ತರಬೇತಿ ಮತ್ತು ನೆರವು ನೀಡಲು 16 ಕೋಟಿ ರೂ.ಗಳ ಆವರ್ತ ನಿಧಿಯನ್ನು ಸ್ಥಾಪಿಸಲು ಉದ್ದೇಶಿಸಿದ್ದೇನೆ.

75. ಅಂಗನವಾಡಿ ಕೇಂದ್ರಗಳ ನಿರ್ಮಾಣಕ್ಕಾಗಿ ನಾನು 6 ಕೋಟಿ ರೂ.ಗಳನ್ನು ಮೀಸಲಿಡುತ್ತಿದ್ದೇನೆ.

ಉತ್ತರ ಕರ್ನಾಟಕಕ್ಕೆ ವಿಶೇಷ ಗಮನ

76. ಉತ್ತರ ಕರ್ನಾಟಕವು, ಕಳೆದ ಐದು ವರ್ಷಗಳಲ್ಲಿ ಜಿಲ್ಲಾ ವಲಯದ ವೇತನೇತರ ವೆಚ್ಚದಲ್ಲಿ ಸರಾಸರಿ ಕೇವಲ ಶೇಕಡಾ 30 ರಷ್ಟನ್ನು ಮತ್ತು ರಸ್ತೆ ಅಂದಾಜಿನಲ್ಲಿ ಶೇಕಡಾ 50 ರಷ್ಟನ್ನು ಪಡೆದಿದೆ.

77. ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಗೆ ಅನುದಾನವನ್ನು ಹೆಚ್ಚಿಸಲಾಗಿದೆ. ಬಹಳ ದಿನಗಳಿಂದ ಉಳಿದಿರುವ ಪ್ರಾಂತೀಯ ಅಸಮಾನತೆ ಸಮಸ್ಯೆಯನ್ನು ನಿವಾರಿಸಲು ಪ್ರಸ್ತುತ ಇರುವ ಪ್ಯಾಕೇಜ್ ಧೋರಣೆಗೆ ಬದಲಾಗಿ ನಾನು ಈ ಪ್ರಾಂತ್ಯಕ್ಕೆ ನಿರಂತರವಾಗಿ ಹಂಚಿಕೆ ಮುಂದುವರಿಸುವ ಕಡೆಗೆ ಹೆಚ್ಚು ಒತ್ತು ನೀಡಲು ಬಯಸುತ್ತಿದ್ದೇನೆ. ಪ್ರಾಂತೀಯ ಅಸಮಾನತೆಯ ಬಗ್ಗೆ ಉನ್ನತಾಧಿಕಾರಿ ಸಮಿತಿಯ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸಲು ನಮ್ಮ ಸರ್ಕಾರವು ಬದ್ಧವಾಗಿದೆ. ಉತ್ತರ ಕರ್ನಾಟಕದಲ್ಲಿ ಗುರುತಿಸಿರುವ ಅತಿ ಹೆಚ್ಚು ಹಿಂದುಳಿದ 37 ತಾಲ್ಲೂಕುಗಳ ವಲಯವಾರು ಅಂತರವನ್ನು ತುಂಬಲು ಸಮಗ್ರ ಅಭಿವೃದ್ಧಿಗೆ

ಆದ್ಯತೆ ನೀಡಲಾಗುವುದು. ಹಿಂದುಳಿದ ಪ್ರದೇಶಗಳ ಅಭಿವೃದ್ಧಿಗೆ ವಿಶೇಷ ಸ್ಥಾನಮಾನ ಸೌಲಭ್ಯ ನೀಡಿಕೆಗೆ ಅನುಗುಣವಾಗುವಂತೆ ಸಂವಿಧಾನದ 371 ನೇ ವಿಧಿಗೆ ತಿದ್ದುಪಡಿ ತರಲು ಕೇಂದ್ರ ಸರ್ಕಾರವನ್ನು ಒತ್ತಾಯಿಸಲಾಗುವುದು.

78. ಉತ್ತರ ಕರ್ನಾಟಕದ ಬಹಳ ದಿನಗಳ ಬೇಡಿಕೆಯಾದ ಹೈಕೋರ್ಟ್ ಪೀಠ ಸ್ಥಾಪನೆಗೆ ಪ್ರಸಕ್ತ ವರ್ಷ 20 ಕೋಟಿ ರೂಗಳನ್ನು ಒದಗಿಸಿದ್ದು ಅಗತ್ಯ ಬಿದ್ದಲ್ಲಿ ಇನ್ನೂ ಹೆಚ್ಚಿನ ಅನುದಾನವನ್ನು ನೀಡಲಾಗುವುದು. ಧಾರವಾಡದಲ್ಲಿ ವಿಜ್ಞಾನ ನಗರವನ್ನು ಸ್ಥಾಪಿಸುತ್ತಿದ್ದೇವೆ. ಗುಲ್ಬರ್ಗಾ ಜಿಲ್ಲೆಯ ಜೇವರ್ಗಿ ತಾಲ್ಲೂಕಿನಲ್ಲಿ ಆಹಾರ ಪಾರ್ಕ್‌ನ್ನು ಆರಂಭಿಸಲಾಗುವುದು. ಪ್ರಸ್ತುತ ಒಟ್ಟಾರೆ ಯೋಜನಾ ಗಾತ್ರದಲ್ಲಿ ಉತ್ತರ ಕರ್ನಾಟಕದ ಪಾಲು 7170 ಕೋಟಿ ರೂ.ಗಳಾಗಿದೆ. ಇದು ಒಟ್ಟಾರೆ ಯೋಜನಾ ಗಾತ್ರದಲ್ಲಿ ಶೇ. 54 ರಷ್ಟಾಗಿದೆ.

ಕನ್ನಡ ಮತ್ತು ಸಂಸ್ಕೃತಿ

79. ಕನ್ನಡ ನಾಡಿನ ನೆಲ, ಜಲ, ಭಾಷೆ, ಸಂಸ್ಕೃತಿಗಳ ಸಂರಕ್ಷಣೆ ಮತ್ತು ಅಭಿವೃದ್ಧಿ ನಮ್ಮ ಸರ್ಕಾರದ ಅಂತಃಶಕ್ತಿಯಾಗಿದೆ. ನಾಡು ಮತ್ತು ನುಡಿಯ ಕ್ರಿಯಾಶೀಲ ಮತ್ತು ಸೃಜನಶೀಲ ಬೆಳವಣಿಗೆಗಾಗಿ ಅರ್ಪಣಾ ಮನೋಭಾವದಿಂದ ದುಡಿಯುತ್ತಿರುವ ವಿವಿಧ ಅಕಾಡೆಮಿಗಳ ವಾರ್ಷಿಕ ಅನುದಾನವನ್ನು ಹೆಚ್ಚಿಸಲು ನಾನು ಉದ್ದೇಶಿಸಿದ್ದೇನೆ. ಇದೇ ಮಾದರಿಯಲ್ಲಿ ನಮ್ಮ ಭವ್ಯ ಪರಂಪರೆಯನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಮೈಸೂರು, ಶ್ರೀರಂಗಪಟ್ಟಣ, ಬೀದರ್, ವಿಜಾಪುರ, ಗುಲ್ಬರ್ಗಾ, ಕಿತ್ತೂರುಗಳನ್ನು ಪರಂಪರೆಯ ಕೇಂದ್ರಗಳೆಂದು ಘೋಷಿಸಲಾಗುವುದು. ಈ ಕೇಂದ್ರಗಳ ಸಂರಕ್ಷಣೆ ಮತ್ತು ಅಭಿವೃದ್ಧಿಗಾಗಿ 3 ಕೋಟಿ ರೂ.ಗಳನ್ನು ನಾನು ಒದಗಿಸುತ್ತಿದ್ದೇನೆ. ಇದರ ಜೊತೆಗೆ ಕೂಡಲಸಂಗಮ ಕ್ಷೇತ್ರವನ್ನು ಅಭಿವೃದ್ಧಿಪಡಿಸಿರುವ ಮಾದರಿಯಲ್ಲಿ ಬೀದರ್‌ನ ಬಸವಕಲ್ಯಾಣವನ್ನು ಅಭಿವೃದ್ಧಿಪಡಿಸಲಾಗುವುದು.

ಕೈಗಾರಿಕೆ ಮತ್ತು ಮೂಲ ಸೌಕರ್ಯಗಳು

80. ಸರ್ಕಾರವು ಸಣ್ಣ ಕೈಗಾರಿಕೆಗಳ ಸ್ಥಾಪನೆಯನ್ನು ಪ್ರೋತ್ಸಾಹಿಸಲು ಸಹಾಯಧನವನ್ನು ನೀಡುತ್ತಿದೆ. ಕಳೆದ ಕೆಲವಾರು ವರ್ಷಗಳಿಂದ ಈ ಸಹಾಯಧನಗಳು ವಿತರಣೆಯಾಗಿಲ್ಲ. ಇದರ ವಿತರಣೆಗೆ ಕ್ರಮಕೈಗೊಳ್ಳಲು ಅನುಕೂಲವಾಗುವಂತೆ 65 ಕೋಟಿ ರೂ.ಗಳನ್ನು ಎತ್ತುವಳಿ ಮಾಡಲು ಕರ್ನಾಟಕ ರಾಜ್ಯ ಹಣಕಾಸು ನಿಗಮಕ್ಕೆ ಅನುಮತಿ ನೀಡಲಾಗಿದೆ. ಸೂಕ್ತ ಪರಿಶೀಲನೆಯ ನಂತರ ಸಹಾಯಧನವನ್ನು ವಿತರಿಸಲಾಗುವುದು.

81. ಆರ್ಥಿಕ ಚಟುವಟಿಕೆಗಳಿಗೆ ಅವಕಾಶವಿರುವ ಕಡೆ ಉತ್ತೇಜನ ನೀಡುವ ಸಲುವಾಗಿ ನಾನು ಮೈಸೂರು ಮತ್ತು ಗುಲ್ಬರ್ಗಾಗಳಲ್ಲಿ ವಿಮಾನ ನಿಲ್ದಾಣಗಳನ್ನು ಸ್ಥಾಪಿಸಲು ಉದ್ದೇಶಿಸಿದ್ದು ಇದಕ್ಕಾಗಿ ಪ್ರಸಕ್ತ ವರ್ಷ 5 ಕೋಟಿ ರೂ.ಗಳನ್ನು ಒದಗಿಸುತ್ತಿದ್ದೇನೆ.

82. ಕೈಗಾರಿಕಾ ಮೂಲ ಸೌಕರ್ಯ ನಿರ್ಮಾಣ ಕಾರ್ಯಗಳನ್ನು ಮೂಲ ಸೌಕರ್ಯ ನಿಧಿಯ ವ್ಯಾಪ್ತಿಗೆ ತರಲು ನಾನು ಉದ್ದೇಶಿಸಿದ್ದೇನೆ. ಕೈಗಾರಿಕಾ ಮೂಲ ಸೌಕರ್ಯ ಯೋಜನೆಗಳಿಗೆ ಇದು ಹೆಚ್ಚಿನ ಚಾಲನೆ ನೀಡುತ್ತದೆ ಎನ್ನುವುದು ನನ್ನ ವಿಶ್ವಾಸ.

83. ಜೈವಿಕ ತಂತ್ರಜ್ಞಾನವು ಉದಯಿಸುತ್ತಿರುವ ಉದ್ಯಮವಾಗಿದೆ. ಕರ್ನಾಟಕವು ಈಗಾಗಲೇ ಜೈವಿಕ ತಂತ್ರಜ್ಞಾನ ವಲಯದಲ್ಲಿ ಮುಂಚೂಣಿಯಲ್ಲಿದ್ದು ಇದಕ್ಕೆ ಮತ್ತಷ್ಟು ಉತ್ತೇಜನ ನೀಡಲು ಜೈವಿಕ ತಂತ್ರಜ್ಞಾನ ಮತ್ತು ಅನ್ವಯಿಕ ಜೈವಿಕ ಮಾಹಿತಿ ತಂತ್ರಜ್ಞಾನ ಸಂಸ್ಥೆಯ ಸ್ಥಾಪನೆಗೆ 10 ಕೋಟಿ ರೂಗಳ ನೆರವನ್ನು ಮೂಲಸೌಕರ್ಯ ಚಾಲನಾ ನಿಧಿಯಿಂದ ನೀಡಲು ಉದ್ದೇಶಿಸಿದ್ದೇನೆ.

84. ಸುಮಾರು 20 ಸಾವಿರ ಹಳ್ಳಿಗಳು ಮತ್ತು 74 ಲಕ್ಷ ಪ್ರಯಾಣಿಕರು ರಾಜ್ಯ ರಸ್ತೆ ಸಾರಿಗೆ ನಿಗಮದ ಸೇವೆ ಪಡೆಯುತ್ತಿದ್ದಾರೆ. ಈ ಸಾರಿಗೆ ವ್ಯವಸ್ಥೆಯ ಸೌಲಭ್ಯಗಳನ್ನು ವಿಸ್ತರಿಸುವ ದಿಕ್ಕಿನಲ್ಲಿ ಪ್ರಯತ್ನ ನಡೆಸಲಾಗುತ್ತಿದೆ. ತಾಲ್ಲೂಕು ಕೇಂದ್ರ ಸ್ಥಳಗಳಲ್ಲಿನ ಬಸ್ ನಿಲ್ದಾಣಗಳನ್ನು ಮೇಲ್ದರ್ಜೆಗೇರಿಸುವುದು, ಗ್ರಾಮೀಣ ಬಸ್ ನಿಲ್ದಾಣಗಳಲ್ಲಿ ಕಾಯುವಿಕೆ ಕೊಠಡಿ ಮತ್ತು ಶೌಚಾಲಯ ನಿರ್ಮಿಸುವುದು ಮತ್ತು ದೀರ್ಘ ಪ್ರಯಾಣದ ಪ್ರಯಾಣಿಕರಿಗೆ ರಸ್ತೆ ಬದಿಗಳಲ್ಲಿ ಸೌಕರ್ಯ ಕಲ್ಪಿಸುವುದು ನಮ್ಮ ಆದ್ಯತೆಯಾಗಿದೆ. ಮೂಲ ಸೌಕರ್ಯಗಳ ಚಾಲನಾ ನಿಧಿಯ ಮೂಲಕ ಇವುಗಳಿಗೆ ಬೆಂಬಲ ನೀಡಲು ನಾನು ಉದ್ದೇಶಿಸಿದ್ದೇನೆ.

ನೇಕಾರರ ಪ್ಯಾಕೇಜ್

85. ಕರ್ನಾಟಕದಲ್ಲಿ ಸುಮಾರು 80,000 ನೇಕಾರ ಕುಟುಂಬಗಳಿವೆ. ಇವರಿಗೆ ಅನುಕೂಲ ಕಲ್ಪಿಸಲು **20 ಕೋಟಿ ರೂ.ಗಳ** ನೇಕಾರರ ಪ್ಯಾಕೇಜ್‌ನ್ನು ನಾನು ಪ್ರಸ್ತಾಪಿಸುತ್ತಿದ್ದೇನೆ. ಈ ಪ್ಯಾಕೇಜ್ ಕೆಳಕಂಡ ಸೌಲಭ್ಯಗಳನ್ನು ಒಳಗೊಂಡಿದೆ.

- ನಾಲ್ಕು ಮಗ್ಗಗಳಿಗಿಂತ ಕಡಿಮೆ ವಿದ್ಯುತ್ ಮಗ್ಗಗಳನ್ನು ಹೊಂದಿರುವ ನೇಕಾರರಿಗೆ ಸೂಕ್ತ ವಿದ್ಯುತ್ ಸಹಾಯಧನ.
- ವಿದ್ಯುತ್ ಮಗ್ಗಗಳ ವಲಯದಲ್ಲಿರುವ ನೇಕಾರರಿಗೂ ವಸತಿ ಮತ್ತು ಕಾರ್ಯ ಸ್ಥಳದ ಸೌಲಭ್ಯದ ವಿಸ್ತರಣೆ.
- ಕೈಮಗ್ಗ ಮತ್ತು ವಿದ್ಯುತ್ ಮಗ್ಗಗಳ ನೇಕಾರರಿಬ್ಬರಿಗೂ ಸೂಕ್ತ ಆರೋಗ್ಯ ವಿಮಾ ಯೋಜನೆಯ ವಿಸ್ತರಣೆ.
- ಉತ್ತಮ ಗುಣಮಟ್ಟದ ಕಚ್ಚಾ ವಸ್ತುಗಳ ಪೂರೈಕೆ.
- ನೇಕಾರರಿಗೆ ಮುಂಗಡ ಹಣದ ನೆರವು ಒದಗಿಸಲು ವ್ಯವಸ್ಥೆ.
- ವೃತ್ತಿ ಕೌಶಲ್ಯ ವೃದ್ಧಿಗೆ ಅವಕಾಶ.

86. ನಮ್ಮ ರಾಜ್ಯದ ಯುವ ಸಮೂಹದ ಪ್ರತಿಭೆಯನ್ನು ಗುರುತಿಸಿ ಅಭಿವೃದ್ಧಿಗೊಳಿಸಿ ಮಾನವ ಸಂಪನ್ಮೂಲವನ್ನು ರೂಢಿಸುವುದು ಅಗತ್ಯವಾಗಿದೆ. ಈ ದಿಕ್ಕಿನಲ್ಲಿ ಗ್ರಾಮೀಣ ಮತ್ತು ನಗರ ಪ್ರದೇಶದ ನಿರುದ್ಯೋಗಿ ಯುವ ಸಮೂಹಕ್ಕೆ ತರಬೇತಿ ನೀಡಿ ಕೌಶಲ್ಯವನ್ನು ವೃದ್ಧಿಸಿ ಸ್ವಯಂ ಉದ್ಯೋಗಕ್ಕೆ ತೊಡಗಿಸಲು ಯೋಜನೆಯೊಂದನ್ನು ರೂಪಿಸಲಾಗುವುದು.

87. ಭಾರತೀಯ ಸೇನೆಗೆ ಕರ್ನಾಟಕದ ಅದರಲ್ಲೂ ವಿಶೇಷವಾಗಿ ಕೊಡಗು ಜಿಲ್ಲೆಯ ಕೊಡುಗೆ ಗಣನೀಯವಾಗಿದೆ. ನಮ್ಮ ಯುವಕರು ಹೆಚ್ಚು ಹೆಚ್ಚಾಗಿ ಸೇನೆಗೆ ಸೇರಲು ಉತ್ತೇಜನ ನೀಡುವ ಸಲುವಾಗಿ ನಾನು ಕೊಡಗು ಜಿಲ್ಲೆಯಲ್ಲಿ ಸೈನಿಕ ಶಾಲೆಯೊಂದನ್ನು ಸ್ಥಾಪಿಸಲು ಉದ್ದೇಶಿಸಿದ್ದೇನೆ. ಇದಕ್ಕಾಗಿ ಒಂದು ಕೋಟಿ ರೂ.ಗಳನ್ನು ಮೀಸಲಿಡುತ್ತಿದ್ದೇನೆ.

ಉತ್ತಮ ಆಡಳಿತದ ಕಡೆಗೆ

88. ಅಧಿಕ ವೆಚ್ಚದ ಸಾರ್ವಜನಿಕ ಸೇವೆ ವಿತರಣೆಯು ಬಡ ಜನತೆಗೆ ಹೊರೆಯಾಗುತ್ತಿದೆ. ಈ ನಿಟ್ಟಿನಲ್ಲಿ ಪ್ರತಿಸ್ಪಂದಿಯಾದ ಮತ್ತು ಹೊಣೆಗಾರರೂ ಆಗಿರುವ ಆಡಳಿತವನ್ನು ನೀಡಲು ನಾನು ಪ್ರಯತ್ನಿಸುತ್ತೇನೆ.

89. ಸುಧಾರಣಾ ಪ್ರಯತ್ನಗಳ ಸ್ವರೂಪಗಳನ್ನು ಈ ಕೆಳಗೆ ನೀಡಲಾಗಿದೆ.

- ಸರ್ಕಾರಿ ಸಿಬ್ಬಂದಿ ಸಂಖ್ಯೆಯ ಸರಿಗಾತ್ರಕ್ಕೆ ಪ್ರಥಮ ಆದ್ಯತೆ. ಎಲ್ಲಾ ಇಲಾಖೆಗಳ ಕಾರ್ಯ ಚಟುವಟಿಕೆಗಳ ಮರುಪರಿಶೀಲನೆ. ಸೂಕ್ತವಾದ ಕಡೆ ಸಿಬ್ಬಂದಿ ಮರುನಿಯೋಜನೆ. ಅಗತ್ಯವಿದ್ದ ಕಡೆ ಸ್ವಯಂ ನಿವೃತ್ತಿ ಸೌಲಭ್ಯದ ವಿಸ್ತರಣೆ. ನೇಮಕಾತಿಯ ಸ್ಥಗಿತತೆ ಮುಂದುವರೆಯುತ್ತದೆ.
- ಸಚಿವರುಗಳ ಸಂಖ್ಯೆ ಕುಗ್ಗಿರುವುದನ್ನು ಆಧರಿಸಿ ಅದಕ್ಕೆ ಅನುಗುಣವಾಗಿ ವಿವಿಧ ಇಲಾಖೆಗಳನ್ನು ಮರು ಜೋಡಿಸಲಾಗುವುದು.
- ಭಾರತ ಸರ್ಕಾರದ ಮಾದರಿಯಲ್ಲಿ ಕೊಡುಗೆ ಆಧಾರಿತ ಪಿಂಚಣಿ ಯೋಜನೆಯನ್ನು ಬಂಡವಾಳ ನಿಧಿ ಸ್ಥಾಪಿಸುವ ಮೂಲಕ ಆರಂಭಿಸಲಾಗುವುದು. ಭಾರತೀಯ ರಿಸರ್ವ್ ಬ್ಯಾಂಕ್ ಪಿಂಚಣಿ ಸುಧಾರಣೆಗಾಗಿ ರಚಿಸಿದ್ದ ಸಮಿತಿಯ ಶಿಫಾರಸ್ಸುಗಳನ್ನು ಸಂಪೂರ್ಣವಾಗಿ ಅನುಷ್ಠಾನಗೊಳಿಸಲಾಗುವುದು.
- ಆಡಳಿತ ವೆಚ್ಚದಲ್ಲಿ ಮಿತವ್ಯಯವು ಮುಂದುವರೆಯಲಿದೆ.

ವಿದ್ಯುತ್ ವಲಯದಲ್ಲಿ ಸುಧಾರಣೆ

90. ವಿದ್ಯುತ್ ವಲಯದ ಬಿಕ್ಕಟ್ಟನ್ನು ಬಗೆಹರಿಸದಿದ್ದರೆ, ಸರ್ಕಾರದ ಎಲ್ಲಾ ವಿತ್ತೀಯ ಸುಧಾರಣಾ ಕ್ರಮಗಳು ಮತ್ತು ಪ್ರಮುಖ ವಲಯಗಳಿಗೆ ಒದಗಿಸುತ್ತಿರುವ ಹೆಚ್ಚಿನ ಹಂಚಿಕೆ ಇವೆಲ್ಲವೂ ವ್ಯರ್ಥವಾಗುತ್ತವೆ. 2003-04ನೇ ಸಾಲಿಗೆ ಅಂತ್ಯಗೊಂಡ ವರ್ಷದಲ್ಲಿ ವಿದ್ಯುತ್ ವಲಯವು ಸುಮಾರು 3000 ಕೋಟಿ ರೂಗಳ ನಷ್ಟವನ್ನು ಅನುಭವಿಸಿದೆ.

91. ಈ ನಷ್ಟದ ಪ್ರಮಾಣವು ಸರ್ಕಾರವು ಶಾಲಾ ಶಿಕ್ಷಣಕ್ಕೆ ಮಾಡುತ್ತಿರುವ ವೆಚ್ಚಕ್ಕೆ ಸಮಾನವಾಗಿದೆ. ಹಾಗೆಯೇ ಆರೋಗ್ಯ ಅಥವಾ ಕೃಷಿ ವಲಯಕ್ಕೆ ಮಾಡುತ್ತಿರುವ ವೆಚ್ಚದ ಮೂರು ಪಟ್ಟು ವೆಚ್ಚಕ್ಕೆ ಸಮಾನವಾಗಿದೆ. ವಿದ್ಯುತ್ ವಲಯದ ಸಮಸ್ಯೆಯ ಪ್ರಮಾಣ ಇದರಿಂದ ಅರ್ಥವಾಗುತ್ತದೆ.

92. ಈ ಪ್ರಮಾಣದ ನಷ್ಟವನ್ನು ಭರಿಸುವುದು ಕಷ್ಟ ಸಾಧ್ಯ. ಆಯವ್ಯಯದಲ್ಲಿ ಒದಗಿಸಿರುವ ಸಹಾಯಧನದ ಜೊತೆಗೆ ಎಸ್ಕಾಮ್‌ಗಳು ಮತ್ತು ಕೆಪಿಟಿಸಿಎಲ್ ಗಳು ತಮ್ಮ ದಕ್ಷತೆ ಮತ್ತು ವಾರ್ಷಿಕ ಸಂಪನ್ಮೂಲ ಸಂಗ್ರಹಣೆ ಹಾಗೂ ವೆಚ್ಚ ನಿಯಂತ್ರಣ ಕ್ರಮಗಳ ಮೂಲಕ ಉಳಿದ ನಷ್ಟವನ್ನು ಕಡಿಮೆ ಮಾಡಿಕೊಳ್ಳಬೇಕು.

- ವಸೂಲಾತಿ ದಕ್ಷತೆಯನ್ನು ಪ್ರಸ್ತುತ ಇರುವ ಶೇಕಡ 85 ರ ಮಟ್ಟದಿಂದ ಈ ವರ್ಷದೊಳಗೆ ಕನಿಷ್ಟ ಶೇಕಡ 95ಕ್ಕೆ ಹೆಚ್ಚಿಸಿಕೊಳ್ಳಬೇಕು. ವಿದ್ಯುತ್ ಸಂಪರ್ಕ ತೆಗೆಯುವುದನ್ನು ತಪ್ಪಿಸಿಕೊಳ್ಳಲು ಗ್ರಾಹಕರು ವಿದ್ಯುತ್ ಬಾಕಿಯನ್ನು ಪಾವತಿಸಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ.

- ವಾಣಿಜ್ಯ ನಷ್ಟವನ್ನು ತೊಡೆದು ಹಾಕಲು ವಿದ್ಯುತ್ ಕಳವು ವಿರೋಧಿ ಕಾಯಿದೆಯನ್ನು ಕಟ್ಟು ನಿಟ್ಟಾಗಿ ಜಾರಿಗೊಳಿಸಬೇ ಕು. ವಿದ್ಯುತ್ ಕಳ್ಳತನದ ವಿರುದ್ಧ ವ್ಯಾಪಕ ಪ್ರಚಾರ ಕೈಗೊಂಡು ತಪ್ಪಿತಸ್ಥರನ್ನು ಕಠಿಣ ಶಿಕ್ಷೆಗೆ ಒಳಪಡಿಸಬೇಕು.
- ತಾಂತ್ರಿಕ ಮತ್ತು ವಾಣಿಜ್ಯ ನಷ್ಟಗಳನ್ನು ಕಡಿಮೆ ಮಾಡಲು ಕಟ್ಟುನಿಟ್ಟಾದ ವಿದ್ಯುತ್ ತಪಾಸಣೆಯನ್ನು ಕೈಗೊಳ್ಳಬೇಕು. ಈ ಉದ್ದೇಶಕ್ಕಾಗಿ ಎಲ್ಲಾ ಗ್ರಾಹಕರಿಗೂ ಮೀಟರ್ ಅಳವಡಿಸಲಾಗುವುದು.
- ಸರ್ಕಾರ ಮತ್ತು ಎಸ್ಕಾಮ್‌ಗಳ ನಡುವೆ ಪ್ರಗತಿಯನ್ನು ಆಧರಿಸಿದ ಒಡಂಬಡಿಕೆ ಮಾಡಿಕೊಂಡು ನಿಗದಿತ ಪ್ರಗತಿ ಮಾನದಂಡಗಳನ್ನು ಅನುಸರಿಸಿ ಸಹಾಯಧನ ಬಿಡುಗಡೆ ಮಾಡಲಾಗುವುದು.
- ವಿದ್ಯುತ್ ವಲಯದ ಹಣಕಾಸು ಹೊರೆಯನ್ನು ಕಡಿಮೆ ಮಾಡಿಕೊಳ್ಳುವ ನಿಟ್ಟಿನಲ್ಲಿ ವಿದ್ಯುತ್ ಸರಬರಾಜು ನಿಯಂತ್ರಣವು ಪ್ರಮುಖ ಅಂಶವಾಗಿದೆ. ಇದನ್ನು ಕಟ್ಟುನಿಟ್ಟಾಗಿ ಉಸ್ತುವಾರಿ ಮಾಡಲಾಗುವುದು. ಉತ್ಪಾದಕ ಕಾರ್ಯ ಚಟುವಟಿಕೆಗಳ ವೆಚ್ಚಕ್ಕೆ ಅವಕಾಶ ಕಲ್ಪಿಸಲು ಆಯವ್ಯಯದಲ್ಲಿ ಸೇರದಿರುವ ವಿದ್ಯುತ್ ಸಹಾಯಧನದ ಏರಿಕೆಗೆ ನಿಷೇಧ ಹೇರಲಾಗುತ್ತದೆ. ವಿದ್ಯುತ್ ವಲಯದ ಸಹಾಯಧನದ ಮೇಲೆ ಪ್ರಭಾವ ಬೀರುವ ಯಾವುದೇ ನೀತಿ ಬದಲಾವಣೆಗಳನ್ನು ಇನ್ನು ಮುಂದೆ ಹಣಕಾಸು ಸಚಿವರ ಪೂರ್ವಾನುಮತಿ ಪಡೆದು ಜಾರಿಗೊಳಿಸಬೇಕು.

93. ರಾಜ್ಯದಲ್ಲಿ ಏರುತ್ತಿರುವ ವಿದ್ಯುತ್ ಬೇಡಿಕೆಯನ್ನು ಈಡೇರಿಸಲು ವಿದ್ಯುತ್ ವಲಯದಲ್ಲಿ ವ್ಯಾಪಕ ಸುಧಾರಣೆಗಳು ಮತ್ತು ವಿತ್ತೀಯ ದೃಢತೆ ಅತ್ಯಗತ್ಯವಾಗಿದೆ. ಈ ಎಲ್ಲಾ ಕ್ರಮಗಳ ಮೂಲಕ ಗ್ರಾಮೀಣ ಪ್ರದೇಶಕ್ಕೆ ಉತ್ತಮ ಗುಣಮಟ್ಟದ ವಿದ್ಯುತ್‌ನ್ನು ಪೂರೈಸಲು ಸರ್ಕಾರವು ಕ್ರಮಕೈಗೊಳ್ಳಲಿದೆ.

ಮುಖ್ಯಮಂತ್ರಿಗಳ ರಸ್ತೆ ನಿಧಿ

94. ಕಳೆದ ದಶಕದಲ್ಲಿ ನಾವು ಗಣನೀಯ ಪ್ರಮಾಣದಲ್ಲಿ ಹೊಸ ರಸ್ತೆಗಳನ್ನು ಸೇರಿಸಿದ್ದೇವೆ. ಇದರಲ್ಲಿ ರಾಜ್ಯ ಹೆದ್ದಾರಿಗಳು, ಮುಖ್ಯ ಜಿಲ್ಲಾ ರಸ್ತೆಗಳು, ಇತರೆ ಜಿಲ್ಲಾ ರಸ್ತೆಗಳು ಮತ್ತು ಗ್ರಾಮೀಣ ರಸ್ತೆಗಳು ಸೇರಿವೆ. ಇದನ್ನು ರಾಜ್ಯದ ನಿಧಿ, ಕೇಂದ್ರದ ನೆರವು, ಆಯವ್ಯಯೇತರ ಎತ್ತುವಳಿ ಮತ್ತು ವಿದೇಶಿ ನೆರವಿನ ಯೋಜನೆಗಳ ಮೂಲಕ ಸಾಧಿಸಲಾಗಿದೆ. ಈ ಬೃಹತ್ ರಸ್ತೆ ಜಾಲದ ಸಂಪೂರ್ಣ ಫಲವನ್ನು ಪಡೆಯಲು ಈ ರಸ್ತೆಗಳನ್ನು ಅತ್ಯುತ್ತಮ ಮಟ್ಟದಲ್ಲಿ ನಿರ್ವಹಿಸಬೇಕು.

95. ರಸ್ತೆ ನಿರ್ವಹಣೆಯ ನಿಧಿಯನ್ನು ಒಗ್ಗೂಡಿಸಲು ರಸ್ತೆ ನಿರ್ವಹಣೆಯ ನಮ್ಮ ಮೂಲಭೂತ ಧೋರಣೆಯೇ ಬದಲಾವಣೆಯಾಗಬೇಕು. ಆದ್ದರಿಂದ ನಾನು ರಸ್ತೆ ನಿರ್ವಹಣೆಯನ್ನು ಇನ್ನು ಮುಂದೆ ನಿಧಿ ಹೂಡಿತ ಚಟುವಟಿಕೆಯನ್ನಾಗಿ ಪರಿವರ್ತಿಸಲು ಉದ್ದೇಶಿಸಿದ್ದೇನೆ. ಇನ್ನು ಮುಂದೆ ಕರ್ನಾಟಕದ ಎಲ್ಲಾ ರಸ್ತೆಗಳು ಮುಖ್ಯಮಂತ್ರಿಗಳ

ರಸ್ತೆ ನಿಧಿಯ ವ್ಯಾಪ್ತಿಗೆ ಬರುತ್ತವೆ. ರಸ್ತೆ ಕರ ಮತ್ತು ಸೂಕ್ತ ಟೋಲಿಂಗ್ ನೀತಿಯ ಮೂಲಕ ರಸ್ತೆ ನಿಧಿಗೆ ಬೆಂಬಲ ನೀಡಲಾಗುವುದು. ಕಟ್ಟುನಿಟ್ಟಾದ ನಿರ್ವಹಣಾ ಮಟ್ಟದ ನಿಗದಿ, ಕಾರ್ಯಾಚರಣೆಯಲ್ಲಿ ಪಾರದರ್ಶಕತೆ ಮತ್ತು ರಸ್ತೆಗಳ ಆಯ್ಕೆಯಲ್ಲಿ ಸೂಕ್ತವಾದ ಅರ್ಹತಾ ಮಾನದಂಡ ಇವುಗಳನ್ನು ನಿಧಿಯಲ್ಲಿ ಪರಿಪಾಲಿಸಲಾಗುವುದು.

ವಾರ್ಷಿಕ ಯೋಜನೆ 2004-05

96. ನಾನು ವಾರ್ಷಿಕ ಯೋಜನೆಯ ಅಂದಾಜನ್ನು 2003-04ರ (ಪರಿಷ್ಕೃತ ಅಂದಾಜು) 10083.51 ಕೋಟಿ ರೂ.ಗಳಿಂದ 2004-05ರಲ್ಲಿ (ಮುಂಗಡ ಅಂದಾಜು) 12322.92 ಕೋಟಿ ರೂ.ಗಳಿಗೆ ಹೆಚ್ಚಿಸಿದ್ದೇನೆ. ಇದು ಯೋಜನಾ ಅಂದಾಜು ವೆಚ್ಚದಲ್ಲಿ ಶೇ.22.2 ರಷ್ಟು ಹೆಚ್ಚಳವಾಗಿದೆ. ಪ್ರಮುಖ ವಲಯವಾರು ಹಂಚಿಕೆಗಳನ್ನು ಅನುಬಂಧ-1ರಲ್ಲಿ ನೀಡಲಾಗಿದೆ.

ನಾನು ಈಗ ತೆರಿಗೆ ಪ್ರಸ್ತಾವಗಳನ್ನು ಮಂಡಿಸುತ್ತೇನೆ.

ವಾಣಿಜ್ಯ ತೆರಿಗೆಗಳು

ಮಾರಾಟ ತೆರಿಗೆ:

ತೆರಿಗೆಗಳಲ್ಲಿ ಕಡಿತ ಮತ್ತು ದರಗಳಲ್ಲಿ ಸುಧಾರಣೆ

97. ಈ ಆಯವ್ಯಯದಲ್ಲಿ ನನ್ನ ತೆರಿಗೆ ಕ್ರಮಗಳಲ್ಲಿ ಎರಡು ರೀತಿಯ ಒತ್ತು ಇರುತ್ತದೆ. ಮೊದಲನೆಯದು ತೆರಿಗೆ ಭಾಧ್ಯತೆಯನ್ನು ಕಡಿಮೆಗೊಳಿಸುವ ಮೂಲಕ ಸಾಮಾನ್ಯ ಜನರ ಮೇಲೆ ತೆರಿಗೆ ಹೊರೆಯನ್ನು ಕಡಿಮೆ ಮಾಡುವುದು. ಈ ರೀತಿ ಮಾಡುವಾಗ ಜನ ಸಾಮಾನ್ಯರ ಬಳಕೆ ವಸ್ತುಗಳು, ಹೂಡುವಳಿ ಮತ್ತು ಕಚ್ಚಾ ಪದಾರ್ಥಗಳು ಗ್ರಾಮೀಣ ಆರ್ಥಿಕ ವ್ಯವಸ್ಥೆ ಹಾಗೂ ಬಡವರ ಮೇಲೆ ಪರಿಣಾಮವಾಗುವ ಸರಕುಗಳು ಮತ್ತು ಬಳಕೆ ವಸ್ತುಗಳನ್ನು ಕಡಿಮೆ ತೆರಿಗೆ ದರಗಳಡಿಯಲ್ಲಿ ತರಲಾಗಿದೆ. ಸಾಧ್ಯವಾದಷ್ಟು ಸಾಮಾನ್ಯ ಜನರ ಬಳಕೆ ವಸ್ತುಗಳನ್ನು ಶೇಕಡಾ 1 ಮತ್ತು ಶೇಕಡಾ 4ರ ತೆರಿಗೆ ದರಗಳಡಿಯಲ್ಲಿ ತರಲು ಹಾಗೂ ಅಂತಹ ಕೆಲವು ಸರಕುಗಳ ಮೇಲೆ ತೆರಿಗೆ ವಿನಾಯಿತಿಯನ್ನು ಮುಂದುವರೆಸಲು ನಾನು ಪ್ರಯತ್ನಿಸಿರುತ್ತೇನೆ. ಅದರಂತೆ 125 ಸರಕುಗಳು ಮತ್ತು 43 ಗುತ್ತಿಗೆ ಕಾಮಗಾರಿಗಳ ಮೇಲೆ ನಾನು ತೆರಿಗೆಗಳನ್ನು ಕಡಿಮೆ ಮಾಡಿರುತ್ತೇನೆ. ಇದರಿಂದಾಗಿ ಸುಮಾರು 100 ಕೋಟಿ ರೂಪಾಯಿಗಳ ತೆರಿಗೆ ಆದಾಯ ನಷ್ಟವಾಗಲಿದ್ದು, ಅದನ್ನು ಹೆಚ್ಚಿನ ಕಟ್ಟುನಿಟ್ಟಿನ ಜಾರಿ ಕ್ರಮದಿಂದ ಮತ್ತು ಅನುಸರಣೆ ಸುಧಾರಣೆ ಮೂಲಕ ತುಂಬಲು ನಾನು ಪ್ರಸ್ತಾವಿಸುತ್ತೇನೆ.

98. ಎರಡನೇಯದು ಪ್ರಸ್ತುತ 14 ದರಗಳಿಂದ 7 ದರಗಳಿಗೆ ತೆರಿಗೆ ದರಗಳ ಸಂಖ್ಯೆಯನ್ನು ಇಳಿಸುವ ಮೂಲಕ ತೆರಿಗೆ ದರಗಳ ಸುಧಾರಣೆ. ಪ್ರಸ್ತುತ 9 ಮೂಲ ತೆರಿಗೆ ದರಗಳಿದ್ದು, ಅದನ್ನು 4 ದರಗಳಿಗೆ ನಾನು ಇಳಿಸುತ್ತಿದ್ದೇನೆ. ಬಹುತೇಕ ಸರಕುಗಳನ್ನು ಮೂಲ ತೆರಿಗೆ ದರಗಳಾದ ಶೇಕಡಾ 4, 8, 12 ಮತ್ತು 16 ಅಡಿಯಲ್ಲಿ ತರಲಾಗುತ್ತಿದೆ. ಕೆಲವು ಆಯ್ದ ಸರಕುಗಳನ್ನು ಮಾತ್ರ ಶೇಕಡಾ 1, 20 ಮತ್ತು 28ರ ವಿಶೇಷ ದರಗಳಡಿಯಲ್ಲಿ ತರಲಾಗುತ್ತಿದೆ. ಶೇಕಡಾ 17.5 ವಿಶೇಷ ದರವನ್ನು ರದ್ದುಪಡಿಸಲು ನಾನು ಪ್ರಸ್ತಾವಿಸುತ್ತಿದ್ದೇನೆ.

ಈ ಪ್ರಸ್ತಾವಿತ ಮರುವರ್ಗೀಕರಣದಲ್ಲಿ ತೆರಿಗೆ ದರಗಳ ಪರಿಷ್ಕರಣೆಯಾಗುವ ಸರಕುಗಳ ಪಟ್ಟಿಯನ್ನು ಅನುಬಂಧ **II** ಮತ್ತು **VI** ರಲ್ಲಿ ಒದಗಿಸಲಾಗಿದೆ.

ಪರಿಹಾರಗಳು ಮತ್ತು ರಿಯಾಯಿತಿಗಳು

99. ವಾಣಿಜ್ಯ ಮತ್ತು ಕೈಗಾರಿಕೆಗಳು ಹಲವಾರು ತೆರಿಗೆ ಪರಿಹಾರಗಳು ಮತ್ತು ರಿಯಾಯಿತಿಗಳ ಬಗ್ಗೆ ಕೋರಿಕೆಗಳನ್ನು ಸಲ್ಲಿಸಿವೆ. ಅವರ ಕೆಲವು ಕೋರಿಕೆಗಳನ್ನು ಮಾತ್ರ ಪರಿಗಣಿಸಲು ನನಗೆ ಸಾಧ್ಯವಾಗಿದ್ದು, ಒಣದ್ರಾಕ್ಷಿ, ಕುಸುಬೆ ಬೀಜ ಮುಂತಾದ ಕೆಲವು ಸರಕುಗಳ ಮೇಲೆ ತೆರಿಗೆ ವಿನಾಯಿತಿ ಮತ್ತು ರಿಯಾಯಿತಿ ನೀಡಲು ನಾನು ಪ್ರಸ್ತಾವಿಸುತ್ತೇನೆ. ವಿವರಗಳನ್ನು ಅನುಬಂಧ **III** ರಲ್ಲಿ ಒದಗಿಸಲಾಗಿದೆ.

100. ತೆರಿಗೆ ಪಾಲನೆಯನ್ನು ಹೆಚ್ಚಿಸಲು ಮೊಬೈಲ್ ಫೋನ್‌ಗಳ ಮೇಲಿನ ಮರು ಮಾರಾಟ ತೆರಿಗೆಯನ್ನು ವಿನಾಯಿತಿಗೊಳಿಸಲು ನಾನು ಪ್ರಸ್ತಾವಿಸುತ್ತೇನೆ.

101. ಒರಟು ಗ್ರಾನೈಟ್ ಕಲ್ಲುಗಳ ಮೇಲೆ ಮತ್ತು ನಯ ಮಾಡಿದ ಗ್ರಾನೈಟ್ ಕಲ್ಲುಗಳ ಮೇಲೆ ಎರಡು ಬಾರಿ ತೆರಿಗೆ ವಿಧಿಸುವ ಸಮಸ್ಯೆಯ ಬಗ್ಗೆ ಗ್ರಾನೈಟ್ ಕೈಗಾರಿಕೆಯು ಪೂರ್ವಾನ್ವಯವಾಗುವಂತೆ ತೆರಿಗೆ ರಿಯಾಯಿತಿ ಕೋರಿರುತ್ತಾರೆ. ಗ್ರಾನೈಟ್ ಕೈಗಾರಿಕೆಗೆ ಸೂಕ್ತ ರಿಯಾಯಿತಿ ನೀಡಲು ನಾನು ಪ್ರಸ್ತಾವಿಸುತ್ತೇನೆ.

ಸುಧಾರಣಾ ಮತ್ತು ಆಡಳಿತಾತ್ಮಕ ಕ್ರಮಗಳು

102. ತೆರಿಗೆ ಆಡಳಿತವನ್ನು ಸರಳೀಕರಿಸಲು ಮತ್ತು ತೆರಿಗೆ ಪಾಲನೆಯನ್ನು ಉತ್ತೇಜಿಸಲು ನಾನು ಪ್ರಸ್ತಾವಿಸುತ್ತೇನೆ. ಈ ಕ್ರಮಗಳ ವಿವರಗಳು ಅನುಬಂಧ **IV** ರಲ್ಲಿ ಇವೆ.

103. ಕೆಲವು ಭಾರಿ ಮೌಲ್ಯದ ಸರಕುಗಳ ಮೇಲೆ ನೆರೆ ರಾಜ್ಯಗಳಲ್ಲಿ ಕಡಿಮೆ ದರದ ತೆರಿಗೆಯಿಂದಾಗಿ ವ್ಯಾಪಾರ ಪಲ್ಲಟ ಉಂಟಾಗಿದೆ. ಈ ಪರಿಸ್ಥಿತಿಯನ್ನು ಸರಿಪಡಿಸಲು, ನಾನು ಅನುಬಂಧ **III** ರಲ್ಲಿ ಹೇಳಿರುವ ಕೆಲವು ಸರಕುಗಳ ಮೇಲಿನ ತೆರಿಗೆಯನ್ನು ಇಳಿಸಲು ಪ್ರಸ್ತಾವಿಸುತ್ತೇನೆ.

104. ಇದಲ್ಲದೆ ನಮ್ಮ ಅನುಸರಣಾ ಜಾರಿ ಕ್ರಮಗಳನ್ನು ಮತ್ತಷ್ಟು ಪರಿಣಾಮಕಾರಿಯಾಗಿಸಲು ಮತ್ತು ತೆರಿಗೆ ಪಾಲನೆಯನ್ನು ಉತ್ತಮಗೊಳಿಸಲು ತಿದ್ದುಪಡಿಗಳ ಮೂಲಕ ಕಾನೂನಿನಲ್ಲಿ ಕೆಲವು ನಿರ್ದಿಷ್ಟ ಬದಲಾವಣೆಗಳನ್ನು ತರಲು ನಾನು ಪ್ರಸ್ತಾವಿಸುತ್ತೇನೆ. ಅವುಗಳನ್ನು ಅನುಬಂಧ **V** ರಲ್ಲಿ ವಿವರಿಸಲಾಗಿದೆ.

ಅಧಿಕ ಸಂಪನ್ಮೂಲ ಕ್ರೋಢೀಕರಣ ಕ್ರಮಗಳು

105. ಅಧಿಕ ಸಂಪನ್ಮೂಲಗಳನ್ನು ಕ್ರೋಢೀಕರಿಸುವ ಸಲುವಾಗಿ,

- ರಕ್ಷಣಾ ಪಡೆಗಳ ಕ್ಯಾಂಟೀನ್ ಸ್ಟೋರ್‌ಗಳಲ್ಲಿ ಮಾರಾಟ ಮಾಡುವ ವಿಲಾಸಿ ವಸ್ತುಗಳ ಮೇಲಿನ ಶೇಕಡಾ 8ರ ರಿಯಾಯಿತಿಯನ್ನು ಹಾಗೂ ಇತರೆ ವಸ್ತುಗಳ ಮೇಲಿನ ಶೇಕಡಾ 4ರ ತೆರಿಗೆ ರಿಯಾಯಿತಿಯನ್ನು ಹಿಂತೆಗೆದುಕೊಳ್ಳಲು,
- ಸ್ವಂತ ವಿದ್ಯುತ್ ಉತ್ಪಾದನೆಗೆ ಮಾರಾಟ ಮಾಡುವ ಡೀಸೆಲ್ ಮತ್ತು ಇತರೆ ಪೆಟ್ರೋಲಿಯಂ ಉತ್ಪನ್ನಗಳ ಮೇಲಿನ ಶೇಕಡಾ 4ರ ತೆರಿಗೆ ರಿಯಾಯಿತಿಯನ್ನು ಹಿಂತೆಗೆದುಕೊಳ್ಳಲು,

- ತೆರಿಗೆಗೆ ಒಳಪಟ್ಟಿರುವ ಕಾಫಿ ಬೀಜದಿಂದ ತಯಾರಿಸಿದ ಕಾಫಿ ಪುಡಿಗೆ ನೀಡಿರುವ ತೆರಿಗೆ ವಿನಾಯಿತಿಯನ್ನು ಹಿಂತೆಗೆದುಕೊಳ್ಳಲು ಮತ್ತು ಅದರ ಬದಲಾಗಿ ಕಾಫಿ ಬೀಜದ ಮೇಲೆ ಪಾವತಿ ಮಾಡಲಾದ ತೆರಿಗೆ ಮೊತ್ತಕ್ಕೆ ವಜಾ ವಟ್ಟು ನೀಡಲು,
- ಕೆಲವು ಸರಕುಗಳ ಮೇಲಿನ ತೆರಿಗೆ ದರಗಳನ್ನು ಏರಿಸಲು, ಅಂತಹ ಸರಕುಗಳ ವಿವರ ಮತ್ತು ಪ್ರಸ್ತಾವಿತ ದರಗಳನ್ನು ಅನುಬಂಧ VI ರಲ್ಲಿ ಒದಗಿಸಲಾಗಿದೆ.
- ಅನುಬಂಧ VII ರಲ್ಲಿ ತೋರಿಸಿರುವ ಸರಕುಗಳ ಮೇಲೆ ಶೇಕಡಾ 5ರ ರೋಡ್ ಸೆಸ್ ಮತ್ತು ಶೇಕಡಾ 10ರ ಮೂಲಭೂತ ಸೌಕರ್ಯ ಸೆಸ್ ಅನ್ನು ವಿಧಿಸಲು, ಹಾಗೂ
- ಸರಕುಗಳ ಲೀಸಿಂಗ್ ಮೇಲಿನ ತೆರಿಗೆಯನ್ನು ಶೇಕಡಾ 8ಕ್ಕೆ ಏರಿಸಲು, ನಾನು ಪ್ರಸ್ತಾವಿಸುತ್ತೇನೆ.

ಅಧಿಸೂಚನೆಗಳ ಪುನರ್ವಿಮರ್ಶೆ

106. ಪ್ರಸ್ತುತ ಕೆಲವು ನಿಗದಿತ ಸರಕುಗಳಿಗೆ ಮತ್ತು ನಿಗದಿತ ವ್ಯಕ್ತಿಗಳಿಗೆ ತೆರಿಗೆ ರಿಯಾಯಿತಿ ನೀಡಿರುವ ಹಲವಾರು ಅಧಿಸೂಚನೆಗಳು ಜಾರಿಯಲ್ಲಿವೆ. ನಾನು ಅವುಗಳನ್ನು ಪುನರ್‌ವಿಮರ್ಶಿಸಿ, ಅಗತ್ಯವಾದವುಗಳನ್ನು ಮಾತ್ರ ಮುಂದುವರೆಸಲು ಹಾಗೂ ಮಿಕ್ಕವುಗಳನ್ನು ಹಿಂತೆಗೆದುಕೊಳ್ಳಲು ಪ್ರಸ್ತಾವಿಸುತ್ತೇನೆ.

ಮೌಲ್ಯವರ್ಧಿತ ತೆರಿಗೆಯ ಅನುಷ್ಠಾನ

107. ಮೌಲ್ಯವರ್ಧಿತ ತೆರಿಗೆ ವ್ಯವಸ್ಥೆಯ ಅನುಷ್ಠಾನದ ಬಗ್ಗೆ ರಾಷ್ಟ್ರೀಯ ಒಟ್ಟಾಭಿಪ್ರಾಯದ ಅಂಗವಾಗಿ 2005 ರ ಏಪ್ರಿಲ್ ಒಂದರಿಂದ ಮೌಲ್ಯವರ್ಧಿತ ತೆರಿಗೆ ಪದ್ಧತಿಯನ್ನು ಅನುಷ್ಠಾನ ಮಾಡಲು ರಾಜ್ಯವು ಸಂಪೂರ್ಣವಾಗಿ ಸಿದ್ಧವಾಗಿದೆ. ಈ ನಿಟ್ಟಿನಲ್ಲಿ ಎಲ್ಲಾ ಸಿದ್ಧತಾ ಕ್ರಮಗಳನ್ನು ನಾವು ಕೈಗೊಂಡಿರುತ್ತೇವೆ. ಮೌಲ್ಯವರ್ಧಿತ ತೆರಿಗೆ ಪದ್ಧತಿಯ ಅನುಷ್ಠಾನದ ಆರಂಭದ ಹಂತದಲ್ಲಿ ರಾಜ್ಯಗಳ ನೆರವಿಗೆ ಬರುವ ಬಗ್ಗೆ ಭಾರತ ಸರ್ಕಾರ ತನ್ನ ಬದ್ಧತೆಯನ್ನು ಸ್ಪಷ್ಟವಾಗಿ ಹೇಳುತ್ತದೆ ಎಂದು ನಾವು ಆಶಿಸುತ್ತೇವೆ.

108. ತೆರಿಗೆ ಆಡಳಿತದಲ್ಲಿ ಸುಧಾರಣೆಗಳನ್ನು ತರುವಲ್ಲಿ ನನ್ನ ಪ್ರಯತ್ನಗಳನ್ನು ಮುಂದುವರೆಸುತ್ತಾ,

- 2005ರ ಏಪ್ರಿಲ್ 1 ರಿಂದ ಅನುಷ್ಠಾನಗೊಳಿಸಲಾಗುವ ಮೌಲ್ಯವರ್ಧಿತ ತೆರಿಗೆ ವ್ಯವಸ್ಥೆಯ ಜಾರಿಗೆ ವಾಣಿಜ್ಯ ತೆರಿಗೆ ಇಲಾಖೆಯನ್ನು ಸಿದ್ಧಪಡಿಸಲು ಅದನ್ನು ಕಾರ್ಯ ಸ್ವರೂಪದ ಆಧಾರದ ಮೇಲೆ ಸಂಘಟಿಸಲು ನಾನು ಪ್ರಸ್ತಾವಿಸುತ್ತೇನೆ. 2004-05ನೇ ಸಾಲಿನಲ್ಲಿ ಮೌಲ್ಯವರ್ಧಿತ ತೆರಿಗೆ ವ್ಯವಸ್ಥೆಗಾಗಿ ಈ ಕಾರ್ಯಸ್ವರೂಪದ ಸಂಘಟನೆಯನ್ನು ಜಾರಿಗೊಳಿಸಲಾಗುವುದು.
- ಈ ನಿಟ್ಟಿನಲ್ಲಿ ಪ್ರಾರಂಭದ ಕ್ರಮವಾಗಿ ಬೆಂಗಳೂರಿನ ಒಂದು ಆಡಳಿತ ವಿಭಾಗದಲ್ಲಿ ಮಾರಾಟ ತೆರಿಗೆ ಅಡಿಯಲ್ಲಿ ನೋಂದಣಿ ನೀಡಲು ಮತ್ತು ರದ್ದು ಮಾಡಲು ಒಂದು ಪ್ರತ್ಯೇಕ ಕಛೇರಿಯನ್ನು ಸೃಷ್ಟಿಸಲು ನಾನು ಪ್ರಸ್ತಾವಿಸುತ್ತೇನೆ.
- ಇದಲ್ಲದೆ ಬೆಂಗಳೂರಿನ ವರ್ತಕರು ಇಂಟರ್‌ನೆಟ್ ಮೂಲಕ ವರದಿಗಳನ್ನು ಸಲ್ಲಿಸುವ ಮತ್ತು ತೆರಿಗೆ ಪಾವತಿಸುವ ಸೌಲಭ್ಯ ನೀಡಲು ನಾನು ಪ್ರಸ್ತಾವಿಸುತ್ತೇನೆ.

- ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಮತ್ತು ಅದರ ಸಹ ಬ್ಯಾಂಕುಗಳ ಜಾಲದ ಮೂಲಕ ಮತ್ತು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಅಥವಾ ಅದರ ಸಹ ಬ್ಯಾಂಕುಗಳ ಜಾಲ ಇಲ್ಲದಿರುವಲ್ಲಿ, ಭಾರತೀಯ ರಿಸರ್ವ್ ಬ್ಯಾಂಕ್ ಅಂಗೀಕರಿಸಿದ ಇತರ ಬ್ಯಾಂಕುಗಳ ಮೂಲಕ ತೆರಿಗೆ ಸಂಗ್ರಹಣೆಗೆ ಅವಕಾಶ ಮಾಡಿಕೊಡುವುದರೊಂದಿಗೆ ತೆರಿಗೆ ಪಾವತಿ ಸರಳೀಕರಿಸಲು ನಾನು ಪ್ರಸ್ತಾವಿಸುತ್ತೇನೆ. 2004ರ ಅಕ್ಟೋಬರ್ ಒಂದರಿಂದ ಇದನ್ನು ಅನುಷ್ಠಾನಕ್ಕೆ ತರಲಾಗುವುದು.

109. ತೆರಿಗೆ ಸೋರಿಕೆಯನ್ನು ಪರಿಣಾಮಕಾರಿಯಾಗಿ ತಡೆಯಲು ಮತ್ತು ಮೌಲ್ಯವರ್ಧಿತ ತೆರಿಗೆ ವ್ಯವಸ್ಥೆಯನ್ನು ಪರಿಣಾಮಕಾರಿಯಾಗಿ ಜಾರಿಮಾಡುವ ನಿಟ್ಟಿನಲ್ಲಿ ಸಿದ್ಧತೆ ಮಾಡಲು, ಎಲ್ಲಾ ತನಿಖಾಠಾಣೆಗಳನ್ನು ಗಣಕೀಕರಿಸಲು ಹಾಗೂ ಇಲಾಖೆ ಕರನಿರ್ಧರಣೆ ಕಛೇರಿಗಳೊಂದಿಗೆ ಸಂಪರ್ಕ ಜಾಲ ಕಲ್ಪಿಸಲು ನಾನು ಪ್ರಸ್ತಾವಿಸುತ್ತೇನೆ. ಇದರಿಂದಾಗಿ ಸರಕು ಸಾಗಣೆ ಮಾಹಿತಿಗಳ ತ್ವರಿತ ಮತ್ತು ತತ್‌ಕ್ಷಣ ವಿನಿಮಯ ಸಾಧ್ಯವಾಗುತ್ತದೆ.

110. ಮೈಸೂರು - ಹುಣಸೂರು ರಸ್ತೆಯಲ್ಲಿರುವ ಮನುಗನಹಳ್ಳಿ, ಹುಬ್ಬಳ್ಳಿಯ ಹತ್ತಿರವಿರುವ ತಡಸ್‌ಕ್ರಾಸ್, ಹೊಸಪೇಟೆ ಮತ್ತು ಹರಿಹರದಲ್ಲಿರುವ ನಾಲ್ಕು ಆಂತರಿಕ ತನಿಖಾಠಾಣೆಗಳನ್ನು ರದ್ದುಪಡಿಸಲು ಹಾಗೂ ಅವುಗಳನ್ನು ಸಂಚಾರಿ ತನಿಖಾಠಾಣೆಗಳನ್ನಾಗಿ ಪರಿವರ್ತಿಸಲು ನಾನು ಪ್ರಸ್ತಾವಿಸುತ್ತೇನೆ.

111. ಕೆಲವು ನಿರ್ದಿಷ್ಟ ಷರತ್ತುಗಳಿಗೆ ಒಳಪಟ್ಟು ವಹಿವಾಟುದಾರರು 2002-03 ವರೆಗಿನ ಸಾಲಿನವರೆಗೆ ಮಾರಾಟ ತೆರಿಗೆ ಮತ್ತು ಪ್ರವೇಶ ತೆರಿಗೆ ಕಾಯ್ದೆಗಳನ್ವಯ ಅವರು ಸಲ್ಲಿಸಿರುವ ವಾರ್ಷಿಕ ವಹಿವಾಟು ವರದಿಗಳನ್ನು ಒಪ್ಪಿಕೊಳ್ಳುವ ಕರ ನಿರ್ಧರಣೆ ಯೋಜನೆಯನ್ನು ಘೋಷಿಸಲು ನಾನು ಪ್ರಸ್ತಾವಿಸುತ್ತೇನೆ. ಮೇಲಿನ ಪ್ರಕರಣಗಳಲ್ಲಿ ಆಯ್ದ ಶೇಕಡಾ 10 ರಷ್ಟು ಪ್ರಕರಣಗಳಲ್ಲಿ ವಿವರವಾದ ಪರಿಶೀಲನಾ ಕರನಿರ್ಧರಣೆಗೆ ಆಯ್ಕೆ ಮಾಡಿಕೊಳ್ಳಲಾಗುವುದು.

ಕೇಂದ್ರ ಮಾರಾಟ ತೆರಿಗೆ

112. ನಮ್ಮರಾಜ್ಯದಿಂದ ಅಂತರರಾಜ್ಯ ಮಾರಾಟ ಉತ್ತೇಜಿಸಲು ಪ್ಲಾಸ್ಟಿಕ್ ವೋವೆನ್ ಸ್ಯಾಕ್ಸ್, ಲ್ಯಾಮಿನೇಟೆಡ್ ವೋವೆನ್ ಸ್ಯಾಕ್ಸ್ ಮತ್ತು ತಾಮ್ರದ ಕಂಬಿಗಳ ಅಂತರರಾಜ್ಯ ಮಾರಾಟದ ಮೇಲಿನ ಕೇಂದ್ರ ಮಾರಾಟ ತೆರಿಗೆಯನ್ನು ಶೇಕಡ 1ಕ್ಕೆ ಇಳಿಸಲು ಸಹ ನಾನು ಪ್ರಸ್ತಾವಿಸುತ್ತೇನೆ.

ಪ್ರವೇಶ ತೆರಿಗೆ:

ಪರಿಹಾರಗಳು

113. ಗ್ರಾಹಕರು ರಾಜ್ಯದ ಹೊರಗಿನಿಂದ ತರುವ ಮೋಟಾರು ವಾಹನಗಳ ಮೇಲೆ ಪಾವತಿಸಬೇಕಾದ ಪ್ರವೇಶ ತೆರಿಗೆಯಲ್ಲಿ ಅವರು ಪಾವತಿ ಮಾಡಿದ ಕೇಂದ್ರ ಮಾರಾಟ ತೆರಿಗೆಯನ್ನು ಪೂರ್ವಾನ್ವಯವಾಗುವಂತೆ ಕಡಿತಗೊಳಿಸಲು, ನಾನು ಪ್ರಸ್ತಾವಿಸುತ್ತೇನೆ.

ಸುಧಾರಣಾ ಕ್ರಮಗಳು

114. ಹೊರರಾಜ್ಯದಿಂದ ತರುವ ಮೋಟಾರು ವಾಹನಗಳ ಮೇಲೆ ಪೂರ್ವಾನ್ವಯವಾಗುವಂತೆ ನಿಯಮ ರೂಪಿಸುವ ಮೂಲಕ ಈ ಬಗ್ಗೆ ಶಂಕೆಗಳನ್ನು ತೊಡೆಯಲು ನಾನು ಪ್ರಸ್ತಾವಿಸುತ್ತೇನೆ.

115. ವ್ಯಾಪಾರ ಪಲ್ಲಟ ತಡೆಯಲು ಮತ್ತು ಸ್ಥಳೀಯ ವಾಣಿಜ್ಯ ಮತ್ತು ಕೈಗಾರಿಕೆಗಳನ್ನು ರಕ್ಷಿಸಲು ರಾಜ್ಯದೊಳಗೆ ತರುವ ಅಧಿಕ ಮೌಲ್ಯದ ಸರಕುಗಳ ಮೇಲೆ ಮಾರಾಟ ತೆರಿಗೆ ದರದ ಸಮಾನವಾಗಿ ತೆರಿಗೆ ವಿಧಿಸಲು ಹೊಸ ಕಾಯ್ದೆಯನ್ನು ಅನುಷ್ಠಾನಕ್ಕೆ ತರಲು ನಾನು ಪ್ರಸ್ತಾವಿಸುತ್ತೇನೆ.

ಮನರಂಜನಾ ತೆರಿಗೆ:

ಪರಿಹಾರಗಳು

116. ಚಿತ್ರೋದ್ಯಮ ಸಲ್ಲಿಸಿರುವ ಮನವಿಗಳನ್ನು ನಾನು ಕೂಲಂಕುಷವಾಗಿ ಪರಿಶೀಲಿಸಿರುತ್ತೇನೆ. ಅವರ ಕೋರಿಕೆಗಳನ್ನು ಪರಿಗಣಿಸಿ, ಚಲನಚಿತ್ರಗಳ ಮೇಲಿನ ಮನರಂಜನಾ ತೆರಿಗೆಯನ್ನು ಶೇಕಡಾ 70 ರಿಂದ 40ಕ್ಕೆ ಇಳಿಸಲು ನಾನು ಪ್ರಸ್ತಾವಿಸುತ್ತೇನೆ.

ಅಧಿಕ ಸಂಪನ್ಮೂಲ ಕ್ರೋಢೀಕರಣ ಕ್ರಮಗಳು

117. ಟರ್ಫ್ ಕ್ಲಬ್‌ಗಳು ಬೇರೆ ಕೇಂದ್ರಗಳಲ್ಲಿ ನಡೆಯುವ ಕುದುರೆ ಪಂದ್ಯಗಳ ನೇರ ಪ್ರಸಾರದ ಬಗ್ಗೆ ವಸೂಲಿ ಮಾಡುವ ಪ್ರವೇಶ ಶುಲ್ಕದ ಮೇಲೆ ಮನರಂಜನಾ ತೆರಿಗೆ ವಿಧಿಸಲು ನಾನು ಪ್ರಸ್ತಾವಿಸುತ್ತೇನೆ.

118. ಬೆಂಗಳೂರು ನಗರ ಮತ್ತು ಇತರ ನಗರ ಸಭೆಗಳ ವ್ಯಾಪ್ತಿಯಲ್ಲಿ ಚಲನಚಿತ್ರ ಮತ್ತು ವೀಡಿಯೋ ಪ್ರದರ್ಶನಗಳನ್ನು ಬಿಟ್ಟು ಮಿಕ್ಕ ಮನರಂಜನೆಗಳಿಗೆ ತೆರಿಗೆ ವಿನಾಯಿತಿಗೆ ಈಗಿರುವ 250 ರೂಪಾಯಿಗಳ ಪ್ರವೇಶ ಶುಲ್ಕವನ್ನು 50 ರೂಪಾಯಿಗಳಿಗೆ ಇಳಿಸಲು ನಾನು ಪ್ರಸ್ತಾವಿಸುತ್ತೇನೆ.

ವೃತ್ತಿ ತೆರಿಗೆ:

ಪರಿಹಾರಗಳು

119.
- 2003ರ ಡಿಸೆಂಬರ್ 31ರ ಅಂತ್ಯಕ್ಕೆ ಬಾಕಿಯಿರುವ ವೃತ್ತಿ ತೆರಿಗೆಯ ವಸೂಲಾತಿಗಾಗಿ ಒಂದು ಕ್ಷಮಾ ಯೋಜನೆಯನ್ನು ಜಾರಿಗೆ ತರಲು, ಹಾಗೂ
- ಸಣ್ಣ ವೃತ್ತಿದಾರರಿಗೆ ಸ್ವಯಂ ಕರನಿರ್ಧರಣಾ ಪದ್ಧತಿಯನ್ನು ಜಾರಿಗೊಳಿಸಲು, ನಾನು ಪ್ರಸ್ತಾವಿಸುತ್ತೇನೆ.

ಸುಧಾರಣಾ ಕ್ರಮಗಳು

120. ವರ್ತಕರು ತಮ್ಮ ಮಾರಾಟ ತೆರಿಗೆ ಕರನಿರ್ಧರಣೆ ಅಧಿಕಾರಿಗಳ ಕಛೇರಿಯಲ್ಲಿಯೇ ತಮ್ಮ ಉದ್ಯೋಗಿಗಳ ವೃತ್ತಿ ತೆರಿಗೆಗೆ ಸಂಬಂಧಪಟ್ಟಂತೆ ತೆರಿಗೆ ಪಟ್ಟಿಗಳನ್ನು ಸಲ್ಲಿಸಲು ಮತ್ತು ತೆರಿಗೆ ಪಾವತಿ ಮಾಡುವ ಅವಕಾಶ ನೀಡಲು, ನಾನು ಪ್ರಸ್ತಾವಿಸುತ್ತೇನೆ.

ಜೂಜು ತೆರಿಗೆ:

ಸುಧಾರಣಾ ಕ್ರಮಗಳು

121. ಕುದುರೆ ಪಂದ್ಯಗಳ ಬಗ್ಗೆ ಪಾವತಿಸಬೇಕಾದ ರಾಜಿ ಮೊತ್ತಗಳನ್ನು ಪಣದ ಮೊತ್ತದ ಶೇಕಡಾ 4 ಎಂದಾಗಿ ನಿಗದಿಪಡಿಸಲು ನಾನು ಪ್ರಸ್ತಾವಿಸುತ್ತೇನೆ.

122. ಜೂಜು ತೆರಿಗೆ ಪಾವತಿಸುವಲ್ಲಿ ಆಗುವ ವಿಳಂಬಕ್ಕೆ ಬಡ್ಡಿ ವಿಧಿಸಲು ನಾನು ಪ್ರಸ್ತಾವಿಸುತ್ತೇನೆ.

ವಿಲಾಸ ತೆರಿಗೆ:

ಅಧಿಕ ಸಂಪನ್ಮೂಲ ಕ್ರೋಢೀಕರಣ ಕ್ರಮಗಳು

123. ಹೋಟೆಲ್‌ಗಳ ಮತ್ತು ಲಾಡ್ಜಿಂಗ್ ಹೌಸ್‌ಗಳಿಗೆ ಪ್ರಸ್ತುತ ನಿಗದಿ ಮಾಡಿರುವ 400 ರೂಪಾಯಿಗಳ ಪ್ರತಿ ದಿನ ಬಾಡಿಗೆಯ ತೆರಿಗೆ ವಿನಾಯಿತಿ ಮಿತಿಯನ್ನು 150 ರೂಪಾಯಿ ಪ್ರತಿ ದಿನದ ಬಾಡಿಗೆಗೆ ಇಳಿಸಲು ಹಾಗೂ ಅನುಬಂಧ VIII ರಲ್ಲಿ ನೀಡಿರುವ ವಿವರಗಳಂತೆ ವಿಲಾಸ ತೆರಿಗೆ ದರಗಳನ್ನು ಪರಿಷ್ಕರಿಸಲು ನಾನು ಪ್ರಸ್ತಾವಿಸುತ್ತೇನೆ.

124. ವಾಸ್ತವಿಕ ಬಾಡಿಗೆಗಳ ಮೇಲೆ ತೆರಿಗೆ ವಿಧಿಸಲು ಪ್ರಸ್ತುತ ನೀಡಲಾಗಿರುವ ಸೌಲಭ್ಯವನ್ನು ಹಿಂತೆಗೆದುಕೊಳ್ಳಲು ಮತ್ತು ಹಿಂದಿನ ತೆರಿಗೆ ಪದ್ಧತಿಯನ್ನು ಪುನಃ ಜಾರಿ ಮಾಡಲು ಸಹ ನಾನು ಪ್ರಸ್ತಾವಿಸುತ್ತೇನೆ.

125. ಆಸ್ಪತ್ರೆ, ಚಿಕಿತ್ಸಾಲಯಗಳು, ಮುಂತಾದವುಗಳಲ್ಲಿ ವಸತಿ ಮತ್ತಿತರೆ ವಿಲಾಸ ಸೌಲಭ್ಯಗಳನ್ನು ಒದಗಿಸುವ ಬಗ್ಗೆ ವಸೂಲು ಮಾಡುವ ಶುಲ್ಕ ಪ್ರತಿ ದಿನ 1000 ರೂಪಾಯಿಗಳಿಗಿಂತ ಹೆಚ್ಚಿದ್ದಲ್ಲಿ ಅವುಗಳ ಮೇಲೆ ಶೇಕಡಾ 8ರ ವಿಲಾಸ ತೆರಿಗೆ ವಿಧಿಸಲು ಕೂಡ ನಾನು ಪ್ರಸ್ತಾವಿಸುತ್ತೇನೆ.

ವಾಣಿಜ್ಯ ತೆರಿಗೆಗಳಡಿಯಲ್ಲಿ ಪ್ರಸ್ತಾವಿಸಲಾದ ಅಧಿಕ ಸಂಪನ್ಮೂಲ ಕ್ರೋಢೀಕರಣ ಕ್ರಮಗಳಿಂದ ಸುಮಾರು 150 ಕೋಟಿ ರೂಪಾಯಿಗಳ ಆದಾಯ ಬರಲಿದೆ.

126. **ತತ್ಸಂಬಂಧ ತಿದ್ದುಪಡಿಗಳು:** ಮೇಲೆ ಹೇಳಿದ ಕ್ರಮಗಳನ್ನು ಅನುಷ್ಠಾನಗೊಳಿಸಲು ಸಂಬಂಧಪಟ್ಟ ತೆರಿಗೆ ಕಾಯ್ದೆಗಳಿಗೆ ತಿದ್ದುಪಡಿ ಮಾಡಬೇಕಾಗುತ್ತದೆ. ಈ ತಿದ್ದುಪಡಿಗಳ ಜೊತೆ ಇತರೆ ಪರಿಷ್ಕರಣಾ ತಿದ್ದುಪಡಿಗಳೊಂದಿಗೆ ಸೂಕ್ತ ವಿಧೇಯಕಗಳನ್ನು ಸದನದ ಪರಿಶೀಲನೆಗಾಗಿ ಮತ್ತು ಅನುಮೋದನೆಗಾಗಿ ಮಂಡಿಸಲಾಗುವುದು.

ಅಬಕಾರಿ

127. ಐಎಂಎಲ್ ಮದ್ಯಗಳ ಲೈಸೆನ್ಸ್ ಫೀ ಅಥವಾ ಅಬಕಾರಿ ಶುಲ್ಕದಲ್ಲಿ ನಾನು ಯಾವುದೇ ಬದಲಾವಣೆಗಳನ್ನು ಮಾಡುತ್ತಿಲ್ಲ. ತೆರಿಗೆ ವಂಚನೆಯ ವಿರುದ್ಧ ಜಾಗೃತ ಕ್ರಮಗಳು ಮತ್ತು ಉತ್ತಮ ತೆರಿಗೆ ಸಂಗ್ರಹಣೆಯ ಸುಧಾರಣೆ ಕ್ರಮಗಳು ಮುಂದುವರಿಯುತ್ತವೆ.

128. ಸಾರಾಯಿ ಮಾರಾಟದಲ್ಲಿ ಪ್ರಮುಖ ಸುಧಾರಣೆಗಳು ಅಗತ್ಯವಾಗಿವೆ. ಶುಲ್ಕ ಪಾವತಿಸದಿರುವ ಸಾರಾಯಿ ಮಾರಾಟದ ಪಿಡುಗಿನಿಂದಾಗಿ ಸರ್ಕಾರಕ್ಕೆ ಗಣನೀಯ ಪ್ರಮಾಣದ ನಷ್ಟವಾಗುತ್ತಿದೆ. ಕಲಬೆರಕೆ ಸಾರಾಯಿ ತಯಾರಿಕೆ, ಅಕ್ರಮ ಸಾರಾಯಿ ಸ್ಯಾಚೆಟ್‌ಗಳ

ತಯಾರಿಕೆ ಯಂತ್ರಗಳು, ಅಧಿಕ ಸಂಖ್ಯೆಯ ಅನಧಿಕೃತ ಸಾರಾಯಿ ಅಂಗಡಿಗಳ ದೆಸೆಯಿಂದಾಗಿ ಸರ್ಕಾರದ ಬೊಕ್ಕಸಕ್ಕೆ ಭಾರೀ ನಷ್ಟವಾಗುತ್ತಿದೆ.

129. ಆದ್ದರಿಂದ ಶುಲ್ಕ ಪಾವತಿಸದಿರುವ ಸಾರಾಯಿ ಮಾರಾಟವನ್ನು ತೊಡೆದುಹಾಕಲು ನಾನು ಸಾರಾಯಿ ನೀತಿಯಲ್ಲಿ ಆಮೂಲಾಗ್ರ ಬದಲಾವಣೆಯನ್ನು ತರಲು ಉದ್ದೇಶಿಸಿದ್ದೇನೆ. ನೂತನ ಸಾರಾಯಿ ನೀತಿಯು ಈ ಕೆಳಕಂಡ ಅಂಶಗಳನ್ನು ಒಳಗೊಂಡಿರುತ್ತವೆ.

- ದುರ್ಬಳಕೆ ಹಾಗೂ ಅನಧಿಕೃತ ಉಪಯೋಗಕ್ಕೆ ಬಳಸುವುದನ್ನು ತಡೆಯುವುದ ಎಲ್ಲಾ ರೀತಿಯ ಬಳಕೆಗೆ ಅಗತ್ಯವಾದ ರೆಕ್ಟಿಫೈಡ್ ಸ್ಪಿರಿಟ್ ಮತ್ತು ಡೀನೇಚರ್ಡ್ ಸ್ಪಿರಿಟ್‌ನ್ನು ಸಂಪೂರ್ಣವಾಗಿ ರಾಜ್ಯ ಸ್ವಾಮ್ಯದ ಕರ್ನಾಟಕ ರಾಜ್ಯ ಪಾನೀಯ ನಿಗಮದ ಮೂಲಕವೇ ಸರಬರಾಜು ಮಾಡಲಾಗುವುದು.
- ಶುಲ್ಕ ಪಾವತಿ ಮಾಡದಿರುವ ಸಾರಾಯಿಯ ಮಾರುಕಟ್ಟೆ ಬೆಲೆ ಮತ್ತು ಬೆಲೆ ನಿಗದಿಪಡಿಸಿದ ಸಾರಾಯಿಯ ನಡುವೆ ಇರುವ ಬೆಲೆಯ ತಾರತಮ್ಯವನ್ನು ನಿವಾರಿಸಲು ಪ್ರಸ್ತುತ ಪ್ರತಿ ಬಲ್ಕ್ ಲೀಟರ್ ಸಾರಾಯಿಗೆ ವಿಧಿಸುತ್ತಿರುವ 20 ರೂಗಳನ್ನು 2 ರೂ.ಗಳಿಗೆ ಇಳಿಸಿ ಲೆವಿಯನ್ನು ತಯಾರಿಕಾ ಸ್ಥಳಕ್ಕೆ ವರ್ಗಾಯಿಸಲಾಗುವುದು. ಈ ಸುಧಾರಣಾ ಕ್ರಮವು ಸೆಕೆಂಡ್ಸ್ ಹಾವಳಿಯನ್ನು ತೊಡೆದು ಹಾಕಲಿದೆ.
- ಸರ್ಕಾರವು ಸಾರಾಯಿ ಪೂರೈಕೆಯ ಜವಾಬ್ದಾರಿಯನ್ನು ನಿರ್ವಹಿಸುವುದಕ್ಕಿಂತ ಸಾರಾಯಿಯ ಬೇಡಿಕೆ ಮತ್ತು ಪೂರೈಕೆಯನ್ನು ಮಾರುಕಟ್ಟೆಯೇ ನಿರ್ಧರಿಸಲು ಅನುಕೂಲವಾಗುವಂತೆ, ಸಾರಾಯಿ ತಯಾರಿಕೆಯನ್ನು ಮುಕ್ತಗೊಳಿಸಲಾಗುವುದು.
- ಸಾರಾಯಿ ಮತ್ತು ರೆಕ್ಟಿಫೈಡ್ ಸ್ಪಿರಿಟ್‌ನ ಬೆಲೆಯನ್ನು ಸರ್ಕಾರವೇ ನಿಗದಿ ಪಡಿಸುವುದರ ಬದಲಾಗಿ ಮಾರುಕಟ್ಟೆಯ ಬೇಡಿಕೆ ಮತ್ತು ಪೂರೈಕೆಗಳೇ ನಿರ್ಧರಿಸಲು ಅವಕಾಶ ನೀಡಲಾಗುವುದು. ಸರ್ಕಾರವು ಸಾರಾಯಿಯ ಚಿಲ್ಲರೆ ಮಾರಾಟದ ಗರಿಷ್ಟ ಬೆಲೆಯನ್ನು ಮಾತ್ರ ನಿಗದಿಪಡಿಸುತ್ತದೆ.
- ಸಾರಾಯಿ ಮತ್ತು ರೆಕ್ಟಿಫೈಡ್ ಸ್ಪಿರಿಟ್‌ನ ಗುಣಮಟ್ಟ ಮತ್ತು ಅಳತೆ ಪ್ರಮಾಣವನ್ನು ದೃಢೀಕರಿಸಲು ಪ್ರತ್ಯೇಕವಾದ ಸ್ವತಂತ್ರ ಸಂಸ್ಥೆಯಿಂದ ತಪಾಸಣೆ ಮಾಡಿಸಲಾಗುವುದು.

130. ಅಬಕಾರಿ ಆಡಳಿತವು ಪಾರದರ್ಶಕ ಮತ್ತು ಹೆಚ್ಚು ಜವಾಬ್ದಾರಿಯಾಗಿರುವಂತೆ ಹಾಗೂ ಅಬಕಾರಿ ಆದಾಯವನ್ನು ಗಣನೀಯ ಪ್ರಮಾಣದಲ್ಲಿ ಹೆಚ್ಚಿಸಲು ನೂತನ ಸಾರಾಯಿ ನೀತಿಯನ್ನು ರೂಪಿಸಲಾಗಿದ್ದು ಇದನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲಾಗುವುದು. ಈ ಸುಧಾರಣೆಯು ರಾಜ್ಯದ ಬೊಕ್ಕಸಕ್ಕೆ ಸುಮಾರು 300 ಕೋಟಿ ರೂಗಳ ಹೆಚ್ಚುವರಿ ಆದಾಯವನ್ನು ತರುತ್ತದೆಂದು ನಾನು ನಿರೀಕ್ಷಿಸುತ್ತಿದ್ದೇನೆ.

131. ಗುಲ್ಬರ್ಗಾ ಮತ್ತು ರಾಯಚೂರು ಜಿಲ್ಲೆಯ ಕೆಲವು ತಾಲ್ಲೂಕುಗಳಲ್ಲಿ ಸಹಕಾರ ಸಂಘಗಳ ಮೂಲಕ ಶೇಂದಿ ಮಾರಾಟಕ್ಕೆ ಅನುಮತಿ ನೀಡಲಾಗಿತ್ತು. ಸದರಿ ಪ್ರದೇಶಗಳ ವ್ಯಾಪ್ತಿಯಲ್ಲಿ ಸಾಕಷ್ಟು ಶೇಂದಿ ಮರಗಳು ಇಲ್ಲದಿರುವ ಹಿನ್ನೆಲೆಯಲ್ಲಿ ರಾಸಾಯನಿಕ ವಸ್ತುಗಳನ್ನು

ಉಪಯೋಗಿಸಿ ತಯಾರಿಸುತ್ತಿದ್ದ ಶೇಂದಿಯು ಸ್ಥಳೀಯ ಜನರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿತ್ತು. ಇದರ ಜೊತೆಗೆ ಸರ್ಕಾರಕ್ಕೆ ಗಣನೀಯ ಪ್ರಮಾಣದ ನಷ್ಟವನ್ನು ಸಹ ಉಂಟು ಮಾಡುತ್ತಿತ್ತು. ಈ ಕಾರಣಕ್ಕಾಗಿ ಈ ಎರಡು ಜಿಲ್ಲೆಗಳಲ್ಲಿ ಶೇಂದಿ ಮಾರಾಟಕ್ಕೆ ನೀಡಿದ್ದ ಅನುಮತಿಯನ್ನು ವಾಪಸು ಪಡೆಯಲು ನಾನು ಉದ್ದೇಶಿಸುತ್ತಿದ್ದೇನೆ.

ನೋಂದಣಿ ಮತ್ತು ಮುದ್ರಾಂಕ:

132. ನೋಂದಣಿ ಮತ್ತು ಮುದ್ರಾಂಕ ಶುಲ್ಕಗಳಿಗೆ ಸಂಬಂಧಿಸಿದಂತೆ ನಾನು ಯಾವುದೇ ರೀತಿಯ ಬದಲಾವಣೆಗಳನ್ನು ಪ್ರಸ್ತಾಪಿಸುತ್ತಿಲ್ಲ. ನೋಂದಣಿ ಇಲಾಖೆಯ ಸಂಪೂರ್ಣ ಗಣಕೀಕರಣ ಮತ್ತು ಸೇವೆಗಳ ವಿತರಣೆಯಲ್ಲಿ ಸುಧಾರಣಾ ಕ್ರಮಗಳು ಮುಂದುವರಿಯುತ್ತವೆ. ಬೆಂಗಳೂರು ನಗರದಲ್ಲಿ ಆಸ್ತಿಗಳ ನೋಂದಣಿಗೆ ಸಂಬಂಧಿಸಿದಂತೆ ಕೇಂದ್ರಿಯ ಮೌಲ್ಯ ನಿರ್ಧಾರ ಸಮಿತಿಯು ಈಗಾಗಲೇ ಪರಿಷ್ಕೃತ ಮಾರ್ಗಸೂಚಿ ಮೌಲ್ಯಗಳನ್ನು ಪ್ರಕಟಿಸಿದೆ. ಇದೇ ಮಾದರಿಯಲ್ಲಿ ಪ್ರಮುಖ ನಗರಗಳಾದ ಮೈಸೂರು, ಮಂಗಳೂರು, ಹುಬ್ಬಳ್ಳಿ-ಧಾರವಾಡ, ಬೆಳಗಾವಿ, ಗುಲ್ಬರ್ಗಾ ಮತ್ತು ದಾವಣಗೆರೆ ನಗರಗಳಲ್ಲಿ ಮಾರ್ಗಸೂಚಿ ಮೌಲ್ಯವನ್ನು ಪುನರ್ ನಿಗದಿಗೊಳಿಸಿ ಪ್ರಕಟಿಸಲಾಗುವುದು. ಡಿಸೆಂಬರ್ 2004ರ ಅಂತ್ಯದೊಳಗೆ ಈ ಕಾರ್ಯಕ್ರಮ ಪೂರ್ಣಗೊಳ್ಳಲಿದೆ.

ಮೋಟಾರು ವಾಹನ ತೆರಿಗೆ:

133. ಮೋಟಾರು ವಾಹನ ತೆರಿಗೆಗೆ ಸಂಬಂಧಿಸಿದಂತೆ ಒಂದು ತೆರಿಗೆ ದರವನ್ನು ಹೊರತುಪಡಿಸಿ ಇತರೆ ಯಾವುದೇ ಬದಲಾವಣೆಗಳನ್ನು ನಾನು ಪ್ರಸ್ತಾಪಿಸುತ್ತಿಲ್ಲ. ಪ್ರಸ್ತುತ, 10 ಲಕ್ಷ ರೂ.ಗಳಿಗಿಂತ ಹೆಚ್ಚು ಬೆಲೆಯುಳ್ಳ ವಿಲಾಸಿ ಕಾರುಗಳು, ಜೀಪುಗಳು ಮತ್ತು ಬಳಕೆಯ ವಾಹನಗಳ ಮೇಲೆ ಶೇ. 10 ರ ದರದಲ್ಲಿ ತೆರಿಗೆಯನ್ನು ವಿಧಿಸಲಾಗುತ್ತಿದೆ. ಇದನ್ನು ಶೇ. 10 ರಿಂದ ಶೇ. 12ಕ್ಕೆ ಏರಿಸಲು ನಾನು ಪ್ರಸ್ತಾಪಿಸುತ್ತಿದ್ದೇನೆ. 5 ಲಕ್ಷ ರೂಗಳಿಂದ 10 ಲಕ್ಷ ರೂಗಳವರೆಗಿನ ಬೆಲೆಯ ಇದೇ ಮಾದರಿಯ ವಾಹನಗಳಿಗೆ ವಿಧಿಸುತ್ತಿರುವ ಶೇ. 9 ರ ತೆರಿಗೆಯನ್ನು ಶೇ. 10ಕ್ಕೆ ಹೆಚ್ಚಿಸಲು ನಾನು ಉದ್ದೇಶಿಸುತ್ತಿದ್ದೇನೆ. ಉದ್ದೇಶಿತ ಬದಲಾವಣೆಗಳನ್ನು ಅನುಬಂಧ 9 ರಲ್ಲಿ ನಮೂದಿಸಿದೆ. ಈ ಕ್ರಮಗಳಿಂದ ಹೆಚ್ಚುವರಿ ರಾಜಸ್ವ 4 ಕೋಟಿ ರೂ.ಗಳನ್ನು ನಿರೀಕ್ಷಿಸಲಾಗಿದೆ.

134. ಪ್ರಾದೇಶಿಕ ಸಾರಿಗೆ ಕಛೇರಿಗಳ ಕಂಪ್ಯೂಟರೀಕರಣ ಕಾರ್ಯಕ್ರಮವನ್ನು ಪ್ರಸಕ್ತ ವರ್ಷದಲ್ಲಿ ಕರ್ನಾಟಕದ ಎಲ್ಲಾ ಪ್ರಮುಖ ನಗರಗಳಿಗೆ ತ್ವರಿತವಾಗಿ ವಿಸ್ತರಿಸಲಾಗುವುದು. ಸಾರಿಗೆ ಇಲಾಖೆಯಲ್ಲಿ ಸೇವೆಯು ಗುಣಮಟ್ಟವನ್ನು ಸುಧಾರಿಸಲು ಸಹ ಕ್ರಮ ಕೈಗೊಳ್ಳಲಾಗುವುದು.

ತೆರಿಗೆಯೇತರ ರಾಜಸ್ವಗಳು

135. ತೆರಿಗೆಯೇತರ ರಾಜಸ್ವದ ಸಂಗ್ರಹಣೆಯ ಪ್ರಗತಿ ತೃಪ್ತಿದಾಯಕವಾಗಿರುವುದಿಲ್ಲ. ಆದ್ದರಿಂದ ಎಲ್ಲ ವಲಯದಲ್ಲೂ ತೆರಿಗೆಯೇತರ ರಾಜಸ್ವದ ದರಗಳನ್ನು ಪುನರ್ ಪರಿಶೀಲಿಸಿ ಆಡಳಿತಾತ್ಮಕ ಸುಧಾರಣೆಗಳನ್ನು ಅಳವಡಿಸಿ ತೆರಿಗೆಯೇತರ ರಾಜಸ್ವವನ್ನು ಪರಿಣಾಮಕಾರಿಯಾಗಿ ಸಂಗ್ರಹಿಸಲು ಕ್ರಮ ಕೈಗೊಳ್ಳಲಾಗುವುದು. ತೆರಿಗೆಯೇತರ ರಾಜಸ್ವಕ್ಕೆ

ಸಂಬಂಧಿಸಿದಂತೆ ಕಂದಾಯ ಸುಧಾರಣಾ ಆಯೋಗದ ಶಿಫಾರಸ್ಸುಗಳನ್ನು ಶೀಘ್ರವಾಗಿ ಅನುಷ್ಠಾನಗೊಳಿಸಲಾಗುವುದು.

ಆನ್‌ಲೈನ್ ಮತ್ತು ಇಂಟರ್‌ನೆಟ್ ಲಾಟರಿ

136. ಆನ್‌ಲೈನ್ ಮತ್ತು ಇಂಟರ್‌ನೆಟ್ ಲಾಟರಿಯನ್ನು ನಿಷೇಧಿಸುವಂತೆ ಸಮಾಜದ ಎಲ್ಲ ವರ್ಗಗಳಿಂದ ಒತ್ತಾಯ ಬಂದಿತ್ತು. ಇಂತಹ ಲಾಟರಿಗಳಿಗೆ ಸರ್ಕಾರವು ಉತ್ತೇಜನ ನೀಡಬಾರದೆಂಬುದು ನನ್ನ ಸಂಕಲ್ಪವಾಗಿದೆ. ಈ ವಿಷಯವು ನಮ್ಮ ಸಾಮಾನ್ಯ ಕನಿಷ್ಟ ಕಾರ್ಯಕ್ರಮದ ಒಂದು ಅಂಶ ಕೂಡ ಆಗಿದೆ. ಕರ್ನಾಟಕದ ಜನತೆಯ ಭಾವನೆಗಳನ್ನು ಗೌರವಿಸಲು ಮತ್ತು ನಾವು ಜನತೆಗೆ ನೀಡಿದ್ದ ವಚನವನ್ನು ಈಡೇರಿಸಲು ನಾನು ಆನ್‌ಲೈನ್ ಲಾಟರಿ ನಡೆಸುವವರ ಜೊತೆ ಕರ್ನಾಟಕ ಸರ್ಕಾರವು ದಿನಾಂಕ: 22.05.2002 ರಂದು ಮಾಡಿಕೊಂಡಿದ್ದ ಒಪ್ಪಂದವನ್ನು ದಿನಾಂಕ 15-7-2004 ರಿಂದ ಅನ್ವಯವಾಗುವಂತೆ ರದ್ದುಗೊಳಿಸಿದ್ದೇನೆ.

137. ಕರ್ನಾಟಕದಲ್ಲಿ ಆನ್‌ಲೈನ್ ಮತ್ತು ಇಂಟರ್‌ನೆಟ್ ಲಾಟರಿಯನ್ನು ನಿಷೇದಿಸಲು ಕಠಿಣ ಕ್ರಮ ಕೈಗೊಳ್ಳುವುದು ಅವಶ್ಯವಿದೆ. ಆದ್ದರಿಂದ ತತ್‌ಕ್ಷಣದಿಂದ ಜಾರಿಗೆ ಬರುವಂತೆ ಎಲ್ಲ ರೀತಿಯ ಆನ್‌ಲೈನ್ ಮತ್ತು ಇಂಟರ್‌ನೆಟ್ ಲಾಟರಿಗಳನ್ನು ನಿಷೇದಿಸಲು ನಾನು ಪ್ರಸ್ತಾವಿಸುತ್ತಿದ್ದೇನೆ. ಕರ್ನಾಟಕವನ್ನು "ಆನ್‌ಲೈನ್ ಮತ್ತು ಇಂಟರ್‌ನೆಟ್ ಲಾಟರಿ ಮುಕ್ತ ವಲಯ" ಎಂದು ಘೋಷಿಸಲಾಗುವುದು. ಇದರೊಂದಿಗೆ ನಾವು ರಾಜ್ಯದ ಜನತೆಯ ಆಶೋತ್ತರಗಳನ್ನು ಈಡೇರಿಸಿದಂತಾಗಿದೆ.

138. ಈ ಲಾಟರಿಗಳ ನಿಷೇದದಿಂದಾಗಿ ರಾಜ್ಯದ ಬೊಕ್ಕಸಕ್ಕೆ ಸುಮಾರು 250 ಕೋಟಿ ರೂ.ಗಳ ನಷ್ಟ ಸಂಭವಿಸಲಿದೆ. ಈ ಕೊರತೆಯನ್ನು ನಾನು ಇತರೆ ತೆರಿಗೆ ಸುಧಾರಣಾ ಕ್ರಮಗಳ ಮೂಲಕ ಭರಿಸಿಕೊಳ್ಳುವ ವಿಶ್ವಾಸ ಹೊಂದಿದ್ದೇನೆ.

ಪರಿಷ್ಕೃತ ಅಂದಾಜುಗಳು 2003-04

139. 2003-2004 ರಲ್ಲಿ ಮುಂಗಡ ಅಂದಾಜುಗಳ ರೀತ್ಯಾ ಒಟ್ಟು ಜಮೆಗಳನ್ನು **26907.08** ಕೋಟಿ ರೂ.ಗಳೆಂದು ನಿರೀಕ್ಷಿಸಲಾಗಿತ್ತು. ಆದರೆ ಪರಿಷ್ಕೃತ ಅಂದಾಜಿನ ರೀತ್ಯಾ ಒಟ್ಟು ಜಮೆಗಳು **30069.82** ಕೋಟಿ ರೂ.ಗಳಾಗಿದೆ. ಮುಂಗಡ ಅಂದಾಜುಗಳ ರೀತ್ಯಾ ಒಟ್ಟು ವೆಚ್ಚವು **26839.42** ಕೋಟಿ ರೂ.ಗಳಾಗಿತ್ತು. ಈಗ ಪರಿಷ್ಕೃತ ಅಂದಾಜುಗಳ ರೀತ್ಯಾ ಒಟ್ಟು ವೆಚ್ಚವು **30541.16** ಕೋಟಿ ರೂ.ಗಳಾಗಿದೆ. ಸಾರ್ವಜನಿಕ ವೆಚ್ಚದಲ್ಲಿನ ಹೆಚ್ಚುವರಿಯನ್ನು ಲೆಕ್ಕಕ್ಕೆ ತೆಗೆದುಕೊಂಡ ನಂತರ ಈ ವರ್ಷದ ಅಂತಿಮ ಕೊರತೆಯು **(-)400.79** ಕೋಟಿ ರೂ.ಗಳಾಗುವ ನಿರೀಕ್ಷೆಯಿದೆ. 2003-2004ರ ಮುಂಗಡ ಪತ್ರವನ್ನು ಮಂಡಿಸುವಾಗ ಈ ಕೊರತೆಯನ್ನು **(-)105.68** ಕೋಟಿ ರೂ.ಗಳೆಂದು ತೋರಿಸಲಾಗಿತ್ತು.

ಆಯವ್ಯಯ ಅಂದಾಜುಗಳು 2004-2005

140. 2004-2005ನೇ ಸಾಲಿನ ಒಟ್ಟು ಜಮೆ **32065.99** ಕೋಟಿ ರೂ.ಗಳಾಗುವ ನಿರೀಕ್ಷೆಯಿದೆ. ಇದರಲ್ಲಿ **25510.31** ಕೋಟಿ ರೂ.ಗಳ ರಾಜಸ್ವ ಜಮೆ ಮತ್ತು **6555.68** ಕೋಟಿ ರೂ.ಗಳ ಬಂಡವಾಳ ಜಮೆ ಸೇರಿರುತ್ತದೆ. ಒಟ್ಟು ವೆಚ್ಚವನ್ನು **31591.88** ಕೋಟಿ ರೂ.ಗಳೆಂದು ಅಂದಾಜು ಮಾಡಲಾಗಿದೆ. ಇದರಲ್ಲಿ **25437.48** ಕೋಟಿ ರೂ.ಗಳು ರಾಜಸ್ವ ವೆಚ್ಚವಾಗಿದ್ದು, **6154.40** ಕೋಟಿ ರೂ.ಗಳು ಬಂಡವಾಳ ವೆಚ್ಚವಾಗಿವೆ.

141. ಸರ್ಕಾರವು ತೆರಿಗೆ ರಾಜಸ್ವದ ಮೂಲಕ 14957.96 ಕೋಟಿ ರೂ.ಗಳನ್ನು ಮತ್ತು ತೆರಿಗೆಯೇತರ ರಾಜಸ್ವದ ಮೂಲಕ 4486.35 ಕೋಟಿ ರೂ.ಗಳನ್ನು ಸಂಗ್ರಹಿಸುವ ನಿರೀಕ್ಷೆಯನ್ನಿಟ್ಟುಕೊಂಡಿದೆ. ಇದಲ್ಲದೆ ಸಣ್ಣ ಉಳಿತಾಯದಿಂದ 2615.91 ಕೋಟಿ ರೂ.ಗಳನ್ನು; ಮಾರುಕಟ್ಟೆ ಎತ್ತುವಳಿಯಿಂದ 1087.96 ಕೋಟಿ ರೂ.ಗಳನ್ನು (ನಿವ್ವಳ); ಒಪ್ಪಂದದ ಸಾಲಗಳಿಂದ 585 ಕೋಟಿ ರೂ.ಗಳನ್ನು ಮತ್ತು ಕೇಂದ್ರ ಸರ್ಕಾರದ ಒಟ್ಟು ಸಾಲಗಳಿಂದ 2238.05 ಕೋಟಿ ರೂ.ಗಳನ್ನು ಸಂಗ್ರಹಿಸುವ ನಿರೀಕ್ಷೆಯನ್ನು ಸರ್ಕಾರ ಇಟ್ಟುಕೊಂಡಿದೆ.

142. ಎಂಟು ವರ್ಷಗಳ ಸುದೀರ್ಘ ಅವಧಿಯ ನಂತರ ಪ್ರಪ್ರಥಮ ಬಾರಿಗೆ 72.83 ಕೋಟಿ ರೂ.ಗಳ ರಾಜಸ್ವ ಉಳಿಕೆ ಆಯವ್ಯಯ ಮಂಡಿಸುತ್ತಿರುವ ವಿಷಯವನ್ನು ನಾನು ಗೌರವಾನ್ವಿತ ಸದಸ್ಯರಿಗೆ ಸಂತಸದಿಂದ ತಿಳಿಸಲು ಇಚ್ಛಿಸುತ್ತೇನೆ. ಈ ಆಯವ್ಯಯವು ವಿತ್ತೀಯ ಸುಧಾರಣೆಗಳ ಬಗ್ಗೆ ನಮಗಿರುವ ಬದ್ಧತೆಯನ್ನು ಬಿಂಬಿಸುತ್ತಿದೆ. ಈ ಆಯವ್ಯಯದಲ್ಲಿ ನಾನು ನಮ್ಮ ರಾಜಸ್ವ ವೆಚ್ಚಗಳನ್ನು ನಮ್ಮ ರಾಜಸ್ವ ಆದಾಯದಿಂದಲೇ ಭರಿಸಿದ್ದೇನೆ. ನಮ್ಮ ರಾಜಸ್ವ ವೆಚ್ಚಗಳನ್ನು ಭರಿಸಲು ನಾವು ಯಾವುದೇ ಸಾಲಗಳನ್ನು ಮಾಡುವ ಅಗತ್ಯವಿರುವುದಿಲ್ಲ. ಮುಂದಿನ ವರ್ಷಗಳಲ್ಲಿ ವೃದ್ಧಿಗೊಳ್ಳಲಿರುವ ನಮ್ಮ ರಾಜಸ್ವ ಉಳಿಕೆಯನ್ನು ನಾವು ಹೆಚ್ಚುವರಿ ಆಸ್ತಿಗಳ ನಿರ್ಮಾಣಕ್ಕಾಗಿ ಬಳಸಿಕೊಳ್ಳಬಹುದಾಗಿದೆ. ಈ ಸಾಲಿನ 4246.64 ಕೋಟಿ ರೂ.ಗಳ ವಿತ್ತೀಯ ಕೊರತೆಯನ್ನು 2003-04ರ (ಪರಿಷ್ಕೃತ ಅಂದಾಜು) 5564 ಕೋಟಿ ರೂ.ಗಳ ವಿತ್ತೀಯ ಕೊರತೆಗೆ ಹೋಲಿಸಿ ನೋಡಿದರೆ ವಿತ್ತೀಯ ಕೊರತೆಯನ್ನು ನಿಯಂತ್ರಿಸಲಾಗಿದೆ.

143. ಆರಂಭಿಕ ಶುಲ್ಕ (-) 400.79 ಕೋಟಿ ರೂ.ಗಳನ್ನು ಲೆಕ್ಕಕ್ಕೆ ತೆಗೆದುಕೊಂಡರೆ ಅಂತಿಮ ಶುಲ್ಕವು 73.32 ಕೋಟಿ ರೂ.ಗಳಾಗಿದೆ.

ನಿಚ್ಚಳ ನೋಟ

144. ನಮ್ಮ ನೋಟಗಳು ನಿಚ್ಚಳವಾಗಿವೆ. ಗುರಿಗಳು ನಿಖರವಾಗಿವೆ. ರಾಜ್ಯದ ಸರ್ವತೋಮುಖ ಅಭಿವೃದ್ಧಿ ನಮ್ಮ ಆಶಯ. ಸಾಮಾಜಿಕ ನ್ಯಾಯದ ತಳಹದಿಯ ಮೇಲೆ ಆರ್ಥಿಕ ಸುಧಾರಣೆಯ ಸೌಧ ನಮ್ಮ ಕನಸು. ಜನಪರ ಆಶಯಗಳ ಅನುಷ್ಠಾನಕ್ಕಾಗಿ ಕಠಿಣ ನಿರ್ಧಾರಗಳನ್ನು ಕೈಗೊಳ್ಳಬೇಕಾದ ದಿಟ್ಟತೆ. ಜನತೆಗೆ ನೀಡಿರುವ ಭರವಸೆಗಳಿಗೂ ಅವುಗಳ ಅನುಷ್ಠಾನಕ್ಕೂ ಹೆಚ್ಚಿನ ಅಂತರವಿರದಂತೆ ಎಚ್ಚರಿಕೆಯ ದೃಢ ಹೆಜ್ಜೆಗಳನ್ನಿಡುತ್ತಾ ಉಜ್ವಲ ಕರ್ನಾಟಕದತ್ತ ಮುನ್ನಡೆಯೋಣ.

145. ನಾನು ಈಗ 2004-05ರ ಆಯವ್ಯಯ ಅಂದಾಜುಗಳನ್ನು ಸದನದ ಪರಿಶೀಲನೆಗೆ ಮಂಡಿಸುತ್ತಿದ್ದೇನೆ. ಮುಂಗಡ ಪತ್ರವನ್ನು ಸದನದಲ್ಲಿ ಸವಿವರವಾಗಿ ಚರ್ಚಿಸಲಾಗುವುದು. ಈಗ ನಾನು 2004-05ರ ಪೂರ್ಣ ಆಯವ್ಯಯಕ್ಕೆ ಸದನದ ಅನುಮೋದನೆ ಕೋರುತ್ತಿದ್ದೇನೆ.

ಜೈ ಹಿಂದ್ ಜೈ ಕರ್ನಾಟಕ

ಬಜೆಟ್ ವಿಹಂಗಮ

ಕ್ರ. ಸಂ.	ಬಾಬ್ತು	ಬಜೆಟ್ ಅಂದಾಜು 2003-04	ಪರಿಷ್ಕೃತ ಅಂದಾಜು 2003-04	ಬಜೆಟ್ ಅಂದಾಜು 2004-05
	ಪ್ರಾರಂಭ ಶಿಲ್ಕು	-173.34	70.55	-400.79
	ಎ. ರಾಜಸ್ವ ಲೆಕ್ಕ			
I.	ಜಮೆ :			
	ರಾಜ್ಯ ತೆರಿಗೆ	12588.38	12962.88	14957.96
	ಕೇಂದ್ರ ತೆರಿಗೆಯಲ್ಲಿ ಪಾಲು	3044.76	3243.15	3760.41
	ಕೇಂದ್ರ ಸರ್ಕಾರದ ಅನುದಾನಗಳು	2498.70	2099.34	2305.59
	ತೆರಿಗೆಯೇತರ ರಾಜಸ್ವ	1713.33	3426.47	4486.35
	ಒಟ್ಟು-ಎ. I	19845.17	21731.84	25510.31
II.	ವೆಚ್ಚ :			
	ಸಾಮಾಜಿಕ ಸೇವೆ	7141.41	6878.25	7662.30
	ಆರ್ಥಿಕ ಸೇವೆ	5706.78	5471.01	5500.72
	ಸಾಮಾನ್ಯ ಸೇವೆ	8392.62	9946.03	11475.96
	ಸಹಾಯಾನುದಾನ ಮತ್ತು ಅಂಶದಾನ	739.68	754.99	798.50
	ಒಟ್ಟು-ಎ. II	21980.49	23050.28	25437.48
ಎ.	ರಾಜಸ್ವ ಲೆಕ್ಕ ಹೆಚ್ಚುವರಿ / ಕೊರತೆ	-2135.32	-1318.44	72.83

ನೋಟ

(ಕೋಟಿ ರೂಪಾಯಿಗಳಲ್ಲಿ)

ಕ್ರ. ಸಂ.	ಬಾಬ್ತು	ಬಜೆಟ್ ಅಂದಾಜು 2003-04	ಪರಿಷ್ಕೃತ ಅಂದಾಜು 2003-04	ಬಜೆಟ್ ಅಂದಾಜು 2004-05
	ಬಿ. ಬಂಡವಾಳ ಲೆಕ್ಕ			
I.	ಜಮೆ :			
	ಭಾರತ ಸರ್ಕಾರದಿಂದ ಸಾಲ	2931.50	2284.27	2238.05
	ಬಹಿರಂಗ ಮಾರುಕಟ್ಟೆ ಸಾಲ (ನಿವ್ವಳ)	973.51	2169.51	1087.96
	ಎಲ್‌ಐಸಿ, ಆರ್‌ಬಿಐ, ಜಿಐಸಿ ಮತ್ತು ಎನ್‌ಸಿಡಿಸಿ ಇವುಗಳಿಂದ ಸಾಲ	2336.40	2710.00	3200.91
	ಸಾಲಗಳು ಮತ್ತು ಮುಂಗಡಗಳ ವಸೂಲಿ	100.50	100.50	29.91
	ಸಾರ್ವಜನಿಕ ಲೆಕ್ಕ (ನಿವ್ವಳ) ಇತರೆ	720.00	1073.70	-1.15
	ಒಟ್ಟು-ಬಿ. I	7061.91	8337.98	6555.68
II.	ಬಟವಾಡೆ :			
	ಬಂಡವಾಳ ವೆಚ್ಚ (ನಿವ್ವಳ)	3561.66	3825.29	3746.61
	ಕೇಂದ್ರ ಸಾಲಗಳ ಮರುಸಂದಾಯ	639.26	2915.96	1342.49
	ಎಲ್‌ಐಸಿ, ಆರ್‌ಬಿಐ, ಜಿಐಸಿ ಮತ್ತು ಎನ್‌ಸಿಡಿಸಿ ಇತ್ಯಾದಿಗಳಿಗೆ ಸಾಲಗಳ ಮರುಸಂದಾಯ	221.70	228.76	462.52
	ಸಾಲಗಳ ಮತ್ತು ಮುಂಗಡಗಳ ಬಟವಾಡೆ	436.31	520.87	602.78
	ಒಟ್ಟು-ಬಿ. II	4858.93	7490.88	6154.40
ಬಿ.	ಬಂಡವಾಳ ಲೆಕ್ಕ ಹೆಚ್ಚಳ / ಕೊರತೆ	2202.98	847.10	401.28
ಸಿ.	ವರ್ಷದ ಒಟ್ಟು ಹೆಚ್ಚಳ / ಕೊರತೆ	67.66	-471.34	474.11
ಡಿ.	ಮುಕ್ತಾಯ ಶಿಲ್ಕು	-105.68	-400.79	73.32

ಅನುಬಂಧ - I

(ಪ್ಯಾರಾ 96)

2004-2005 ನೇ ಸಾಲಿನ ವಿಭಾಗವಾರು ರಾಜ್ಯ ಯೋಜನಾ ಹಂಚಿಕೆ

	ವಿಭಾಗ	ಕೋಟಿ ರೂ.ಗಳಲ್ಲಿ	ಶೇಕಡಾ ಪ್ರಮಾಣ
ಎ.	ಆರ್ಥಿಕ ಸೇವೆಗಳು		
	ಕೃಷಿ ಮತ್ತು ಸಂಬಂಧಪಟ್ಟ ಸೇವೆ	833.40	6.76
	ಗ್ರಾಮೀಣ-ಅಭಿವೃದ್ಧಿ	534.10	4.33
	ವಿಶೇಷ ಪ್ರದೇಶ ಯೋಜನೆ (ಹೈದರಾಬಾದ್ ಕರ್ನಾಟಕ ಗಡಿ ಪ್ರದೇಶದ ಬೆಳವಣಿಗೆ)	67.30	0.55
	ನೀರಾವರಿ ಮತ್ತು ಪ್ರವಾಹ ನಿಯಂತ್ರಣ	3023.96	24.54
	ಶಕ್ತಿ ಮೂಲಗಳು	2714.85	22.03
	ಕೈಗಾರಿಕೆ ಮತ್ತು ಖನಿಜಗಳು	105.06	0.85
	ಸಾರಿಗೆ	1386.83	11.25
	ವಿಜ್ಞಾನ, ತಂತ್ರಜ್ಞಾನ ಮತ್ತು ಪರಿಸರ	11.29	0.09
	ಸಾಮಾನ್ಯ ಆರ್ಥಿಕ ಸೇವೆಗಳು	238.25	1.93
ಬಿ.	ಸಮಾಜ ಸೇವೆಗಳು		
	ಶಿಕ್ಷಣ, ಕ್ರೀಡೆಗಳು, ಕಲೆ ಮತ್ತು ಸಂಸ್ಕೃತಿ	844.56	6.85
	ಆರೋಗ್ಯ	180.12	1.46
	ನೀರು ಸರಬರಾಜು ಮತ್ತು ನೈರ್ಮಲ್ಯ	617.20	5.01
	ವಸತಿ ಮತ್ತು ನಗರಾಭಿವೃದ್ಧಿ	1252.38	10.16
	ವಾರ್ತಾ ಮತ್ತು ಪ್ರಚಾರ	2.60	0.02
	ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳು ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ		
	ಸಮಾಜ ಕಲ್ಯಾಣ ಮತ್ತು ಪೌಷ್ಟಿಕ ಆಹಾರ	377.32	3.06
	ಕಾರ್ಮಿಕ ಮತ್ತು ಉದ್ಯೋಗ	15.50	0.13
ಸಿ.	ಸಾಮಾನ್ಯ ಸೇವೆಗಳು	118.20	0.96
	ಒಟ್ಟು	12322.92	100.00

ಅನುಬಂಧ - II

(ಪ್ಯಾರಾ 98)

ಮಾರಾಟ ತೆರಿಗೆ ದರಗಳಲ್ಲಿ ಉದ್ದೇಶಿಸಿರುವ ಪರಿಷ್ಕರಣೆ

ಎ.

ಕ್ರಮ ಸಂಖ್ಯೆ	ವಸ್ತುಗಳ ವಿವರ	ಪ್ರಸ್ತುತ ತೆರಿಗೆ ದರ (%)	ಉದ್ದೇಶಿತ ತೆರಿಗೆ ದರ (%)
1.	ಅಲ್ಯೂಮಿನಿಯಂ ಷೀಟುಗಳು, ಸರ್ಕಲ್ಲುಗಳು, ಹೂಪುಗಳು, ಸ್ಟ್ರಿಪ್ಪುಗಳು ಮತ್ತು ರೋಲುಗಳು.	13	12
2.	ಅಲ್ಯೂಮಿನಿಯಂ ಬಾರುಗಳು, ಸುರುಳಿ ಮತ್ತು ಸಲಾಕೆ ರೂಪದ ಕಂಬಿಗಳು, ದುಂಡುಗಳು, ಚೌಕಾಕೃತಿಗಳು, ಅಷ್ಟ ಕೋನಾಕೃತಿಗಳು, ಷಡ್ರೇಕಾಕೃತಿಗಳು.	13	12
3.	ಅಲ್ಯೂಮಿನಿಯಂ ಕೊಳವೆಗಳು (ದುಂಡುಗಳು ಮತ್ತು ಚೌಕಾಕೃತಿಗಳು) ಕೊಳವೆಗಳೂ ಸೇರಿದಂತೆ ಎಲ್ಲಾ ವ್ಯಾಸ ಮತ್ತು ಉದ್ದದ ಕೊಳವೆಗಳು.	13	12
4.	ಸುತ್ತಿದ ಅಥವಾ ಉದ್ದದ ಅಲ್ಯೂಮಿನಿಯಂ ಕಂಬಿ ಸರಳುಗಳು ಮತ್ತು ತಂತಿಗಳು.	13	12
5.	ಅಲ್ಯೂಮಿನಿಯಂ ಆಕೃತಿಗಳು, ಆ್ಯಂಗಲ್‌ಗಳು, ಜಾಯಿಸ್ಟುಗಳು, ಚಾನಲುಗಳು, ಟೀಗಳು, ಷೀಟ್ ಫೈಲಿಂಗ್ ಸೆಕ್ಷನ್ನುಗಳು, ಜೆಡ್ ಸೆಕ್ಷನ್ನುಗಳು ಅಥವಾ ಇತರ ಎಕ್ಸ್ ಟ್ರೂಡೆಡ್ ಸೆಕ್ಷನ್ನುಗಳು.	13	12
6.	ಅಲ್ಯುಮಿನಿಯಂ ಫಾಯಿಲ್‌ಗಳು, ಅಲ್ಯುಮಿನಿಯಂ ಆಕ್ಸೈಡ್, ಅಲ್ಯುಮಿನಿಯಂ ಗ್ರೇನ್ಸ್, ಅಲ್ಯುಮಿನಿಯಂ ಟೇಪ್ ಮತ್ತು ಪೌಡರ್	13	12
7.	ಗೃಹ ಉಪಯೋಗಿ ಅಲ್ಯೂಮಿನಿಯಂ ಪಾತ್ರೆಗಳು (ಅಡುಗೆ ಪಾತ್ರೆಗಳನ್ನು ಹೊರತುಪಡಿಸಿ)	5	4
8.	ಆರ್ಕ್ ಕಾರ್ಬನ್ನುಗಳು.	13	12
9.	ಬೇರಿಂಗ್‌ಗಳು ಎಂದರೆ ಬಾಲ್ ಅಥವಾ ರೋಲರ್ ಬೇರಿಂಗ್‌ಗಳು (ಎಲ್ಲಾ ರೀತಿಯವು).	13	12
10.	ಹಿತ್ತಾಳೆ ಸರ್ಕಲ್ಲುಗಳು, ಷೀಟುಗಳು ಮತ್ತು ಸ್ಟ್ರಿಪ್ಪುಗಳು.	13	12
11.	ಹಿತ್ತಾಳೆಯ ವಸ್ತುಗಳು, ರಾಡುಗಳು, ರೌಂಡುಗಳು ಸ್ಕ್ವೇರುಗಳು ಮತ್ತು ಫ್ಲಾಟುಗಳು	13	12

1	2	3	4
12.	ಎಲ್ಲ ತರದ ಇಟ್ಟಿಗೆಗಳು (ನಾಡ ಇಟ್ಟಿಗೆ, ನಾಡ ಹೆಂಚುಗಳು, ರಿಫ್ರಾಕ್ಟರಿ ಮತ್ತು ಅಂತಹುದೇ ತರದವುಗಳನ್ನು ಬಿಟ್ಟು).	5	4
13.	ಕಂಚಿನ ವಸ್ತುಗಳು, ರಾಡುಗಳು, ರೌಂಡುಗಳು, ಸ್ಕ್ವೇರುಗಳು ಮತ್ತು ಫ್ಲಾಟುಗಳು	13	12
14.	ಬೆಣ್ಣೆ ಮತ್ತು ತುಪ್ಪ.	13	12
15.	ಖಾಲಿ ಆಡಿಯೋ ಮತ್ತು ವಿಡಿಯೋ ಕ್ಯಾಸೆಟ್‌ಗಳು, ಆಡಿಯೋ ಮತ್ತು ವಿಡಿಯೋ ಮ್ಯಾಗ್ನಟಿಕ್ ಟೇಪುಗಳು, ಆಡಿಯೋ ಮತ್ತು ವಿಡಿಯೋ ಮುದ್ರಿತ ಕ್ಯಾಸೆಟ್‌ಗಳು, ಕ್ಯಾಸೆಟ್‌ಗಳ ಆಡಿಯೋ ಮತ್ತು ವಿಡಿಯೋ ಮ್ಯಾಗ್ನೆಟಿಕ್ ಟೇಪುಗಳ ಭಾಗಗಳು ಮತ್ತು ಉಪಸಾಧನಗಳು, ಹೆಡ್ ಕ್ಲೀನರ್‌ಗಳು ಮತ್ತು ಎಣ್ಣೆ.	13	12
16.	ಸಿದ್ದಪಡಿಸಿದ ಸಿಮೆಂಟ್ ಕಾಂಕ್ರಿಟ್ ಮಿಶ್ರಣ	13	12
17.	ಬೇಳೆಯ ಚುನ್ನಿ	2	1
18.	ಹುರಿಗಡಲೆ	2	1
19.	ಚೀಸ್ (ಗಿಣ್ಣು)	13	12
20.	ಫೋಟೋ ಫ್ರೇಮ್‌ಗಳು ಮತ್ತು ಮೌಂಟ್‌ಗಳು	13	12
21.	ತೆಂಗಿನ ನಾರಿನಿಂದ ತಯಾರಿಸಿದ ವಸ್ತುಗಳು (ಹಗ್ಗ ಹುರಿ ಮತ್ತು ನಾರನ್ನು ಹೊರತುಪಡಿಸಿ)	5	4
22.	ರಬ್ಬರ್‌ಯುಕ್ತ ಕಾಯರ್ ಉತ್ಪನ್ನಗಳು.	13	12
23.	ತಾಮ್ರದ ಸರ್ಕಲ್ಲುಗಳು, ಷೀಟ್‌ಗಳು ಮತ್ತು ಸ್ಟ್ರಿಪ್ಪುಗಳು	13	12
24.	ತಾಮ್ರದ ಸಲಾಕಿಗಳು, ಗುಂಡುಗಳು, ಚೌಕಗಳು ಮತ್ತು ಚಪ್ಪಟೆಗಳೂ ಸೇರಿ ತಾಮ್ರದ ವಸ್ತುಗಳು.	13	12
25.	ಕಾಟನ್ ವೇಸ್ಟ್	5	4
26.	ಕಾಟನ್ ಯಾರನ್ ವೇಸ್ಟ್	5	4
27.	ಹತ್ತಿ ಹಾಸಿಗೆಗಳು, ದಿಂಬುಗಳು, ಕ್ವಿಲ್ಟ್‌ಗಳು ಮತ್ತು ಅವುಗಳ ಕವರ್‌ಗಳು	5	4
28.	ಡೀಸೆಲ್ ಎಂಜಿನ್‌ಗಳು ಮತ್ತು ಅದರ ಭಾಗಗಳು ಮತ್ತು ಉಪಸಾಧನಗಳು.	13	12
29.	ಡ್ರಗೆಟ್ಟುಗಳು ಮತ್ತು ಡರ್ರಿಗಳು.	13	12

1	2	3	4
30.	ಖಾದ್ಯ ತೈಲ (ಶುದ್ಧೀಕರಿಸಿದ ಮತ್ತು ಶುದ್ಧೀಕರಿಸದ)	5	4
31.	ಎಲೆಕ್ಟ್ರಿಕಲ್ ಅರ್ತನವೇರ್ ಮತ್ತು ಪೋರ್ಸಲಿನ್.	13	12
32.	ಎಲೆಕ್ಟ್ರಿಕಲ್ ವಸ್ತುಗಳು, ಸಾಧನಗಳು, ಉಪಕರಣಗಳು ಮತ್ತು ಉಪಸಾಮಗ್ರಿಗಳು ಆದರೆ ಫ್ಯಾನುಗಳು ಮತ್ತು ಟ್ಯೂಬ್‌ಲೈಟುಗಳು ಮತ್ತು ಭಾಗಗಳು ಮತ್ತು ಉಪಸಾಧನಗಳನ್ನು ಒಳಗೊಂಡು.	13	12
33.	ಎಲೆಕ್ಟ್ರಿಕ್ ಬಲ್ಬುಗಳು.	13	12
34.	ಎಲೆಕ್ಟ್ರೋಡುಗಳು, ಎಂದರೆ, ಎಲ್ಲಾ ಬಗೆಯ ವೆಲ್ಡಿಂಗ್ ಎಲೆಕ್ಟ್ರೋಡುಗಳು, ಆನೋಡ್‌ಗಳು, ವೆಲ್ಡಿಂಗ್ ರಾಡ್‌ಗಳು ಸಾಲ್ಡರಿಂಗ್ ರಾಡ್‌ಗಳು ಮತ್ತು ಸಾಲ್ಡರಿಂಗ್ ವೈರುಗಳು ಸೇರಿ ಗ್ರಾಫೈಟ್ ಎಲೆಕ್ಟ್ರೋಡುಗಳು.	13	12
35.	ಚಲನ ಚಿತ್ರ ಗ್ರಾಹಕ ಫಿಲ್ಮುಗಳು, ಛಾಯಾಗ್ರಾಹಕ ಫಿಲ್ಮುಗಳು ಮತ್ತು ಛಾಯಾಗ್ರಾಹಕ ಪೇಪರುಗಳ ಸಹಿತ, ಎಕ್ಸರೇ ಫಿಲ್ಮುಗಳು	9	8
36.	ಅಗ್ನಿ ಶಾಮಕ ಸಾಧನಗಳು ಮತ್ತು ಉಪಕರಣಗಳು	13	12
37.	ಗಾರ್ಡನ್ ಮತ್ತು ಬೀಚ್ ಕೊಡೆಗಳು	13	12
38.	(ಭಾರತ ಸರ್ಕಾರದ ಪ್ರವಾಸೋದ್ಯಮ ಇಲಾಖೆ ಮನ್ನಣೆ ನೀಡಿದ ತ್ರೀಸ್ಟಾರ್, ಫೋರ್ ಸ್ಟಾರ್, ಫೈವ್ ಸ್ಟಾರ್ ಹೋಟಲುಗಳನ್ನು ಹೊರತುಪಡಿಸಿ ಬೇರೆ ಸ್ಥಳಗಳಲ್ಲಿ) ಆಹಾರ ಪದಾರ್ಥಗಳು ಮತ್ತು ಪಾನೀಯಗಳನ್ನು ಮಾರಾಟ ಮಾಡಿದಾಗ	13	12
39.	ಸೋಯ ಹಾಲು	13	12
40.	ಧಾರಕಗಳಲ್ಲಿ ಮಾರಾಟ ಮಾಡಿದ ಮಾಂಸ ಮತ್ತು ಕೋಳಿ	9	8
41.	ಆಹಾರ ಸುರಕ್ಷಾ ವಸ್ತುಗಳು, ಅಡಿಗೆ ಬಣ್ಣಗಳು ಮತ್ತು ಆಹಾರ ಸುವಾಸನೆಗೊಳಿಸುವ ಎಸೆನ್ಸುಗಳು	13	12
42.	ಪಾದರಕ್ಷೆಗಳು.	13	12
43.	ಪಾದರಕ್ಷೆ ಪಾಲಿಶ್‌ಗಳು, ಕೇರ್ ಕಿಟ್‌ಗಳು ಮತ್ತು ಲೇಸ್‌ಗಳು	13	12
44.	ಸತುಲೇಪಿತ ಕಬ್ಬಿಣದ ಬಕೆಟ್‌ಗಳು.	9	8

1	2	3	4
45.	ಗ್ಲಿಸರಿನ್	9	8
46.	ಎಲ್ಲಾ ತರಹದ ಜರಿ	5	4
47.	ಗೊಟ್ಟ ಮತ್ತು ನಕ್ಕಿ	5	4
48.	ಪ್ರತಿಯೊಂದು ವಿವರಣೆಯ ಗ್ರಾಮಫೋನ್ (ರೇಡಿಯೋ ಗ್ರಾಮಫೋನ್‌ಗಳು ಸೇರಿದಂತೆ) ಅದರ ಉಪಸಾಧನಗಳು ಮತ್ತು ಭಾಗಗಳು ಸೇರಿ.	13	12
49.	ಗ್ರಾಮಫೋನಿನ ರೆಕಾರ್ಡ್‌ಗಳು, ಕಾಂಪ್ಯಾಕ್ಟ್ ಡಿಸ್ಕ್‌ಗಳು ಮತ್ತು ಗ್ರಾಮಫೋನ್ ಸೂಜಿಗಳು.	13	12
50.	ಹಾರ್ಡ್‌ವೇರ್ ವಸ್ತುಗಳು, ಎಂದರೆ,- ಬೋಲ್ಟ್‌ಗಳು, ಬೋಲ್ಟೆಂಡ್‌ಗಳು, ರಿವೆಟ್‌ಗಳು, ನಟ್ಟುಗಳು, ಹಿಂಜುಗಳು, ಸ್ಕ್ರೂಗಳು, ಸ್ಕ್ರೂ ಹುಕ್‌ಗಳು, ಸ್ಕ್ರೂ ರಿಂಗ್‌ಗಳು, ಸ್ಕ್ರೂ ಸ್ಟಡಿಂಗ್‌ಗಳು ಸೆಲ್ಫ ಟ್ಯಾಪ್ಡ್ ಸ್ಕ್ರೂಗಳು, ಡೋರ್ ಕ್ಲೋಸರ್‌ಗಳು, ವೀಲ್‌ಗಳು, ಬ್ಲಾಕ್‌ಗಳು, ಕ್ಲಾಂಪ್‌ಗಳು, ಗನ್ ಮೆಟಲ್ ಫಿಟ್ಟಿಂಗ್‌ಗಳು, ಕರ್ಟನ್ ರಾಡ್‌ಗಳು, ಗ್ರೈಂಡಿಂಗ್ ಸ್ಟೋನ್‌ಗಳು, ಎಲ್ಲಾ ವಿಧವಾದ ಬೀಗ ಮತ್ತು ಪ್ಯಾಡ್ ಲಾಕ್‌ಗಳು,ವಾಷರ್‌ಗಳು, ಸ್ಪ್ರಿಂಗ್‌ಗಳು, ಸ್ಪ್ರಿಂಗ್‌ವಾಷರ್‌ಗಳು, ಪ್ಯಾನಲ್‌ಪಿನ್‌ಗಳು, ಗ್ಲಾಸ್‌ವುಲ್, ಸ್ಟೀಲ್‌ವುಲ್, ಅಬ್ರೆಸೀವ್‌ಗಳು, ಮೊಳೆಗಳು, ವೈರ್ ಮೊಳೆಗಳು ಮೂಲಲೋಹ ಮತ್ತು ಮಿಶ್ರಲೋಹಗಳಿಂದ ತಯಾರಾದವುಗಳು.	13	12
51.	ಇತರೆ ಕಡೆ ನಿರ್ದಿಷ್ಟಪಡಿಸಿದವುಗಳನ್ನು ಬಿಟ್ಟು (ಮೂಲ ಲೋಹ ಅಥವಾ ಮಿಶ್ರ ಲೋಹದಿಂದ ಮಾಡಿದ) ಬಾಗಿಲುಗಳು, ಕಿಟಕಿಗಳು ಮತ್ತು ಪೀಠೋಪಕರಣಗಳ ಜೋಡಣೆಗಳು.	13	12
52.	ಮುಳ್ಳು ಬೇಲಿ ತಂತಿ, ವೈರ್ ಮೆಶ್, ಪ್ಲಾಸ್ಟರ್‌ಮೆಶ್‌ಗಳು ಮತ್ತು ಮೆಟಾಲಿಕ್‌ವೈರ್ ನೆಟ್ಟಿಂಗ್ಸ್.	13	12
53.	ಪೇಂಟ್ ಬ್ರಶ್‌ಗಳು.	13	12
54.	ಕರಕುಶಲ ವಸ್ತುಗಳು	13	12
55.	ಹೆಲ್ಮೆಟ್‌ಗಳು	9	8

1	2	3	4
56.	ಒಳಉಡುಪುಗಳು (ಹೊಸೈರಿ)	5	4
57.	ಎಲ್ಲಾ ಬಗೆಯ ಇಂಕ್‌ಗಳು	13	12
58.	ಸೆಣಬು ಸೇರಿದ ಪಾಲಿಪ್ರೊಪಲೀನ್ ಹೊದಿಕೆ ವಸ್ತುಗಳು.	13	12
59.	ಒಣ ಹಣ್ಣುಗಳು (ಡ್ರೈ ಫ್ರೂಟ್ಸ್)	9	8
60.	ಜೀರಿಗೆ	5	4
61.	ಸುಣ್ಣ ಮತ್ತು ಸುಣ್ಣದ ಕಲ್ಲು	5	4
62.	ಅರ್ತ್ ಮೂವರ್‌ಗಳು ಅಂದರೆ, ಡಂಪರ್‌ಗಳು, ಡಿಪ್ಪರ್‌ಗಳು, ಬುಲ್ಡೋಜರ್‌ಗಳು ಮತ್ತು ಅಂತಹವು	9	8
63.	ಅರ್ತ್‌ಮೂವರ್‌ಗಳ ಭಾಗಗಳು ಮತ್ತು ಉಪಸಾಧನಗಳು (ಡೀಜಲ್ ಎಂಜಿನ್ ಮತ್ತು ಅದರ ಭಾಗಗಳು, ಬ್ಯಾಟರಿಗಳು ಮತ್ತು ಟೈರುಗಳು, ಟ್ಯೂಬ್‌ಗಳು ಮತ್ತು ಫ್ಲಾಪ್‌ಗಳ ಹೊರತಾಗಿ).	13	12
64.	ಎಲ್ಲಾ ಬಗೆಯ ಯಂತ್ರೋಪಕರಣಗಳು ಮತ್ತು ಅವುಗಳ ಭಾಗಗಳು ಹಾಗೂ ಉಪಸಾಧನಗಳು ಇತರೆಡೆ ನಿರ್ದಿಷ್ಟಪಡಿಸಿದವುಗಳನ್ನು ಹೊರತುಪಡಿಸಿ.	13	12
65.	ಹೊಲಿಗೆ ಯಂತ್ರಗಳು, ಅದರ ಬಿಡಿ ಭಾಗಗಳು ಮತ್ತು ಉಪ ಸಾಧನಗಳು	13	12
66.	ಕೈಗಾರಿಕಾ ಯಂತ್ರೋಪಕರಣಗಳಲ್ಲಿ ಉಪಯೋಗಿಸುವ ಟೂಲ್ ಯಂತ್ರ, ವೇಲ್ ಪಾರ್ಟ್‌ಗಳು ಅಂದರೆ ಟ್ವಿಸ್ಟ್ ಡ್ರಿಲ್‌ಗಳು, ಟ್ಯಾಪ್‌ಗಳು, ರೀಮರ್‌ಗಳು, ಕಟ್ಟರ್‌ಗಳು, ಡೈಗಳು, ಗ್ರೈಂಡಿಂಗ್ ವೀಲ್‌ಗಳು, ಬಟನ್‌ಬಿಟ್‌ಗಳು, ಕಾರ್ಬೈಡ್ ವೇರ್ ವಾರ್ಟ್‌ಗಳು, ಸೆರಾಮಿಕ್ ಕೈಗಾರಿಕಾ ವೇರ್ ಪಾರ್ಟ್‌ಗಳು ಮತ್ತು ಅಂತಹವು	9	8
67.	ಔಷಧಿಗಳು - ಮೆಡಿಸಿನಲ್ ಮತ್ತು ಫಾರ್ಮಾಸ್ಯೂಟಿಕಲ್ ತಯಾರಿಕೆಗಳು (ಇತರೆಡೆ ನಿರ್ದಿಷ್ಟಪಡಿಸಿದವುಗಳನ್ನು ಹೊರತುಪಡಿಸಿ).	13	12

1	2	3	4
68.	ಪಾದರಸ	13	12
69.	ಸೊಳ್ಳೆನಿವಾರಕಗಳು, ಸಾಧನಗಳು ಮತ್ತು ಭಾಗ ಮತ್ತು ಉಪ ಭಾಗಗಳು.	13	12
70.	ಕಬ್ಬಿಣೇತರ ಅಚ್ಚುಹೊಯ್ದ ಎರಕಗಳು ಮತ್ತು ಮಿಶ್ರ ಲೋಹಗಳು	9	8
71.	ಕನ್ನಡಕಗಳು, ಸನ್‌ಗ್ಲಾಸ್‌ಗಳು, ಗಾಗಲ್‌ಗಳು, ಲೆನ್ಸುಗಳು ಮತ್ತು ಫ್ರೇಮುಗಳು, ಅವುಗಳ ಜೋಡಣೆಗಳು, ಭಾಗಗಳು ಮತ್ತು ಉಪಸಾಧನಗಳು ಸೇರಿ.	13	12
72.	ಎಲ್ಲ ನಮೂನೆಯ ಪೇಪರ್‌ಗಳು, ಅಮೋನಿಯ ಪೇಪರ್, ಬ್ಲಾಟಿಂಗ್ ಪೇಪರ್, ಕಾರ್ಬನ್ ಪೇಪರ್, ಸಿಲೋಫಿನ್ ಪೇಪರ್, ಪಿ.ವಿ.ಸಿ ಕೋಟ್ ಮಾಡಿದ ಪೇಪರ್, ಸ್ಟೆನ್ಸಿಲ್ ಪೇಪರ್, ವಾಟರ್ ಪ್ರೂಫ್ ಪೇಪರ್, ಆರ್ಟ್ ಬೋರ್ಡ್ಸ್, ಕಾರ್ಡ್ ಬೋರ್ಡ್ಸ್, ಕಾರುಗೇಟೆಡ್ ಬೋರ್ಡ್ ಡ್ಯೂಪ್ಲೆಕ್ಸ್ ಬೋರ್ಡ್, ಪಲ್ಪ್ ಬೋರ್ಡ್, ಸ್ಟ್ರಾ ಬೋರ್ಡ್, ಟ್ರಿಪ್ಲೆಕ್ಸ್ ಬೋರ್ಡ್, ಸ್ಟೂಡೆಂಟ್ ನೋಟ್ ಬುಕ್ಕುಗಳು ಮತ್ತು ಅಂತಹ ವಸ್ತುಗಳು ಸೇರಿ ಆದರೆ, ಫೋಟೋಗ್ರಾಫಿಕ್ ಪೇಪರ್ ಹೊರತುಪಡಿಸಿ	9	8
73.	ಎಲ್ಲ ನಮೂನೆಯ ಪೆನ್ನುಗಳು ಮತ್ತು ರೀಫಿಲ್‌ಗಳು ಸಹಿತ	13	12
74.	ನಾಲ್ಕನೇ ಅನುಸೂಚಿಯಲ್ಲಿ ಬಾರದ ಕಬ್ಬಿಣ, ಸಿಮೆಂಟ್, ಕಲ್ಲು ಮತ್ತು ಆಸ್‌ಬೆಸ್ಟಾಸ್ ಇವುಗಳಿಂದ ಮಾಡಿರುವ ಪೈಪುಗಳು, ಟ್ಯೂಬುಗಳು ಮತ್ತು ಜೋಡಣೆಗಳು	13	12
75.	ಹೈ ಡೆನ್ಸಿಟಿ ಪಾಲಿಥೀನ್, ಲೋ ಡೆನ್ಸಿಟಿ ಪಾಲಿಥೀನ್, ರಿಜಿಡ್ ಪಾಲಿವಿನೈಲ್ ಕ್ಲೋರೈಡ್ ಪೈಪುಗಳು ಮತ್ತು ಫಿಟ್ಟಿಂಗ್‌ಗಳು	5	4
76.	ಪ್ರೆಶರ್ ಕುಕ್ಕರ್‌ಗಳು, ಅವುಗಳ ಭಾಗಗಳು ಮತ್ತು ಉಪಸಾಧನಗಳು	13	12

1.	2	3	4
77.	ಮುದ್ರಿತ ಸಾಮಗ್ರಿ, ಓದುವ ಪುಸ್ತಕಗಳನ್ನು ಹೊರತುಪಡಿಸಿ	9	8
78.	ಹತ್ತು ಅಶ್ವ ಶಕ್ತಿಗಿಂತ ಹೆಚ್ಚು ಇರುವ ಆಯಿಲ್ ಇಂಜಿನ್‌ಗಳ ಪಂಪುಸೆಟ್ಟುಗಳು	13	12
79.	ಹತ್ತು ಅಶ್ವಶಕ್ತಿಗಿಂತ ಹೆಚ್ಚಿರುವ ವಿದ್ಯುತ್‌ಶಕ್ತಿ ಮೋಟಾರುಳ್ಳ ಪಂಪ್‌ಸೆಟ್‌ಗಳು	13	12
80.	ರೈಲ್ ಕೋಚ್‌ಗಳು ಮತ್ತು ಅದರ ಭಾಗಗಳು ಮತ್ತು ಉಪಸಾಧನಗಳು	13	12
81.	ಕೈಯಿಂದ, ಯಂತ್ರದಿಂದ ಅಥವಾ ವಿದ್ಯುತ್‌ನಿಂದ ನಡೆಸಲಾಗುವ ರೋಲಿಂಗ್ ಶಟರ್‌ಗಳು ಮತ್ತು ಕೊಲ್ಯಾಪ್ಸಬಲ್ ಗೇಟುಗಳು ಮತ್ತು ಅವುಗಳ ಭಾಗಗಳು	13	12
82.	ರೂಫಿಂಗ್ ಲೈಟ್‌ರೂಫಿಂಗ್ ಮತ್ತು ಫಾಲ್ಸ್‌ರೂಫಿಂಗ್ ವಸ್ತುಗಳು, ಸಿಮೆಂಟ್ ಮತ್ತು ಆಸ್‌ಬೆಸ್ಟಾಸ್ ಶೀಟುಗಳು, ಅಸ್ಪಾಲ್ಟ್ ಶೀಟುಗಳು, ಹಾರ್ಡ್ ಬೋರ್ಡುಗಳು, ಸಾಫ್ಟ್ ಬೋರ್ಡುಗಳು, ಪ್ಲೈವುಡ್, ವಿನಿಯರ್ಡ್ ಬೋರ್ಡುಗಳು ಮತ್ತು ಪ್ಯಾನೆಲ್‌ಗಳು, ಮತ್ತು ಲ್ಯಾಮಿನೇಟಡ್ ಶೀಟುಗಳು ಸೇರಿ ಆದರೆ ಇತರೆಡೆ ನಿರ್ದಿಷ್ಟಪಡಿಸಿದವುಗಳನ್ನು ಹೊರತುಪಡಿಸಿ	13	12
83.	ಅಸ್‌ಫಾಲ್ಟಿಕ್ ಷೀಟ್‌ಗಳು	13	12
84.	ಕಚ್ಚಾ ರಬ್ಬರ್ ಅಂದರೆ ದ್ರವ್ಯರೂಪದ ಅಥವಾ ಶೀಟಿನ ರೂಪದಲ್ಲಿರುವ ಲೇಟೆಕ್ಸ್	13	12
85.	ಸಿಂಥೆಟಿಕ್ ರಬ್ಬರ್, ಬೂಟಾಡೀನ್ ಸೇರಿ ಅಕ್ರಿಲೋನೈಟ್ರಿಲ್ ರಬ್ಬರ್, ಸ್ಟಿರೀನ್ ಬೂಟಾಡೀನ್ ರಬ್ಬರ್ ಮತ್ತು ಬುಟೈಲ್ ರಬ್ಬರ್, ಸಿಂಥೆಟಿಕ್ ರಬ್ಬರ್ ಲೇಟೆಕ್ಸ್, ಪ್ರಿವಲ್ಕನೈಸಡ್ ಸಿಂಥೆಟಿಕ್ ರಬ್ಬರ್ ಲೇಟೆಕ್ಸ್ ಸೇರಿ	13	12
86.	ಸ್ಯಾನಿಟರಿ ಟವಲ್‌ಗಳು, ಸ್ಯಾನಿಟರಿ ನ್ಯಾಪ್‌ಕಿನ್‌ಗಳು, ಬೆಲ್ಟ್ ರಹಿತ ನ್ಯಾಪ್‌ಕಿನ್‌ಗಳು ಮತ್ತು ಟ್ಯಾಂಪನ್‌ಗಳು, ಡಿಸ್‌ಪೋಸೆಬಲ್ ಡೈಯಾಪರ್‌ಗಳು	13	12

1.	2	3	4
87.	ಹೊಲಿಯುವ ದಾರ	5	4
88.	ಸೋಪಿನ ಚೂರುಗಳು (ಫ್ಲೇಕ್ಸ್), ಪುಡಿ ಸೇರಿದಂತೆ ಬಟ್ಟೆ ಒಗೆಯುವ ಸೋಪುಗಳು	13	12
89.	ಡಿಟರ್ಜೆಂಟ್ ಪೌಡರ್‌ಗಳು ಮತ್ತು ಬಿಲ್ಲೆಗಳು, ದ್ರವಗಳು ಮತ್ತು ಲಾಂಡ್ರಿ ಬ್ಲೈಟನರ್‌ಗಳು ಸೇರಿ.	13	12
90.	ಧ್ವನಿ ಪ್ರಸರಣಾ ಸಾಧನ ಸಾಮಗ್ರಿಗಳು, ಲೌಡ್ ಸ್ಪೀಕರ್‌ಗಳು ಮತ್ತು ಅವುಗಳ ಭಾಗಗಳು ಸೇರಿ, ಆದರೆ ಟೆಲಿಫೋನ್ ಮತ್ತು ಅದರ ಭಾಗಗಳನ್ನು ಹೊರತುಪಡಿಸಿ	13	12
91.	ಕ್ರೀಡಾ ಸಾಮಗ್ರಿಗಳು - ದೇಹದಾರ್ಢ್ಯ ಸಾಮಗ್ರಿಗಳು, ಟ್ರೋಫಿಗಳು, ಪದಕಗಳು, ಫಲಕಗಳು (ಧರಿಸುವ ಉಡುಪುಗಳನ್ನು ಹೊರತುಪಡಿಸಿ)	5	4
92.	ಲೇಖನ ಸಾಮಗ್ರಿಗಳು, ಲೆಕ್ಕದ ಪುಸ್ತಕಗಳು, ಪೇಪರ್ ಎನ್ವೆಲಪ್‌ಗಳು, ಡೈರಿಗಳು, ಕ್ಯಾಲೆಂಡರ್‌ಗಳು, ರೇಸ್ ಕಾರ್ಡುಗಳು, ಕ್ಯಾಟ್‌ಲಾಗುಗಳು, ಶುಭಾಶಯ ಕಾರ್ಡುಗಳು, ಆಮಂತ್ರಣ ಕಾರ್ಡುಗಳು, ವಿನೋದ ಪೋಸ್ಟ್‌ಕಾರ್ಡುಗಳು, ಚಿತ್ರಮಯ ಪೋಸ್ಟ್‌ಕಾರ್ಡುಗಳು, ವಿಶೇಷ ಸಂದರ್ಭಗಳ ಕಾರ್ಡ್‌ಗಳು, ಫೋಟೋ ಮತ್ತು ಸ್ಟಾಂಪ್ ಆಲ್ಬಮ್‌ಗಳು	13	12
93.	ಕ್ಲಿಪ್ ಬೋರ್ಡ್, ಕ್ಲಚ್ ಪೆನ್ಸಿಲ್, ಬ್ಲ್ಯಾಕ್ ಲೆಡ್, ಡೇಟ್ ಸ್ಟಾಂಪ್, ಡಸ್ಟರ್, ಇಂಡೆಕ್ಸ್ ಫೈಲ್ ಕ್ಲಿಪ್, ಫೋಕರ್ಸ್ ಎಲ್ಲ ವಿಧದ ಆಫೀಸ್ ಫೈಲುಗಳು, ಪೇಪರ್ ಕಟ್ಟರ್, ಬ್ಲಾಕ್ ಬೋರ್ಡ್ ಡಸ್ಟರ್	13	12
94.	ಕಛೇರಿ ಡೆಸ್ಕ್ ಸಾಮಗ್ರಿಗಳು, ಪಂಚಿಂಗ್ ಮೆಷಿನ್ ಮತ್ತು ಸ್ಟಾಪ್‌ಲರ್ ಮೆಷೀನ್‌ಗಳು ಸೇರಿದಂತೆ	13	12
95.	ಪೇಪರ್ ಪಿನ್ನುಗಳು, ಪೆನ್ ಸ್ಟಾಂಡ್ಸ್, ಪೆನ್ಸಿಲ್ ಲೆಡ್, ಪೆನ್ಸಿಲ್ ಶಾರ್ಪನರ್ ಪರಮನೆಂಟ್ ಮಾರ್ಕರ್, ರಿಫಿಲ್ ಲೆಡ್‌ಗಳು, ಸ್ಟಾಂಪ್ ರ್‍ಯಾಕ್‌ಗಳು, ಸ್ಟಾಪಲರ್ ಪಿನ್‌ಗಳು, ಎಲ್ಲ ತರಹದ ರೂಲರ್‌ಗಳು, ಗುಳ್ಳಿ ಪಿನ್ನುಗಳು ಮತ್ತು ಫಿನ್ ಪ್ಯಾಡ್‌ಗಳು	13	12

1.	2	3	4
96.	ಉಕ್ಕಿನ ಬಾಗಿಲು ಚೌಕಟ್ಟುಗಳು, ಬಾಗಿಲುಗಳು, ಕಿಟಕಿಗಳು ಮತ್ತು ಕಿಟಕಿ ಬಾಗಿಲುಗಳು	13	12
97.	ಸ್ಟೌವ್‌ಗಳು, ಎಂದರೆ, ಗ್ಯಾಸ್ ಸ್ಟೌವ್‌ಗಳು ಮತ್ತು ಸೀಮೆಎಣ್ಣೆ ಸ್ಟೌವ್‌ಗಳು, ಬಾರ್ಬ್ ಕ್ಯೂಗಳು, ಇದ್ದಿಲಿನ ಒಲೆಗಳು ಮತ್ತು ತಂದೂರ್ ಸ್ಟೌವ್‌ಗಳು ಮತ್ತು ಅವುಗಳ ಭಾಗಗಳು ಮತ್ತು ಉಪಸಾಧನಗಳು	13	12
98.	ಶಸ್ತ್ರಚಿಕಿತ್ಸೆ ಮತ್ತು ದಂತ ಚಿಕಿತ್ಸೆ ಉಪಕರಣಗಳು ಮತ್ತು ಸಲಕರಣೆಗಳು, ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ ಉಪಕರಣಗಳೂ ಸೇರಿದಂತೆ, ಸಿರೆಂಜ್‌ಗಳು ಮತ್ತು ಸೂಜಿಗಳು; ಶಸ್ತ್ರಚಿಕಿತ್ಸಾಗಾರದ ಉಪಕರಣಗಳು, ನೆರಳು ದೀಪಗಳು ಮತ್ತು ಟ್ಯೂಬ್ಸ್, ಶಸ್ತ್ರಚಿಕಿತ್ಸೆ ಮತ್ತು ತಪಾಸಣೆ ಟೇಬಲ್‌ಗಳು ಮತ್ತು ಮಂಚಗಳು ಮತ್ತು ಹೀರುವ ಉಪಕರಣಗಳು; ಸ್ಟಾಂಡ್‌ಗಳು, ಸ್ಟ್ರಕ್ಚರ್‌ಗಳು, ಟ್ರಾಲಿಗಳು, ಡೆಂಟಲ್ ಚೇರುಗಳು, ಲ್ಯಾಬೋರೇಟರಿ ಉಪಕರಣಗಳು ಮತ್ತು ಗಾಜಿನ ಉಪಕರಣಗಳು, ಸ್ಟೆಥೆಸ್ಕೋಪ್‌ಗಳು, ಥರ್ಮಾಮೀಟರ್‌ಗಳು, ಲ್ಯಾಕ್ಟೋಮೀಟರ್‌ಗಳು, ರಕ್ತ ಒತ್ತಡ ಮಾಪನಗಳು, ಸರ್ಜಿಕಲ್ ಕಾಟನ್‌ವುಲ್, ಎನೀಮೋ ಕ್ಯಾನ್‌ಗಳು, ಬೆಡ್‌ಪ್ಯಾನುಗಳು, ಕಿಡ್ನಿಟ್ರೇಗಳು ಮತ್ತು ಅಂತಹುದೇ ಇತರೆ ಆಸ್ಪತ್ರೆಯ ಸಲಕರಣೆಗಳು, ಸರ್ಜಿಕಲ್ ಗ್ಲೌಸ್‌ಗಳು, ಎಪ್ರನ್‌ಗಳು, ಆಪರೇಷನ್ ಸೂಟ್ಸ್‌ಗಳು, ರಬ್ಬರ್ ಶೀಟುಗಳು, ಕಾತೆಟರ್‌ಗಳು, ಐವಿ ಸೆಟ್ಟುಗಳು ಮತ್ತು ಇತರೆ ಅಂತಹವುಗಳು, ಸರ್ವಿಕಲ್ ಕಾಲರುಗಳು, ಅಬ್ಡಾಮಿನಲ್ ಪಟ್ಟಿಗಳು ಮತ್ತು ಇತರೆ ಅಂತಹವುಗಳು	13	12
99.	ಟ್ಯಾಬುಲೇಟಿಂಗ್ ಯಂತ್ರಗಳು, ಗಣಕ ಯಂತ್ರಗಳು (ಎಲ್ಲಾ ಬಗೆಯ ಯಾಂತ್ರಿಕ ಅಥವಾ ವಿದ್ಯುತ್ ಚಾಲಿತ ಗಣಕ ಯಂತ್ರಗಳು ಸೇರಿ) ಡೂಪ್ಲಿಕೇಟಿಂಗ್ ಯಂತ್ರಗಳು, ರೋನಿಯೋ ಯಂತ್ರಗಳು, ಅವುಗಳ ಭಾಗಗಳು ಮತ್ತು ಉಪ ಸಾಧನಗಳು.	13	12

1.	2	3	4
100.	ಟೈಲರಿಂಗ್ ಸಾಮಗ್ರಿಗಳು ಅಂದರೆ ಸೂಜಿಗಳು, ಕತ್ತರಿಗಳು, ಹುಕ್ಕುಗಳು, ಬಟನ್‌ಗಳು, ಜಿಪ್‌ಗಳು, ಬಕಲ್‌ಗಳು, ಅಳತೆ ಟೇಪುಗಳು ಮತ್ತು ಅಳತೆ ಪಟ್ಟಿ, ಕಾಲರ್‌ಗಳು ಮತ್ತು ಕಾಲರ್ ಬೋನ್‌ಗಳು. ಹಾರನ್ ಬಟನ್ ಗಳು, ಇಂಡೆಂಟ್ ಹುಕ್ಕುಗಳು / ಕಣ್ಣುಗಳು, ಜೀನ್ಸ್ ಬಟನ್‌ಗಳು, ನಿಟ್ಟಿಂಗ್ ಪಿನ್‌ಗಳು, ಲಾಂಗ್ ಸ್ಟಿಚ್ ಕಿಟ್‌ಗಳು, ಎಮ್.ಎಸ್. ಕೋಟೆಡ್ ಬಟನ್‌ಗಳು/ ಸ್ಟಾರ್ ಗಳು, ಜಿಪ್ ಪಾಸ್ಟನರ್‌ಗಳು, ಜಿಪ್ಪರ್‌ಗಳು ಮತ್ತು ಕ್ರೋಚೆಟ್ ಹುಕ್‌ಗಳು	13	12
101.	ಹುಣಿಸೆ ಬೀಜ	5	4
102.	ಹದ ಮಾಡಲು ಬಳಸುವ ತೊಗಟೆಗಳು.	13	12
103.	ಬೇರೆ ನಿರ್ದಿಷ್ಟಪಡಿಸಿದವುಗಳನ್ನು ಹೊರತುಪಡಿಸಿ ಬಟ್ಟೆ ಮತ್ತು ಜವಳಿ	9	8
104.	ನಾಡ ಹೆಂಚುಗಳನ್ನು ಮತ್ತು ಎರೆ ಹೆಂಚುಗಳನ್ನು ಹೊರತುಪಡಿಸಿ ಮಿಕ್ಕ ಹೆಂಚುಗಳು	13	12
105.	ಸ್ಪಾನರ್‌ಗಳು, ಸ್ಕ್ರೂಡ್ರೈವರ್‌ಗಳು, ಅರಗಳು, ಕಟಿಂಗ್ ಪ್ಲೇಯರ್‌ಗಳು, ಸುತ್ತಿಗೆಗಳು ಮುಂತಾದ ಕೈಯಲ್ಲಿ ಬಳಸುವಂತಹ ಉಪಕರಣಗಳು.	13	12
106.	ಎಲ್ಲಾ ಬಗೆಯ ಆಟಿಕೆಗಳು ಮತ್ತು ವಿದ್ಯುತ್ ಚಾಲಿತ ಆಟಿಕೆಗಳು ಸೇರದಂತೆ (ಎಲೆಕ್ಟ್ರಾನಿಕ್ ಹೊರತುಪಡಿಸಿ)	9	8
107.	ಬೆರಳಚ್ಚು ಯಂತ್ರಗಳು, ಬೆರಳಚ್ಚು ಯಂತ್ರಗಳ ಭಾಗಗಳು ಮತ್ತು ಉಪಸಾಧನಗಳು, ಬೆರಳಚ್ಚು ಯಂತ್ರದ ರಿಬ್ಬನ್, ಕನ್ನಡ ಬೆರಳಚ್ಚು ಯಂತ್ರಗಳನ್ನು ಹೊರತುಪಡಿಸಿ	13	12
108.	ವ್ಯಾಕ್ಯೂಂಪ್ಲಾಸ್ಕ್‌ಗಳು, ಥರ್ಮೋವೇರ್ ಪಧಾರ್ಥಗಳು ಮತ್ತು ಅವುಗಳ ರೀಫಿಲ್‌ಗಳು.	13	12
109.	ಮೋಟಾರು ವಾಹನಗಳಲ್ಲಿ ಬಿಡಿ ಭಾಗಗಳಾಗಿ ಉಪಯೋಗಿಸುವ ವಾಲ್ವುಗಳನ್ನು ಹೊರತುಪಡಿಸಿ ಇತರೆ ಎಲ್ಲಾ ವಾಲ್ವುಗಳು	13	12
110.	ಜಲ ಮಾಪಕಗಳು	13	12

1.	2	3	4
111.	ಫೈಬರ್ ಗ್ಲಾಸ್, ಪ್ಲಾಸ್ಟಿಕ್ ಅಥವಾ ಕೃತಕ ವಸ್ತುಗಳ ಹಾಗೂ ಅಲ್ಯುಮಿನಿಯಂ ನೀರಿನ ಟ್ಯಾಂಕ್‌ಗಳು	13	12
112.	ತೂಕಗಳು ಮತ್ತು ಅಳತೆಗಳು	13	12
113.	ನೀಲಗಿರಿ, ಸರ್ವೆ ಮರ, ಹಾಲುವಾನಾ, ಮರದ ಬಾಗಿಲ ಚೌಕಟ್ಟುಗಳು, ಕಿಟಕಿ ಚೌಕಟ್ಟುಗಳು ಮತ್ತು ಬಾಗಿಲುಗಳನ್ನು ಸೇರಿದಂತೆ ಎಲ್ಲಾ ಆಕಾರ ಮತ್ತು ಅಳತೆಯ ಮರ ಮಟ್ಟುಗಳನ್ನು ಸೇರಿದಂತೆ ಎಲ್ಲಾ ತರಹದ ಮರ	13	12
114.	ಎಲ್ಲಾ ತರಹದ ಮೇಣಗಳು	13	12
115.	ಕ್ಷ-ಕಿರಣ ಉಪಕರಣಗಳು, ವೈದ್ಯ ಸೇವೆಯಲ್ಲಿ ಉಪಯೋಗಿಸುವ ಚಿತ್ರ ಗ್ರಾಹಕ, ಪತ್ತೆ ಹಚ್ಚುವ ಮತ್ತು ಗುಣಪಡಿಸುವ ಯಂತ್ರಗಳು.	13	12
116.	ಯೀಸ್ಟ್ - ಒಣಗಿದ, ಹಸಿ ಮತ್ತು ಕಂಪ್ರೆಸ್ಡ್	9	8
117.	ಜಿಂಕ್, ಲೆಡ್ ಮತ್ತು ಕ್ಯಾಡಿಮಿಯಮ್	5	4
118.	ಕಾಳು ಮೆಣಸು ಮತ್ತು ಏಲಕ್ಕಿ	5	4
119.	ವಾರ್ಷಿಕ 15 ಲಕ್ಷ ರೂಪಾಯಿಗಳಿಗಿಂತ ಕಮ್ಮಿ ವಹಿವಾಟಿರುವ ವಹಿವಾಟುದಾರರು ತಾಯಾರಿಸಿ ಮಾರಾಟ ಮಾಡಿದ ಕನ್‌ಫೆಕ್ಷನರಿ, ಬಿಸ್ಕತ್ತುಗಳು, ಕೇಕ್‌ಗಳು ಮತ್ತು ಇತರೆ ಬೇಕರಿ ಪದಾರ್ಥಗಳು	5	4
120.	ಶಿಕ್ಷಣ ಸಂಸ್ಥೆಗಳಿಗೆ ಶಿಕ್ಷಣ ಸಾಧನಗಳನ್ನಾಗಿ ಉಪಯೋಗಿಸಲು ಮಾರಾಟ ಮಾಡಿದ ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ ಉಪಕರಣಗಳು	5	4
121.	ನಕಲಿ (ಕೃತಕ) ಆಭರಣಗಳು		
122.	ರಬ್ಬರ್ ಮತ್ತು ಇತರ ಟೈರುಗಳು, ಟ್ಯೂಬುಗಳು ಮತ್ತು ಫ್ಲ್ಯಾಪ್‌ಗಳು ನಾಲ್ಕನೇ ಅನುಸೂಚಿಯಲ್ಲಿ ಬಾರದವುಗಳನ್ನು ಇತರೆಡೆ ನಿರ್ದಿಷ್ಟ ಪಡಿಸಿದವುಗಳನ್ನು ಹೊರತುಪಡಿಸಿ.	5 9	4 8
123.	ಬೆಂಕಿ ಪೊಟ್ಟಣಗಳು	5	4
124.	ಒಣ ಮೆಣಸಿನ ಕಾಯಿ	2	1
125.	ಅನುಸೂಚಿಯಲ್ಲಿಲ್ಲದ ಸರಕುಗಳು	13	12

ಬಿ. ಆರನೇ ಅನುಸೂಚಿ

ಕ್ರಮ ಸಂಖ್ಯೆ	ಗುತ್ತಿಗೆ ಕಾಮಗಾರಿಗಳ ಹೆಸರು	ಪ್ರಸ್ತುತ ತೆರಿಗೆ ದರ (%)	ಉದ್ದೇಶಿತ ತೆರಿಗೆ ದರ (%)
1	2	3	4
1.	ಸ್ಥಾವರ ಮತ್ತು ಯಂತ್ರೋಪಕರಣಗಳ ನಿರ್ಮಾಣ ಮತ್ತು ಸ್ಥಾಪನೆ.	13	12
2.	ನಿರ್ಮಾಣವನ್ನು ಒಳಗೊಂಡು ರಚನಾ ಕಾಮಗಾರಿಗಳ ನಿರ್ಮಾಣ ಮತ್ತು ಕಟ್ಟುವಿಕೆ, ಕಬ್ಬಿಣದ ಆಸರೆ ಕಟ್ಟುಗಳು ಮತ್ತು ಉದ್ದ ಸರಗಳು, ಇತ್ಯಾದಿ.	5	4
3.	ಕ್ರೇನ್ ಮತ್ತು ಎತ್ತಿಗೆಗಳ (ಹಾಯಿಸ್ಟ್) ನಿರ್ಮಾಣ ಮತ್ತು ಸ್ಥಾಪನೆ	13	12
4.	ಎಲಿವೇಟರುಗಳು (ಲಿಫ್ಟ್‌ಗಳು) ಮತ್ತು ತಿರುಗು ಮೆಟ್ಟಲುಗಳ (ಎಸ್ಕಲೇಟರ್‌ಗಳ) ನಿರ್ಮಾಣ ಮತ್ತು ಸ್ಥಾಪನೆ.	13	12
5.	ರೋಲಿಂಗ್ ಷಟರುಗಳ ಮತ್ತು ಮಡುಚುವ ಗೇಟುಗಳ ನಿರ್ಮಾಣ ಮತ್ತು ಸ್ಥಾಪನೆ.	13	12
6.	ಕಟ್ಟಡ, ಸೇತುವೆ, ರಸ್ತೆ ಇತ್ಯಾದಿ ನಿರ್ಮಾಣಗಳಂಥ ಸಿವಿಲ್ ಕಾಮಗಾರಿಗಳು.	13	12
7.	ಬಾಗಿಲುಗಳು, ಬಾಗಿಲು ಚೌಕಟ್ಟುಗಳು, ಕಿಟಕಿಗಳು, ಕಿಟಕಿಗಳ ಚೌಕಟ್ಟುಗಳು ಮತ್ತು ಗ್ರಿಲ್‌ಗಳ ಸ್ಥಾಪನೆ.	13	12
8. (i)	ಮೊಸಾಯಿಕ್ ಟೈಲ್ಸ್‌ಗಳ ಸರಬರಾಜು ಮತ್ತು ಜೋಡಣೆ	13	12
(ii)	ಅಮೃತಶಿಲೆ ಚಪ್ಪಡಿ, ನಯಗೊಳಿಸಿದ ಗ್ರಾನೈಟ್ ಕಲ್ಲುಗಳು ಮತ್ತು ಟೈಲುಗಳು (ಮೊಸಾಯಿಕ್ ಟೈಲುಗಳನ್ನು ಹೊರತುಪಡಿಸಿ) ಸರಬರಾಜು ಮತ್ತು ಜೋಡಣೆ	13	12
(iii)	ಉಪ ಕಲಮು (i) ಮತ್ತು (ii) ರಲ್ಲಿರುವ ವಸ್ತುಗಳನ್ನು ಹೊರತುಪಡಿಸಿ ಕಲ್ಲುಗಳು, ಚಪ್ಪಡಿಗಳು ಮತ್ತು ಶೀಟುಗಳ ಸರಬರಾಜು ಮತ್ತು ಜೋಡಣೆ.	5	4

1.	2	3	4
9.	ಡೀಪ್-ಫ್ರೀಜರ್ಸ್, ಶೈತ್ಯಾಗಾರ ಸ್ಥಾವರಗಳು ಹವ ಸಾಂದ್ರೀಕರಣ ಸ್ಥಾವರಗಳು ಮತ್ತು ಹವನಿಸ್ಸಾಂದ್ರೀಕರಣಗಳೂ ಸೇರಿದಂತೆ ಹವಾನಿಯಂತ್ರಣ ಸಾಧನ ಸಾಮಗ್ರಿಗಳ ಸರಬರಾಜು ಮತ್ತು ಸ್ಥಾಪನೆ.	13	12
10.	ಹವಾ ನಿಯಂತ್ರಕಗಳು ಮತ್ತು ಹವಾಶೀತಕಗಳನ್ನು ಸರಬರಾಜು ಮಾಡುವುದು ಮತ್ತು ಸ್ಥಾಪಿಸುವುದು.	13	12
11.	ಟ್ರಾನ್ಸ್‌ಫಾರ್ಮರ್‌ಗಳನ್ನು ಒಳಗೊಂಡಂತೆ ವಿದ್ಯುತ್ ಸಾಧನಗಳ ಸರಬರಾಜು ಮತ್ತು ಜೋಡಣೆ.	13	12
12.	ಒಳ ಅಲಂಕಾರಗಳ ಕರಾರುಗಳನ್ನು ಒಳಗೊಂಡಂತೆ ಪೀಠೋಪಕರಣಗಳು ಮತ್ತು ಜೋಡಣೆಗಳು ವಿಭಾಗಕಗಳನ್ನು ಸರಬರಾಜು ಮಾಡುವುದು ಮತ್ತು ಸ್ಥಾಪಿಸುವುದು.	13	12
13.	ರೈಲ್ವೆ ಸರಬರಾಜು ಮಾಡಿದ ಒಳಗಾಡಿಗಳ ಮೇಲೆ ರೈಲ್ವೆ ಕೋಚ್‌ಗಳ ನಿರ್ಮಾಣ.	13	12
14.	ಹರಿಗೋಲುಗಳು, ದೋಣಿಗಳು, ಜಗ್ಗು ಹಡಗುಗಳು, ಬಲೆದೋಣಿಗಳು ಮತ್ತು ಹೂಳೆತ್ತುವ ಯಂತ್ರಗಳ ನಿರ್ಮಾಣವನ್ನು ಒಳಗೊಂಡು ಹಡಗು ಮತ್ತು ದೋಣಿಯನ್ನು ನಿರ್ಮಿಸುವುದು.	13	12
15.	ಕೊಳಾಯಿ ಕೆಲಸಕ್ಕಾಗಿ ಚರಂಡಿ ವ್ಯವಸ್ಥೆ ಇತ್ಯಾದಿಗಳಿಗಾಗಿ ನೈರ್ಮಲ್ಯ ಜೋಡಣೆಗಳ ಸರಬರಾಜು ಮತ್ತು ಸ್ಥಾಪನೆ.	13	12
16.	ಬಣ್ಣ ಬಳಿಯುವುದು ಮತ್ತು ಹೊಳಪು ಮಾಡುವುದು.	13	12
17.	ವಿಮಾನಗಳು ಮತ್ತು ಹೆಲಿಕಾಪ್ಟರುಗಳ ನಿರ್ಮಾಣ, ದುರಸ್ತಿ, ಮೇಲ್ಪಾಟು ಮತ್ತು ಪೂರ್ಣ ದುರಸ್ತಿ.	13	12
18.	ಮೋಟಾರು ವಾಹನಗಳ ಮೈಕಟ್ಟು ನಿರ್ಮಾಣ ಮತ್ತು ಟ್ರೈಲರುಗಳ ನಿರ್ಮಾಣ.	13	12
19.	ಸಲಕರಣೆಗಳು, ಸ್ಥಾವರ ಮತ್ತು ಯಂತ್ರಗಳ, ಸಾಧನಗಳ, ಉಪಕರಣಗಳ ಅಥವಾ ಕಟ್ಟಡಗಳ ಇನ್ಸುಲೇಷನ್ ಮತ್ತು ಲೈನಿಂಗ್.	13	12

1.	2	3	4
20.	ಮೇಲಿನ ಕ್ರಮಸಂಖ್ಯೆ 15 ರಲ್ಲಿ ಹೇಳಿರುವ ಉದ್ದೇಶಕ್ಕೆ ಹೊರತುಪಡಿಸಿ ಕೊಳವೆಗಳ (ಉಕ್ಕಿನ ಕೊಳವೆ ಹೊರತಾಗಿ) ನ್ನು ಒದಗಿಸುವುದು ಮತ್ತು ಜೋಡಿಸುವುದು.	13	12
21.	ಉಪಕರಣಗಳ, ಸಲಕರಣೆಗಳ, ಸಾಧನಗಳ ಅಥವಾ ಯಂತ್ರಗಳ ಮತ್ತು ಸ್ಥಾವರಗಳ ಪೂರ್ಣ ಸೇವೆ ಮತ್ತು ನಿರ್ವಹಣೆ.	13	12
22.	ಲೋಹದ ಅನಿಲ ಸಿಲಿಂಡರುಗಳ ದುರಸ್ತಿ, ಪರೀಕ್ಷೆ ಮತ್ತು ನಿರ್ಮಾಣ.	5	4
23.	ಟೈರು ರೀಟ್ರೇಡ್ ಮಾಡುವುದು.	13	12
24.	ಫೋಟೋ ನೆಗೆಟಿವ್ಸ್ ಮತ್ತು ಫೋಟೋ ಪ್ರಿಂಟ್‌ಗಳು, ಫೋಟೋಗ್ರಾಫ್‌ಗಳ ಸಂಸ್ಕರಣೆ ಮತ್ತು ಸರಬರಾಜು.	13	12
25.	ಎಲೆಕ್ಟ್ರಾನಿಕ್ ಸಾಧನಗಳ, ಸಲಕರಣೆಗಳ, ಚಾಲಕಗಳು, ಉಪಕರಣಗಳು ಮತ್ತು ಡಿವೈಸುಗಳನ್ನು ಒದಗಿಸುವುದು ಮತ್ತು ಸ್ಥಾಪಿಸುವುದು.	13	12
26.	ಅಗ್ನಿಶಾಮಕ ಸಲಕರಣೆಗಳು ಮತ್ತು ಡಿವೈಸುಗಳನ್ನು ಒದಗಿಸುವುದು ಮತ್ತು ಸ್ಥಾಪಿಸುವುದು.	13	12
27.	ಎಲೆಕ್ಟ್ರೋಪ್ಲೇಟಿಂಗ್, ಎಲೆಕ್ಟ್ರೋಗ್ಯಾಲ್ವನೈಸಿಂಗ್, ಆನೋಡೈಸಿಂಗ್ ಮತ್ತು ಆ ತರಹದವು.	5	4
28.	ಸರಕುಗಳ ಬಾಟಲಿಂಗ್, ಕ್ಯಾನಿಂಗ್ ಮತ್ತು ಪ್ಯಾಕಿಂಗ್.	5	4
29.	ಲ್ಯಾಮಿನೀಕರಣ, ರಬ್ಬರೀಕರಣ, ಲೇಪನ ಮತ್ತು ಅದೇ ತರಹದ ಸಂಸ್ಕರಣೆಗಳು.	13	12
30.	ಮುದ್ರಣ ಮತ್ತು ಪಡಿ ಅಚ್ಚು ತಯಾರಿಕೆ.	13	12
31.	ತೂಕದ ಯಂತ್ರಗಳು ಮತ್ತು ತೂಕದ ಸೇತುವೆಗಳ ಸರಬರಾಜು ಮತ್ತು ಸ್ಥಾಪನೆ.	13	12
32.	ಸಬ್‌ಮರ್ಸಿಬಲ್ ಮತ್ತು ಸೆಂಟ್ರಿಫ್ಯೂಗಲ್ ಪಂಪುಸೆಟ್ಟುಗಳ ಸರಬರಾಜು ಮತ್ತು ಸ್ಥಾಪನೆ.	13	12

1.	2	3	4
33.	ಬಟ್ಟೆಗಳಿಗೆ ಬಣ್ಣ ಹಾಕುವುದು ಮತ್ತು	13	12
	ಮುದ್ರಿಸುವುದು.	13	12
34.	ಮೋಟಾರು ವಾಹನಗಳ ಮೇಲೆ ಟ್ಯಾಂಕರುಗಳ ನಿರ್ಮಾಣ.	13	12
35.	ವೆನಿಷಿಯನ್ ಬ್ಲೈಂಡ್ಸ್ ಮತ್ತು ಬಲೆಗಳು ಸೇರಿದಂತೆ, ಬಾಗಿಲು ಮತ್ತು ಕಿಟಕಿಗಳ ತೆರೆಗಳನ್ನು ಸರಬರಾಜು ಮಾಡುವುದು ಮತ್ತು ಸ್ಥಾಪಿಸುವುದು.	5	1
36.(i)	ಬಹುಮೂಲ್ಯ ಅಥವಾ ಅರೇ ಬಹುಮೂಲ್ಯ ಹರಳುಗಳು ಜೋಡಿಸದ ಚಿನ್ನ ಮತ್ತು ಬೆಳ್ಳಿಯ ವಸ್ತುಗಳ ತಯಾರಿಕೆ ಅಥವಾ ಸಂಸ್ಕರಣೆ ಮತ್ತು ಸರಬರಾಜು.	5	1
(ii)	ಬಹುಮೂಲ್ಯ ಅಥವಾ ಅರೇ ಬಹುಮೂಲ್ಯ ಹರಳುಗಳು ಜೋಡಿಸಿರುವ ಚಿನ್ನ ಮತ್ತು ಬೆಳ್ಳಿಯ ವಸ್ತುಗಳ ತಯಾರಿಕೆ ಅಥವಾ ಸಂಸ್ಕರಣೆ ಮತ್ತು ಸರಬರಾಜು.	5	4
37.	ಸಿನಿಮಾಟೋಗ್ರಾಫಿಕ್ ಫಿಲಮುಗಳ ಸಂಸ್ಕರಣೆ, ಮುದ್ರಣ ಮತ್ತು ಸರಬರಾಜು.	13	12
38.	ಧ್ವನಿ ನಿರೋಧಕ ಮತ್ತು ಇದಕ್ಕೆ ಸಂಬಂಧಿಸಿದ ಕೆಲಸಗಳು.	13	12
39.	ತಂಪು ಗೋಪುರಗಳ (ಕೂಲಿಂಗ್ ಟವರ್ಸ್)	13	12
	ಸರಬರಾಜು ಮತ್ತು ಸ್ಥಾಪನೆ.	13	12
40.	ದಪ್ಪ ಜಲ್ಲಿ ಕಲ್ಲುಗಳ ಸರಬರಾಜು ಮತ್ತು ಹರಡುವಿಕೆ.	13	12
41.	ವಿದ್ಯುತ್ ಮೋಟಾರ್‌ಗಳ ರೀವೈಂಡಿಂಗ್.		
42.	ಮೇಲಿನ ವರ್ಗಗಳಲ್ಲಿ ನಮೂದಿಸಿಲ್ಲದ ಮಿಕ್ಕೆಲ್ಲಾ ಗುತ್ತಿಗೆ ಕಾಮಗಾರಿಗಳು.	13	12
43.	ಮೇಲಿನ ವರ್ಗಗಳಲ್ಲಿನ ಎರಡು ಅಥವಾ ಮೂರು ಗುತ್ತಿಗೆಗಳು ಸೇರಿರುವ ಸಂಯುಕ್ತ ಗುತ್ತಿಗೆ ಕಾಮಗಾರಿ.		

ಅನುಬಂಧ - III

(ಪ್ಯಾರಾ 99 ಮತ್ತು 103)

ತೆರಿಗೆ ವಿನಾಯಿತಿ ಮತ್ತು ರಿಯಾಯಿತಿ ಪ್ರಸ್ತಾಪಿಸಲಾಗಿರುವ ಸರಕುಗಳು

ಕ್ರಮ ಸಂಖ್ಯೆ	ಸರಕುಗಳ ಹೆಸರು	ಉದ್ದೇಶಿತ ತೆರಿಗೆ ದರ (%)
1.	2	3
1	ವಿಭೂತಿ	ವಿನಾಯಿತಿ
2	ರಾಖಿಗಳು	ವಿನಾಯಿತಿ
3	ಕರವಸ್ತ್ರಗಳು	ವಿನಾಯಿತಿ
4	ಒಣ ದ್ರಾಕ್ಷಿ	ವಿನಾಯಿತಿ
5	ಮೂರು ಲಕ್ಷ ರೂಪಾಯಿಗಳ ಬಂಡವಾಳವಿರುವ ಎಣ್ಣೆಗಾಣಗಳು ಖರೀದಿಸುವ ಕುಸುಬೆ ಕಾಳುಗಳು	ವಿನಾಯಿತಿ
6	ಕಿರಾಣಾ ವಸ್ತುಗಳು	4
7	ಪ್ಲಾಸ್ಟಿಕ್ ವೋವನ್ ಸ್ಯಾಕ್ಸ್ ಮತ್ತು ಲ್ಯಾಮಿನೇಟೆಡ್ ವೋವನ್ ಸ್ಯಾಕ್ಸ್‌ಗಳು	1
8	ಟೀ (ಬ್ರಾಂಡಿಲ್ಲದ ಮತ್ತು ಬ್ರಾಂಡಿರುವ)	12
9	ಹೇರ್‌ಪಿನ್ನುಗಳ, ಹೇರ್‌ಕ್ಲಿಪ್‌ಗಳ, ಹೇರ್‌ಬ್ಯಾಂಡ್‌ಗಳು ಮತ್ತು ಬೇಬಿಕ್ಲಿಪ್‌ಗಳು	4
10	ಸ್ಕೂಲುಗಳಿಗೆ ಮಾರಾಟ ಮಾಡಿದ ಬ್ಯಾಂಡ್‌ಸೆಟ್ಟುಗಳು	4
11	ಹುಣಿಸೆಹಣ್ಣು	1
12	ಬ್ರಾಂಡಿರುವ ಕಸಪೊರಕೆಗಳು	812.5
13	ಸಂಗೀತ ವಾದ್ಯಗಳು	12
14	ಪ್ಲಾಸ್ಟಿಕ್ ವಸ್ತುಗಳು	12
15	ಮಿಠಾಯಿಗಳು	12
16	ಮಂಗಳೂರು ಹೆಂಚುಗಳು ಮತ್ತು ಏಣುಗಳು	1
17	ಎಲೆಕ್ಟ್ರಾನಿಕ್ ಆಟಿಕೆಗಳು	12
18	ಆಭರಣಗಳು	1
19	ತಯಾರಕರಿಗೆ ಮಾರಾಟ ಮಾಡುವ ತಾಮ್ರದ ಕಂಬಿಗಳು	1
20	ನಮೂನೆ 37ರ ಆಧಾರ ಮೇಲೆ ಮಾರಾಟ ಮಾಡುವ ಒರಟು ಗ್ರಾನೈಟ್ ಕಲ್ಲು	4

ಅನುಬಂಧ - IV

(ಪ್ಯಾರಾ 102)

ಉದ್ದೇಶಿತ ಸರಳೀಕರಣ ಕ್ರಮಗಳು

ಕ್ರಮ ಸಂಖ್ಯೆ	ಸರಳೀಕರಣ ಕ್ರಮದ ವಿವರ
1	2
1.	ಐವತ್ತು ಲಕ್ಷ ರೂಪಾಯಿಗಳಿಗೂ ಹೆಚ್ಚಿನ ವಾರ್ಷಿಕ ತೆರಿಗೆ ಪಾವತಿಸುವ ಹೊಸ ವಹಿವಾಟುದಾರರು ತಮ್ಮದೇ ಸಾಗಣೆ ಪತ್ರಗಳನ್ನು ಬಳಸಲು ಅನುಮತಿ ನೀಡಿಕೆ.
2.	ಮಾರಾಟದಿಂದಲ್ಲದ ಸರಕು ಸಾಗಾಣಿಕೆಗೆ ವಹಿವಾಟುದಾರರು ತಮ್ಮದೇ ಸಾಗಣೆ ಪತ್ರಗಳನ್ನು ಒಂದು ಜಿಲ್ಲಾ ಮಿತಿಯೊಳಗೆ ಬಳಸಲು ಅನುಮತಿ ನೀಡಿಕೆ.
3.	ಐದು ಲಕ್ಷ ರೂಪಾಯಿಗಳಿಗೂ ಹೆಚ್ಚಿನ ವಾರ್ಷಿಕ ತೆರಿಗೆ ಪಾವತಿಸುವ ಸಣ್ಣ ಕೈಗಾರಿಕಾ ಘಟಕಗಳು ತಮ್ಮ ಸರಕುಗಳನ್ನು ತನಿಖಾಠಾಣೆಗಳಲ್ಲಿ ಒದಗಿಸಲಾಗಿರುವ ವಿಶೇಷ ಕೌಂಟರ್‌ಗಳ ಮೂಲಕ ತ್ವರಿತ ಪರಿಶೀಲನೆಗೆ ಒಳಪಡಿಸಲು ಅವರಿಗೆ ಸುವರ್ಣ ಪತ್ರ ಸೌಲಭ್ಯ ವಿಸ್ತರಣೆ.
4.	ಪ್ರಾಮಾಣಿಕ ತೆರಿಗೆ ಪಾವತಿದಾರರನ್ನು ಗುರುತಿಸಿ ಮತ್ತು ಅವರನ್ನು ಗೌರವಿಸಲು ಕ್ರಮ.
5.	ವಿವಿಧ ದಂಡಗಳನ್ನು ವಿಧಿಸಲು ಸಮಯವನ್ನು ನಿಗದಿಪಡಿಸುವಿಕೆ.
6.	ವರ್ತಕರು ಕೋರಿದ ನೋಂದಣಿಯನ್ನು ನೀಡಲು ಸಮಯವನ್ನು ನಿಗದಿಪಡಿಸುವಿಕೆ.
7.	ತಪ್ಪುಗಳನ್ನು ಸರಿಪಡಿಸಲು ಕೋರಿ ವರ್ತಕರು ಸಲ್ಲಿಸಿದ ಅರ್ಜಿಗಳನ್ನು ವಿಲೇವಾರಿ ಮಾಡಲು ಸಮಯವನ್ನು ನಿಗದಿಪಡಿಸುವಿಕೆ.
8.	ವಾಣಿಜ್ಯ ಸಂಘಗಳು ನೀಡಿದ ಅರ್ಜಿಯ ಮೇರೆಗೆ ಸ್ಪಷ್ಟೀಕರಣ ನೀಡುವ ಅವಕಾಶ ನೀಡಿಕೆ.
9.	ಸ್ವಯಂ ಕರನಿರ್ಧರಣೆಗೆ ಲೆಕ್ಕ ಪುಸ್ತಕಗಳ ಪರಿಶೋಧನಾ ವರದಿಯ ನಿಬಂಧನೆಯ ರದ್ದು.
10.	ಮೊದಲ ಬಾರಿಯ ಅಪರಾಧಗಳ ಬಗ್ಗೆ ನಿಗದಿ ಮಾಡಿರುವ ರಾಜಿ ಮೊತ್ತಗಳಲ್ಲಿ ಇಳಿತ.

ಅನುಬಂಧ - V

(ಪ್ಯಾರಾ 104)

ಉದ್ದೇಶಿತ ಸುಧಾರಣಾ ಕ್ರಮಗಳು

ಕ್ರಮ ಸಂಖ್ಯೆ	ಸುಧಾರಣ ಕ್ರಮ / ಮಾರ್ಪಾಟಿನ ವಿವರ
1.	2
1.	ಸ್ಪಷ್ಟೀಕರಣ ಮತ್ತು ಪೂರ್ವಭಾವಿ ನಿರ್ಣಯ ಪ್ರಾಧಿಕಾರದ ಆದೇಶಗಳನ್ನು ಪೂರ್ವಾನ್ವಯವಾಗುವಂತೆ ಆಯುಕ್ತರ ಪುನರ್ ಪರಿಶೀಲನೆಗೆ ಒಳಪಡಿಕೆಗೆ ನಿಯಮ.
2.	ಸ್ಪಷ್ಟೀಕರಣ ಮತ್ತು ಪೂರ್ವಭಾವಿ ನಿರ್ಣಯ ಪ್ರಾಧಿಕಾರವು ಆದೇಶ ನೀಡಲು ನಿಗದಿ ಮಾಡಿರುವ ಸಮಯವನ್ನು ತೊಂಬತ್ತು ದಿನಗಳಿಗೆ ವಿಸ್ತರಣೆ.
3.	ತನಿಖಾಠಾಣೆಗಳನ್ನು ಉದ್ದೇಶಪೂರ್ವಕವಾಗಿ ತಪ್ಪಿಸಿ ರಾಜ್ಯದಲ್ಲಿ ಸಾಗಾಣೆಯಾಗುವ ಸರಕುಗಳ ಮೇಲೆ ದಂಡ ವಿಧಿಸಲು ಅವಕಾಶ.
4.	ಟ್ರಾನ್ಸಿಟ್ ಪರ್ಮಿಟ್ ಒಪ್ಪಿಸದ ಪ್ರಕರಣಗಳಲ್ಲಿ ಸರಕು ವಾಹನದ ಮಾಲೀಕ ಮತ್ತು ಸಾಗಣೆದಾರರ ಮೇಲೆ ಜಂಟಿ ಹೊಣೆಗಾರಿಕೆ ನಿಗದಿ.
5.	ಪ್ರಥಮ ಮೇಲ್ಮನವಿ ಅಧಿಕಾರಿಗಳ ಮೇಲ್ಮನವಿ ಕರನಿರ್ಧರಣೆಯನ್ನು ಮರು ವಿಲೇವಾರಿಗೆ ವಾಪಸ್ಸು ಕಳುಹಿಸುವ (ರಿಮಾಂಡ್) ಅಧಿಕಾರ ಹಿಂತೆದುಕೊಳ್ಳಲು ಹಾಗೂ ತಡೆ ಕೋರಿಕೆ ಅರ್ಜಿಯನ್ನು ವಿಲೇವಾರಿ ಮಾಡಲು ಮತ್ತು ಅಂತಿಮ ಆದೇಶಗಳನ್ನು ನೀಡಲು ಸಮಯ ನಿಗದಿ ನಿಯಮ.
6.	ವಿವಾದಿತ ತೆರಿಗೆಯ ಅರ್ಧದಷ್ಟನ್ನು ಪಾವತಿ ಮಾಡಿದ ನಂತರವಷ್ಟೇ ಮೇಲ್ಮನವಿ ನ್ಯಾಯಮಂಡಳಿ ಮೇಲ್ಮನವಿಯನ್ನು ಸ್ವೀಕರಿಸುವ ನಿಬಂಧನೆ ನಿಯಮ.
7.	ತನಿಖಾಠಾಣೆಗಳಲ್ಲಿ ದಂಡ ವಿಧಿಸಿದ ಪ್ರಕರಣಗಳಲ್ಲಿ ಬ್ಯಾಂಕ್ ಗ್ಯಾರಂಟಿ ಒದಗಿಸಿದಲ್ಲಿ ವಿಧಿಸಿದ ದಂಡದ ವಸೂಲಿಯ ಬಗ್ಗೆ ಪ್ರಸ್ತುತವಿರುವ ಸ್ವಯಂಚಾಲಿತ ತಡೆ ನಿಯಮದ ಹಿಂತೆಗೆತ.
8.	ಸರ್ಕಾರದ ಇಲಾಖೆಗಳು ಮತ್ತು ಇತರರಿಗೆ ಗುತ್ತಿಗೆ ಕಾಮಗಾರಿಗಳನ್ನು ನಿರ್ವಹಿಸಿದ ಬಗ್ಗೆ ಮೂಲದಲ್ಲಿಯೇ ತೆರಿಗೆ ಕಡಿತಗೊಳಿಸುವ ನಿಯಮದ ಪುನಃ ಜಾರಿ.
9.	ಆಯುಕ್ತರ ಅನುಮತಿಯೊಂದಿಗೆ ಮಾತ್ರ ಈಗಾಗಲೇ ಹೂಡಿದ ಮೊಕದ್ದಮೆಗಳನ್ನು ಹಿಂತೆಗೆದುಕೊಳ್ಳಲು ನಿಯಮ.
10.	ಮರುಪಾವತಿಯ ಬಗ್ಗೆಯ ಬಡ್ಡಿ ದರವನ್ನು ಶೇಕಡಾ 12 ರಿಂದ ಶೇಕಡಾ 6ಕ್ಕೆ ಇಳಿತ.

1.	2
11.	ಲೇಖನ ಸಾಮಗ್ರಿಗಳ ಬಗ್ಗೆ ಇರುವ ನಮೂದನ್ನು ಅದೇ ತರಹದ ಆದರೆ ಅನುಸೂಚಿಯಲ್ಲಿಲ್ಲದ ಸರಕುಗಳೆಂದು ತೆರಿಗೆಗೆ ಒಳಪಡುತ್ತಿರುವ ಸರಕುಗಳನ್ನು ಒಳಗೊಳ್ಳುವಂತೆ ಮಾಡಲು ತಿದ್ದುಪಡಿ.
12.	ಯಾವುದೇ ವಹಿವಾಟಿನ ಮಿತಿಯಿಲ್ಲದೆ ಗುತ್ತಿಗೆದಾರರನ್ನು ನೋಂದಣಿ ಮತ್ತು ತೆರಿಗೆ ಭಾಧ್ಯತೆಗೆ ಒಳಪಡಿಸಲು ನಿಯಮ.
13.	ಕಂಪನಿಗಳ ಶಾಖೆಗಳಿಗೆ ಪ್ರತ್ಯೇಕ ನೋಂದಣಿ ನೀಡುವ ಅವಕಾಶವನ್ನು ಮತ್ತೆ ಒದಗಿಸಲು ನಿಯಮ.
14.	ಗುಪ್ತವಾರ್ತೆ ವಿಭಾಗದ ಅಧಿಕಾರಿಗಳ ತಾತ್ಕಾಲಿಕ ಕರನಿರ್ಧರಣೆ ಬಗ್ಗೆ ಸಮಯ ನಿಗದಿ ಮಾಡಲು ಮತ್ತು ಸದ್ರಿ ಅಧಿಕಾರವನ್ನು ಕರನಿರ್ಧರಣಾ ಅಧಿಕಾರಿಗಳಿಗೆ ಸಮಾನವಾದ ಅಧಿಕಾರಿಗಳಿಗೆ ಮಾತ್ರ ನೀಡಲು ನಿಯಮ.
15.	ಅಧಿಸೂಚನೆಗಳಡಿಯಲ್ಲಿ ನೀಡಲಾದ ತೆರಿಗೆ ರಿಯಾಯಿತಿ ದುರುಪಯೋಗದ ಬಗ್ಗೆ ದಂಡ ವಿಧಿಸಲು ಗುಪ್ತವಾರ್ತೆ ಅಧಿಕಾರಿಗಳಿಗೆ ಅಧಿಕಾರ ನೀಡಿಕೆ.

ಅನುಬಂಧ - VI

(ಪ್ಯಾರಾ 98 ಮತ್ತು 105)

ತೆರಿಗೆ ದರ ಏರಿಕೆಗೆ ಉದ್ದೇಶಿಸಿರುವ ಸರಕುಗಳು

ಕ್ರಮ ಸಂಖ್ಯೆ	ಸರಕುಗಳ ಹೆಸರು	ಪ್ರಸ್ತುತ ತೆರಿಗೆ ದರ (%)	ಉದ್ದೇಶಿತ ತೆರಿಗೆ ದರ (%)
1	2	3	4
1.	ವನಸ್ಪತಿ	5	8
2.	ಗೋಡಂಬಿ ಬೀಜ	5	8
3.	ಗೋಧಿಯ ಹಿಟ್ಟು, ಮೈದಾ ಮತ್ತು ರವೆ.	2	4
4.	ಸಿಗರೇಟು ಫಿಲ್ಟರುಗಳು.	13	16
5.	ಕಂಪ್ಯೂಟರ್ ಕನ್ಸೂಮಬಲ್‌ಗಳು	5	8
6.	ಕಂಪ್ಯೂಟರ್‌ಗಳು, ಕಂಪ್ಯೂಟರ್ ಸಾಫ್ಟ್‌ವೇರ್ (ಕಂಪ್ಯೂಟರ್ ಸಾಫ್ಟ್‌ವೇರ್ ರೂಪಿಸಿ ಸರಬರಾಜು ಮಾಡುವ ಗುತ್ತಿಗೆ ಕಾಮಗಾರಿ ಸೇರಿ), ಪೆರಿಫರಲ್‌ಗಳು ಮತ್ತು ಕ್ಲೀನಿಂಗ್ ಕಿಟ್ಟುಗಳು	5	12

1.	2	3	4
7.	ಎರಡನೇ ಅನುಸೂಚಿಯ ಯಾವುದೇ ಇತರ ನಮೂದಿನ ಅಡಿಯಲ್ಲಿ ಬಾರದ ದುರ್ಗಂಧ ನಿವಾರಕಗಳು, ಸೋಂಕು ನಿವಾರಕಗಳು, ಜೀವಾಣು ನಾಶಕಗಳು.	13	16
8.	ಡಿಕ್ಟಾ ಫೋನುಗಳು ಮತ್ತು ಧ್ವನಿ ಮುದ್ರಣದ ಅಂಥ ಇತರ ಉಪಕರಣಗಳು ಮತ್ತು ಅದರ ಭಾಗಗಳು.	13	16
9.	ಎಲೆಕ್ಟ್ರಾನಿಕ್ ಡೈರಿಗಳು ಮತ್ತು ಅದರ ಭಾಗಗಳು ಮತ್ತು ಉಪಸಾಧನಗಳು 37.5 ವ್ಯಾಟ್‌ಗಿಂತ ಹೆಚ್ಚಿಲ್ಲದ ಡಿ.ಸಿ.ಮೈಕ್ರೋ ಮೋಟಾರ್‌ಗಳು ಮತ್ತು ಸ್ಟೆಪ್ಪರ್ ಮೋಟಾರ್‌ಗಳು ಮತ್ತು ಅವುಗಳ ಭಾಗಗಳು, ಫಿಕ್ಸೆಡ್ ವೇರಿಯಬಲ್ ಅಥವಾ ಅಡ್ಜಸ್ಟಬಲ್ (ಪ್ರೀಸೆಟ್) ಎಲೆಕ್ಟ್ರಿಕಲ್ ಕೆಪಾಸಿಟರ್‌ಗಳು ಮತ್ತು ಅವುಗಳ ಬಿಡಿಭಾಗಗಳು, ರಿಯೋಸ್ಟಾಟ್ ಮತ್ತು ಪೊಟೆನ್‌ಶಿಯೋ ಮೀಟರ್‌ಗಳನ್ನು ಒಳಗೊಂಡಂತೆ ಎಲೆಕ್ಟ್ರಿಕಲ್ ರೆಸಿಸ್ಟರ್‌ಗಳು, (ಹೀಟಿಂಗ್ ರೆಸಿಸ್ಟರ್‌ಗಳನ್ನು ಹೊರತುಪಡಿಸಿ), ಪ್ರಿಂಟೆಡ್ ಸರ್ಕೀಟ್‌ಗಳು, ಎಲೆಕ್ಟ್ರಾನಿಕ್ ಇಂಟೆಗ್ರೇಟೆಡ್ ಸರ್ಕೀಟ್‌ಗಳು ಮತ್ತು ಮೈಕ್ರೋ ಅಸೆಂಬ್ಲಿಗಳು, ಆಪ್ಟಿಕಲ್ ಫೈಬರ್ ಕೇಬಲ್‌ಗಳು, ಆಪ್ಟಿಕಲ್ ಫೈಬರ್ ಮತ್ತು ಆಪ್ಟಿಕಲ್ ಫೈಬರ್ ಬಂಡಲ್‌ಗಳು ಮತ್ತು ಕೇಬಲ್‌ಗಳು, ಲಿಕ್ವಿಡ್ ಕ್ರಿಸ್ಟಲ್ ಡಿವೈಸರ್‌ಗಳು, ಫ್ಲಾಟ್ ಪ್ಯಾನೆಲ್ ಡಿಸ್‌ಪ್ಲೇ ಡಿವೈಸ್‌ಗಳು ಮತ್ತು ಅದರ ಬಿಡಿಭಾಗಗಳು, ನೋಂದಾಯಿತ ವ್ಯಾಪಾರಿಗಳಿಗೆ ಮಾರಿದ ಎಲೆಕ್ಟ್ರಾನಿಕ್ ವಸ್ತುಗಳು ಮತ್ತು ಎಲೆಕ್ಟ್ರಾನಿಕ್ ಟೂಲುಗಳು.	5	12
10.	ಎರಡನೇ ಅನುಸೂಚಿಯ ಯಾವುದೇ ಇತರ ನಮೂದಿನ ಅಡಿಯಲ್ಲಿ ಬರುವ ವಸ್ತುಗಳನ್ನು ಬಿಟ್ಟು ಎಲೆಕ್ಟ್ರಾನಿಕ್ ವಸ್ತುಗಳು ಮತ್ತು ಅವುಗಳ ಭಾಗಗಳು ಮತ್ತು ಉಪಸಾಧನಗಳು.	13	16
11.	ಫ್ಯಾಕ್ಸ್ ಮೆಷಿನ್‌ಗಳು, ಅದರ ಭಾಗಗಳು ಮತ್ತು ಉಪಸಾಧನಗಳು	13	16

1.	2	3	4
12.	ಫೈಬರ್ ಗ್ಲಾಸಿನ ಶೀಟುಗಳು ಮತ್ತು ಹೆಲ್‌ಮೆಟ್‌ಗಳನ್ನು ಬಿಟ್ಟು ಫೈಬರ್ ಗ್ಲಾಸಿನ ವಸ್ತುಗಳು.	13	16
13.	ಅಡುಗೆಗೆ ಹಾಗೂ ಬಡಿಸಲು ಉಪಯೋಗಿಸುವ ಶಾಖನಿರೋಧಕ ಲೇಪನದ ಅಡುಗೆ ಪಾತ್ರೆಗಳು.	13	16
14.	ಅಲ್ಯೂಮಿನಿಯಂ ಅಥವಾ ಕಬ್ಬಿಣೇತರ ಲೋಹಗಳಿಂದ ಮಾಡಿದ ಮತ್ತು ಅಂಟು ನಿರೋಧಕ ಲೇಪನದ ಅಡುಗೆ ಪಾತ್ರೆಗಳು.	13	16
15.	ಎಲ್ಲಾ ಬಗೆಯ ತೂಕದ ಯಂತ್ರಗಳು.	13	16
16.	ಚಾಕ್ಷುಷ ವಸ್ತುಗಳು ಬೈನಾಕುಲರ್‌ಗಳು, ಓಪೆರ ಗ್ಲಾಸ್‌ಗಳು, ಟೆಲಿಸ್ಕೋಪ್ ಗಳು, ಮೈಕ್ರೋಸ್ಕೋಪ್‌ಗಳು, ಮತ್ತು ಅವುಗಳ ಭಾಗಗಳು ಹಾಗೂ ಉಪಸಾಧನಗಳು, ಲೆನ್ಸ್ ಕೇರ್ ಸಲೂಷನ್	13	16
17.	ಪ್ರತಿಯೊಂದು ಬಗೆಯ ಪ್ಲೇಯಿಂಗ್ ಕಾರ್ಡುಗಳು (ಇಸ್ಪೀಟ್ ಎಲೆಗಳು)	13	16
18.	ಸುಗಂಧಿತ ಸುಪಾರಿ	13	16
19.	ಎರಡನೇ ಅನುಸೂಚಿಯಲ್ಲಿ ನಮೂದಿಸಿಲ್ಲದ ಇತರೆ ಸ್ಟೈನ್‌ಲೆಸ್ ಸ್ಟೀಲ್ ವಸ್ತುಗಳು	13	16
20.	ಕಾಕಂಬಿ.	25	28
21.	ಪಾನ್ ಮಸಾಲ ಮತ್ತು ತಂಬಾಕು ಪದಾರ್ಥಗಳು	25	28
22.	ಓಪಿಯಂ, ಗಾಂಜಾ, ಭಾಂಗ್ ಮತ್ತಿತರ ಮಾದಕ ವಸ್ತುಗಳು	25	28
23.	ಸಿಮೆಂಟ್	15	20 (ಪ್ರವೇಶ ತೆರಿಗೆ ಇಲ್ಲದೆ)
24.	ಡೀಸೆಲ್	17.5	20
25.	ಸಣ್ಣ ಧಾರಕಗಳಲ್ಲಿ ಮಾರಾಟ ಮಾಡುವ ಬ್ರಾಂಡಿಲ್ಲದ ಕೊಬ್ಬರಿ ಎಣ್ಣೆ	4	20
26.	ಸೀಮೆ ಎಣ್ಣೆ (ಪಡಿತರ ಹಂಚಿಕೆ ಯೋಜನೆಯಡಿಯಲ್ಲಿ ಬರದ)	16	20

ಅನುಬಂಧ - VII

(ಪ್ಯಾರಾ 105)

ಸೆಸ್ ವಿಧಿಸಲು ಉದ್ದೇಶಿಸಿರುವ ಸರಕುಗಳು

ಕ್ರಮ ಸಂಖ್ಯೆ	ಸರಕುಗಳ ವಿವರ
1	2
1.	ಇಟ್ಟಿಗೆಗಳು
2.	ಇದ್ದಿಲು
3.	ತೆಂಗಿನ ನಾರಿನಿಂದ ತಯಾರಿಸಿದ ವಸ್ತುಗಳು
4.	ತಾಮ್ರದ ಗಟ್ಟಿಗಳು ಮತ್ತು ತಾಮ್ರದ ತಂತಿ (ಇನ್ಸುಲೇಟೆಡ್ ತಂತಿಗಳನ್ನು ಬಿಟ್ಟು)
5.	ಎರಡನೇ ಅನುಸೂಚಿಯ ಎಫ್ ಭಾಗದ ಕ್ರಮಸಂಖ್ಯೆ 10-ಎ ರಡಿಯಲ್ಲಿ ಬರುವ ಅರಣ್ಯ ಉತ್ಪನ್ನಗಳು.
6.	ಕೈಗಾರಿಕಾ ಕಚ್ಚಾ ವಸ್ತುಗಳಾಗಿ ಖರೀದಿಸಿದ ಅಥವಾ ಮಾರಾಟ ಮಾಡಿದ ಹಾಗೂ ಪುನರ್ 5ಎ ರಡಿಯಲ್ಲಿ ತೆರಿಗೆ ಭಾಧ್ಯವಾಗುವ ಸರಕುಗಳು.
7.	ಜಿಪ್ಸಮ್
8.	ಸುಣ್ಣ
9.	ಲೋಹದ ಕ್ಯಾಪ್‌ಗಳು ಮತ್ತು ಲೋಹದ ದೀಪದ ಕ್ಯಾಪ್‌ಗಳು
10.	ಎಲ್ಲಾ ತರಹದ ಗಿರಣಿ ನೂಲು
11.	ಶಹಾಬಾದ್ ಮತ್ತು ಕಡಪಾ ಕಲ್ಲುಗಳು, ಚಪ್ಪಡಿಗಳು ಮತ್ತು ಟೈಲ್ಸ್‌ಗಳು.

ಅನುಬಂಧ - VIII

(ಪ್ಯಾರಾ 123)

ಹೋಟೆಲ್‌ಗಳು ಮತ್ತು ಲಾಡ್ಜಿಂಗ್ ಹೌಸ್‌ಗಳ ಮೇಲೆ ಪ್ರಸ್ತಾವಿತ ವಿಲಾಸ ತೆರಿಗೆ ದರಗಳು

ಕ್ರಮ ಸಂಖ್ಯೆ	ಪ್ರತಿದಿನದ ಬಾಡಿಗೆ	ಪ್ರಸ್ತಾವಿತ ವಿಲಾಸ ತೆರಿಗೆ
1.	2	3
1.	ರೂ.150 ಕ್ಕಿಂತ ಹೆಚ್ಚು ಆದರೆ ರೂ.400 ಗಳಿಗಿಂತ ಕಡಿಮೆ	ಶೇಕಡ 4
2.	ರೂ.400 ಕ್ಕಿಂತ ಹೆಚ್ಚು ಆದರೆ ರೂ.1000 ಗಳಿಗಿಂತ ಕಡಿಮೆ	ಶೇಕಡ 8
3.	ರೂ.1000 ಮತ್ತು ಅದಕ್ಕಿಂತ ಹೆಚ್ಚು	ಶೇಕಡ 12

ಅನುಬಂಧ - 9 (ಪ್ಯಾರಾ 133)

ಭಾಗ-ಎ-5

ಪ್ರಕರಣ 3 (1)ನ್ನು ನೋಡಿ

ಮೋಟಾರು ಕಾರು, ಜೀಪು, ಆಮ್ನಿ ಬಸ್ ಮತ್ತು ಖಾಸಗಿ ಸೇವಾ ವಾಹನಗಳಿಗೆ ಹಾಲಿ ಇರುವ ಜೀವಾವಧಿ ತೆರಿಗೆ

ಐಟಂ ಸಂ.	ವಾಹನದ ವರ್ಗ	ವಾಹನದ ಮೌಲ್ಯ ರೂ. 10 ಲಕ್ಷ ಮೀರದ ಮೋ.ಕಾರು, ಜೀಪು ಹಾಗೂ ನೆಲ ವಿಸ್ತೀರ್ಣ 5 ಚ.ಮೀ.ಗೆ ಮೀರದ ಆಮ್ನಿ ಬಸ್ ಮತ್ತು ಖಾಸಗಿ ಸೇವಾ ವಾಹನ	ವಾಹನದ ಮೌಲ್ಯ ರೂ. 10 ಲಕ್ಷ ಮೀರಿದ ಮೋ.ಕಾರು, ಜೀಪು ಹಾಗೂ ನೆಲ ವಿಸ್ತೀರ್ಣ 5 ಚ.ಮೀ.ಗೆ ಮೀರದ ಆಮ್ನಿ ಬಸ್ ಮತ್ತು ಖಾಸಗಿ ವಾಹನ
ಎ	ಹೊಸ ವಾಹನ ನೋಂದಣಿಯ ಸಮಯದಲ್ಲಿ	ವಾಹನದ ಮೌಲ್ಯದ ಮೇಲೆ ಶೇ. 9	ವಾಹನದ ಮೌಲ್ಯದ ಮೇಲೆ ಶೇ. 10
ಬಿ	ವಾಹನದವು ಈಗಾಗಲೇ ನೋಂದಣಿಯಾಗಿದ್ದಲ್ಲಿ ಹಾಗೂ ಅದರ ವಯಸ್ಸು ವಾಹನ ನೋಂದಣಿಯಾದ ತಿಂಗಳಿನಿಂದ	ಉಪವಾಕ್ಯ ಎ ರಲ್ಲಿ ವಿಧಿಸಿರುವ ಜೀವಾವಧಿ ತೆರಿಗೆಯಲ್ಲಿ	ಉಪವಾಕ್ಯ ಎ ರಲ್ಲಿ ವಿಧಿಸಿರುವ ಜೀವಾವಧಿ ತೆರಿಗೆಯಲ್ಲಿ
1	2 ವರ್ಷಗಳಿಗೆ ಮೀರದ	ಶೇ. 93 ರಷ್ಟು	ಶೇ. 93 ರಷ್ಟು
2	2 ವರ್ಷಗಳಿಗೆ ಮೀರಿದ, 3 ವರ್ಷಗಳಿಗೆ ಮೀರದ	87	87
3	3 ವರ್ಷಗಳಿಗೆ ಮೀರಿದ, 4 ವರ್ಷಗಳಿಗೆ ಮೀರದ	81	81
4	4 ವರ್ಷಗಳಿಗೆ ಮೀರಿದ, 5 ವರ್ಷಗಳಿಗೆ ಮೀರದ	75	75
5	5 ವರ್ಷಗಳಿಗೆ ಮೀರಿದ, 6 ವರ್ಷಗಳಿಗೆ ಮೀರದ	69	69
6	6 ವರ್ಷಗಳಿಗೆ ಮೀರಿದ, 7 ವರ್ಷಗಳಿಗೆ ಮೀರದ	64	64
7	7 ವರ್ಷಗಳಿಗೆ ಮೀರಿದ, 8 ವರ್ಷಗಳಿಗೆ ಮೀರದ	59	59
8	8 ವರ್ಷಗಳಿಗೆ ಮೀರಿದ, 9 ವರ್ಷಗಳಿಗೆ ಮೀರದ	54	54
9	9 ವರ್ಷಗಳಿಗೆ ಮೀರಿದ, 10 ವರ್ಷಗಳಿಗೆ ಮೀರದ	49	49
10	10 ವರ್ಷಗಳಿಗೆ ಮೀರಿದ, 11 ವರ್ಷಗಳಿಗೆ ಮೀರದ	45	45

1	2	3	4
11	11 ವರ್ಷಗಳಿಗೆ ಮೀರಿದ, 12 ವರ್ಷಗಳಿಗೆ ಮೀರದ	41	41
12	12 ವರ್ಷಗಳಿಗೆ ಮೀರಿದ, 13 ವರ್ಷಗಳಿಗೆ ಮೀರದ	37	37
13	13 ವರ್ಷಗಳಿಗೆ ಮೀರಿದ, 14 ವರ್ಷಗಳಿಗೆ ಮೀರದ	33	33
14	14 ವರ್ಷಗಳಿಗೆ ಮೀರಿದ, 15 ವರ್ಷಗಳಿಗೆ ಮೀರದ	29	29
15	15 ವರ್ಷಗಳಿಗೆ ಮೀರಿದ	25	25

ಟಿಪ್ಪಣಿ :-

1. ಯಾವ ವಾಹನಗಳಿಗೆ ದಿನಾಂಕ 1-4-2003ರ ಮುಂಚಿನ ಜೀವಾವಧಿ ತೆರಿಗೆ ಬಾಕಿ ಪಾವತಿಯಾಗಿಲ್ಲವೋ ಅಂತಹ ವಾಹನಗಳಿಗೆ ಆ ದಿನಾಂಕಕ್ಕೆ ಮುಂಚಿತ ಜಾರಿಯಲ್ಲಿದ್ದ ತೆರಿಗೆ ದರದಲ್ಲಿ ಹಾಗೂ ದಂಡ ಇದ್ದಲ್ಲಿ ದಂಡದೊಂದಿಗೆ ವಸೂಲಿಸುವುದು.
2. ಹೊರ ರಾಜ್ಯದ ಮೋಟಾರು ಕಾರು, ಜೀಪು 5 ಚ.ಮೀ. ನೆಲ ವಿಸ್ತೀರ್ಣ ಮೀರದ ಆಮ್ನಿ ಬಸ್ ಮತ್ತು ಖಾಸಗಿ ಸೇವಾ ವಾಹನಗಳು ದಿನಾಂಕ 1-4-2003ಕ್ಕಿಂತ ಮುಂಚೆ ನೋಂದಣಿಯಾಗಿದ್ದು, ನಂತರದ ದಿನಗಳಲ್ಲಿ ಕರ್ನಾಟಕ ರಾಜ್ಯಕ್ಕೆ ವಲಸೆ ಬಂದಿದ್ದಲ್ಲಿ ಅಂತಹ ವಾಹನಗಳಿಗೆ ಆ ದಿನಾಂಕದ ಮುಂಚೆ ಪ್ರಚಲಿತದಲ್ಲಿದ್ದ ಭಾಗ-ಎ 5 ರಲ್ಲಿದ್ದಂತೆ ತೆರಿಗೆ ದರವನ್ನು ವಿಧಿಸುವುದು.
3. ದಿನಾಂಕ 1-4-2003 ರಂದು ಹಾಗೂ ನಂತರದಲ್ಲಿ ನೋಂದಣಿಯಾದ ವಾಹನಗಳಿಗೆ ಈ ಅಂಕಣದಡಿ ತೆರಿಗೆ ವಿಧಿಸುವ ಸಲುವಾಗಿ ವಾಹನ ಖರೀದಿಯ ಇನ್‌ವಾಯ್ಸ್ ಅನ್ನು ಸಲ್ಲಿಸುವುದು. ಒಂದು ವೇಳೆ ಸಲ್ಲಿಸದಿದ್ದಲ್ಲಿ ಕರ್ನಾಟಕ ರಾಜ್ಯದಲ್ಲಿ ದಿ 1-4-2003 ರಂದು ಜಾರಿಯಲ್ಲಿದ್ದ ತೆರಿಗೆ ದರವನ್ನು ವಿಧಿಸುವುದು.

ಭಾಗ-ಎ-5

ಪ್ರಕರಣ 3 (1)ನ್ನು ನೋಡಿ

ಮೋಟಾರು ಕಾರು, ಜೀಪು, ಆಮ್ನಿ ಬಸ್ ಮತ್ತು ಖಾಸಗಿ ಸೇವಾ ವಾಹನಗಳಿಗೆ ಉದ್ದೇಶ ಜೀವಾವಧಿ ತೆರಿಗೆ

ಐಟಂ ಸಂ	ವಾಹನದ ವರ್ಗ	ರೂ. 5 ಲಕ್ಷ ಮೌಲ್ಯ ಮೀರದ ಮೋ.ಕಾರು, ಜೀಪು ಹಾಗೂ ನೆಲವಿಸ್ತೀರ್ಣ 5 ಚ.ಮೀ. ಮೀರದ ಆಮ್ನಿ ಬಸ್ ಮತ್ತು ಖಾಸಗಿ ಸೇವಾ ವಾಹನ	ರೂ. 5 ಲಕ್ಷ ಮೌಲ್ಯ ಮೀರಿದ ಆದರೆ ರೂ. 10 ಲಕ್ಷ ಮೀರದ ಮೋ.ಕಾರು ಜೀಪು ಹಾಗೂ ನೆಲವಿಸ್ತೀರ್ಣ 5 ಚ.ಮೀ. ಮೀರದ ಆಮ್ನಿ ಬಸ್ ಮತ್ತು ಖಾಸಗಿ ಸೇವಾ ವಾಹನ	ರೂ. 10 ಲಕ್ಷ ಮೌಲ್ಯ ಮೀರಿದ ಮೋ.ಕಾರು, ಜೀಪು ಹಾಗೂ ನೆಲವಿಸ್ತೀರ್ಣ 5 ಚ.ಮೀ. ಮೀರದ ಆಮ್ನಿ ಬಸ್ ಮತ್ತು ಖಾಸಗಿ ಸೇವಾ ವಾಹನ
ಎ	ಹೊಸ ವಾಹನ ನೋಂದಣಿಯ ಸಮಯದಲ್ಲಿ	ವಾಹನದ ಮೌಲ್ಯದ ಮೇಲೆ ಶೇ. 9	ವಾಹನದ ಮೌಲ್ಯದ ಮೇಲೆ ಶೇ. 10	ವಾಹನದ ಮೌಲ್ಯದ ಮೇಲೆ ಶೇ. 12
ಬಿ	ವಾಹನವು ಈಗಾಗಲೇ ನೋಂದಣಿಯಾಗಿದ್ದಲ್ಲಿ ಆದರ ವಯಸ್ಸು ವಾಹನ ನೋಂದಣಿಯಾದ ತಿಂಗಳಿನಿಂದ	ಹಾಗೂ ಉಪವಾಕ್ಯ ಎ ರಲ್ಲಿ ವಿಧಿಸಿರುವ ಜೀವಾವಧಿ ತೆರಿಗೆಯಲ್ಲಿ	ಉಪವಾಕ್ಯ ಎ ರಲ್ಲಿ ವಿಧಿಸಿರುವ ಜೀವಾವದಿ ತೆರಿಗೆಯಲ್ಲಿ	ಉಪವಾಕ್ಯಎ ರಲ್ಲಿ ವಿಧಿಸಿರುವ ಜೀವಾವಧಿ ತೆರಿಗೆಯಲ್ಲಿ
1	2 ವರ್ಷಗಳಿಗೆ ಮೀರದ	93%	93%	93%
2	2 ವರ್ಷಗಳಿಗೆ ಮೀರಿದ, 3 ವರ್ಷಗಳಿಗೆ ಮೀರದ	87%	87%	87%
3	3 ವರ್ಷಗಳಿಗೆ ಮೀರಿದ, 4 ವರ್ಷಗಳಿಗೆ ಮೀರದ	81%	81%	81%
4	4 ವರ್ಷಗಳಿಗೆ ಮೀರಿದ, 5 ವರ್ಷಗಳಿಗೆ ಮೀರದ	75%	75%	75%
5	5 ವರ್ಷಗಳಿಗೆ ಮೀರಿದ, 6 ವರ್ಷಗಳಿಗೆ ಮೀರದ	69%	69%	69%
6	6 ವರ್ಷಗಳಿಗೆ ಮೀರಿದ, 7 ವರ್ಷಗಳಿಗೆ ಮೀರದ	64%	64%	64%
7	7 ವರ್ಷಗಳಿಗೆ ಮೀರಿದ, 8 ವರ್ಷಗಳಿಗೆ ಮೀರದ	59%	59%	59%

1	2	3	4	5
8	8 ವರ್ಷಗಳಿಗೆ ಮೀರಿದ, 9 ವರ್ಷಗಳಿಗೆ ಮೀರದ	54%	54%	54%
9	9 ವರ್ಷಗಳಿಗೆ ಮೀರಿದ, 10 ವರ್ಷಗಳಿಗೆ ಮೀರದ	49%	49%	49%
10	10 ವರ್ಷಗಳಿಗೆ ಮೀರಿದ, 11 ವರ್ಷಗಳಿಗೆ ಮೀರದ	45%	45%	45%
11	11 ವರ್ಷಗಳಿಗೆ ಮೀರಿದ, 12 ವರ್ಷಗಳಿಗೆ ಮೀರದ	41%	41%	41%
12	12 ವರ್ಷಗಳಿಗೆ ಮೀರಿದ, 13 ವರ್ಷಗಳಿಗೆ ಮೀರದ	37%	37%	37%
13	13 ವರ್ಷಗಳಿಗೆ ಮೀರಿದ, 14 ವರ್ಷಗಳಿಗೆ ಮೀರದ	33%	33%	33%
14	14 ವರ್ಷಗಳಿಗೆ ಮೀರಿದ, 15 ವರ್ಷಗಳಿಗೆ ಮೀರದ	29%	29%	29%
15	15 ವರ್ಷಗಳಿಗೆ ಮೀರಿದ	25%	25%	25%

ಟಿಪ್ಪಣಿ :-

1. ಯಾವ ವಾಹನಗಳಿಗೆ ದಿನಾಂಕ 1-4-2003ರ ಮುಂಚಿನ ಜೀವಾವಧಿ ತೆರಿಗೆ ಬಾಕಿ ಪಾವತಿಯಾಗಿಲ್ಲವೋ ಅಂತಹ ವಾಹನಗಳಿಗೆ ಆ ದಿನಾಂಕಕ್ಕೆ ಮುಂಚಿತ ಜಾರಿಯಲ್ಲಿದ್ದ ತೆರಿಗೆ ದರದಲ್ಲಿ ಹಾಗೂ ದಂಡದೊಂದಿಗೆ ವಸೂಲಿಸುವುದು.
2. ಹೊರ ರಾಜ್ಯದ ಮೋಟಾರು ಕಾರು, ಜೀಪು 5 ಚ.ಮೀ. ನೆಲ ವಿಸ್ತೀರ್ಣ ಮೀರದ ಆಮ್ನಿ ಬಸ್ ಮತ್ತು ಖಾಸಗಿ ಸೇವಾ ವಾಹನಗಳು ದಿನಾಂಕ 1-4-2003ಕ್ಕಿಂತ ಮುಂಚೆ ನೋಂದಣಿಯಾಗಿದ್ದು, ನಂತರದ ದಿನಗಳಲ್ಲಿ ಕರ್ನಾಟಕ ರಾಜ್ಯಕ್ಕೆ ವಲಸೆ ಬಂದಿದ್ದಲ್ಲಿ ಅಂತಹ ವಾಹನಗಳಿಗೆ ಆ ದಿನಾಂಕದ ಮುಂಚೆ ಪ್ರಚಲಿತದಲ್ಲಿದ್ದ ಭಾಗ-ಎ 5 ರಲ್ಲಿದ್ದಂತೆ ತೆರಿಗೆ ದರವನ್ನು ವಿಧಿಸುವುದು.
3. ದಿನಾಂಕ 1-4-2003 ರಂದು ಹಾಗೂ ನಂತರದಲ್ಲಿ ನೋಂದಣಿಯಾದ ವಾಹನಗಳಿಗೆ ಈ ಅಂಕಣದಡಿ ತೆರಿಗೆ ವಿಧಿಸುವ ಸಲುವಾಗಿ ವಾಹನ ಖರೀದಿಯ ಇನ್‌ವಾಯ್ಸ್ ಅನ್ನು ಸಲ್ಲಿಸುವುದು. ಒಂದು ವೇಳೆ ಸಲ್ಲಿಸದಿದ್ದಲ್ಲಿ ಕರ್ನಾಟಕ ರಾಜ್ಯದಲ್ಲಿ ದಿ 1-4-2003 ರಂದು ಜಾರಿಯಲ್ಲಿದ್ದ ತೆರಿಗೆ ದಠವನ್ನು ವಿಧಿಸುವುದು.
4. ಮೇಲಿನ ಅಂಕಣದಲ್ಲಿ ನಮೂದಿಸಲಾದ ತೆರಿಗೆ ದರಗಳು ಕೇಂದ್ರ ಸರ್ಕಾರಿ ನೌಕರರು, ಹಾಗೂ ರಕ್ಷಣಾ ಸಿಬ್ಬಂದಿಯವರು ಹೊಂದಿರುವ ವಾಹನಗಳಿಗೆ ಅನ್ವಯವಾಗುವುದಿಲ್ಲ.

ಜಮೆ - ರೂಪಾಯಿ ಎಷ್ಟು ಭಾಗ ಯಾವುದರಿಂದ




ವೆಚ್ಚ (ಯೋಜನೆ ಮತ್ತು ಯೋಜನೇತರ)
ರೂಪಾಯಿ ಯಾವ ಬಾಬಿಗೆ ಎಷ್ಟೆಷ್ಟು?
ಇತರ ಸಾಮಾನ್ಯ ಸೇವೆಗಳು, 24 ಪೈಸೆ
ಇತರ ಸಾಮಾಜಿಕ ಸೇವೆಗಳು, 4 ಪೈಸೆ
ಇತರ ಆರ್ಥಿಕ ಸೇವೆಗಳು, 16 ಪೈಸೆ
ಸಾಲ ತೀರಿಕೆ, 17 ಪೈಸೆ
ಶಿಕ್ಷಣ, 14 ಪೈಸೆ
ಆರೋಗ್ಯ, 4 ಪೈಸೆ
ಸಮಾಜ ಕಲ್ಯಾಣ, 4 ಪೈಸೆ
ಕೃಷಿ, 5 ಪೈಸೆ
ಗ್ರಾಮೀಣ ಅಭಿವೃದ್ಧಿ, 2 ಪೈಸೆ
ನೀರಾವರಿ, 8 ಪೈಸೆ
ನೀರು ಪೂರೈಕೆ ಮತ್ತು ನೈರ್ಮಲ್ಯ, 2 ಪೈಸೆ


2003-04
9000
8000
7000
6000
5000
4000
3000
2000
1000
0
7648.67, 61%
2303.84, 18%
880.39, 7%
1354.00, 11%
401.62, 3%


ವಲಯವಾರು (ಯೋಜನಾ) ವೆಚ್ಚ 2003-04
(ಕೋಟಿ ರೂಪಾಯಿಗಳಲ್ಲಿ)
ಇತರೆ, 953.17, 10%
ಕೃಷಿ ಮತ್ತು ಸಂಬಂಧಿತ ಚಟುವಟಿಕೆಗಳು, 487.71, 5%
ಸಾರಿಗೆ, 1295.66, 13%
ಗ್ರಾಮೀಣ ಅಭಿವೃದ್ಧಿ, 338.04, 3%
ವಸತಿ ಮತ್ತು ನಗರಾಭಿವೃದ್ಧಿ, 1028.57, 11%
ನೀರು ಪೂರೈಕೆ ಮತ್ತು ನೈರ್ಮಲ್ಯ 703.67, 7%
ನೀರಾವರಿ ಮತ್ತು ಪ್ರವಾಹ ನಿಯಂತ್ರಣ, 3002.16, 31%
ಆರೋಗ್ಯ ಮತ್ತು ಕುಟುಂಬ ಕಲ್ಯಾಣ, 139.74, 1%
ಶಿಕ್ಷಣ, ಕ್ರೀಡೆಗಳು, ಕಲೆ ಮತ್ತು ಸಂಸ್ಕೃತಿ, 565.27, 6%
ಕೈಗಾರಿಕೆ ಮತ್ತು ಖನಿಜಗಳು, 165.77, 2%
ಇಂಧನ, 1099.99, 11%